
# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟಂಬರ್ 2021




ಬಿಡಿ ಪ್ರತಿ: ರೂ. 10/-

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 38
ಸಂಚಿಕೆ - 12
ಸೆಪ್ಟಂಬರ್ - 2021

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಚಂದ್ರನಲ್ಲೂ ಇಡ್ಲಿ, ವಡೆ | ಸಿ.ಆರ್. ಸತ್ಯ | 5 |
| ನೋ ರಿಗ್ರೆಟ್ಸ್ | ನಳಿನಿ ಸೂರ್ಯಪ್ರಕಾಶ್ | 8 |
| ಪುಸ್ತಕ ಪರಿಚಯ | ನಳಿನಿ. ಟಿ. ಭೀಮಪ್ಪ | 12 |
| "ತಂತ್ರ'ಜ್ಞಾನ | ಗೋಪಾಲಕೃಷ್ಣ ಹೆಚ್ ಎನ್ | 13 |
| ಮದುವೆಯ ಗಾಸಿಪ್ | ವಿ.ಗಣೇಶ್ | 16 |
| ಅಯ್ಯೋ ಶಿವನೇ | ಹರಿಪ್ರಸಾದ್ ಎ.ಆರ್. | 19 |
| ವಿದ್ಯಾಮಂದಿರದಲ್ಲಿ... | ಎಚ್. ಡುಂಡಿರಾಜ್ | 23 |
| ಮತ್ತೆ ರಾಯರು ಬಂದರು | ಎಚ್.ಆರ್.ಹನುಮಂತ ರಾವ್ | 21 |
| ಬಾಯಿ ಮುಚ್ಕೊಳ್ಳಪ್ಪಾ | ವೈ.ಎನ್. ಗುಂಡೂರಾವ್ | 25 |
| ತುಂತುರು | ದಂಡಳ | 28 |
| ಫೇಸ್ಬುಕ್ | ಅಮೃತವರ್ಷಿಣಿ ವಿ.ಎಲ್. | 30 |
| ಬ್ರಹ್ಮಂಗೆ ಅಡ್ವೈಸರಿ | ಕೆ.ಎಸ್. ಸೋಮೇಶ್ವರ | 31 |
| ಪಿಕ್ ಪಾಕೆಟ್ ಪೇಚಾಟಗಳು | ಸೂರ್ಯನಾರಾಯಣ ಎಚ್. | 32 |
| ವಟ ವಟ ಸಾವಿತ್ರಿ | ಆರತಿ ಘಟಿಕಾರ್ | 37 |

ಮುಖಪುಟ :ಇಂಟರ್‌ನೆಟ್ ಕೃಪೆ
ವ್ಯಂಗ್ಯಚಿತ್ರ: ಶೃಂಗೇರಿ ಸತೀಶ್, ಆದರ್ಶ ಪೈ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belurushe ramamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram

Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

ಅನಧಿಕೃತ ಬಡಾವಣೆಗಳಿಗೆ ತಡೆ – ಬಿಡಿಎ ಆಯುಕ್ತರು

**ಅರಣ್ಯ ರೋದನ ಎಂದರೆ ಇದೇ ಇರಬಹುದು !!**

*****

**ಗ್ರೀಕ್ ಪುರಾಣದ ಅಶ್ವವೊಂದು ಇಷ್ಟು ಗೊಂದಲ ಮಾಡಬಹುದೇ ಅಂದು ಅಪರಂಜಿ ಅಚ್ಚರಿ ಪಟ್ಟಳಂತೆ !?**

******

ಚೋಪ್ರಾ ಅವರ ಚಿನ್ನದ ಪದಕಕ್ಕೆ ಮೂವತ್ತು ಪರ್ಸೆಂಟ್ ತೆರಿಗೆ – ಸುದ್ದಿ

**ಸದ್ಯ ಇನ್ನೂ ಹೆಚ್ಚು ಕೇಳಲಿಲ್ಲವಲ್ಲ ಅಂತ ಅಪರಂಜಿ ಪಲುಕಿದಳಂತೆ !!**

*****

ಕ್ಯಾಪ್ಟನ್ ವಿರೋಧದ ನಡುವೆಯೂ ಸಿಧು ಬ್ಯಾಟಿಂಗ್ !

**ಇದನ್ನ " ಕ್ರೀಡಾ ರಾಜಕೀಯ" ಎನ್ನಬಹುದೇ ?**

********

ಪ್ರೇತಗಳ ಸಾಮೂಹಿಕ ವಿವಾಹ. – ಪತ್ರಿಕೆ

**ಮುಹೂರ್ತ ಯಾರು ನಿರ್ಧರಿಸಿದರೋ ತಿಳಿಯದಲ್ಲ ?!?**

*******

ನರೇಂದ್ರ ಮೋದಿ ಅವರ ಸಂಪುಟ ಸ್ವಾಗತಿಸಿದ ಶ್ರೀ ದೇವೇಗೌಡರು – ಪತ್ರಿಕೆ

**" ಗುಣಕ್ಕೆ ಮತ್ಸರವಿಲ್ಲ ! " ಎಂದು ಅಪರಂಜಿ ಉದ್ಗರಿಸಿದಳಂತೆ !!**

*****


ಸುಪ್ರೀಂ ಕೋರ್ಟಿನಿಂದ ನಿವೃತ್ತಿ ಆದ ನಾರಿಮನ್ ಅವರನ್ನು ಮುಖ್ಯ ನ್ಯಾಯಾಧೀಶ ರಮಣ ಅವರು "ನ್ಯಾಯದ ಸಿಂಹ" ಎಂದು ಶ್ಲಾಘಿಸಿದ್ದಾರೆ. – ಪತ್ರಿಕೆ

**ಇದರಿಂದ ಇಬ್ಬರೂ ಹಲವು ಹಂತ ಮೇಲೇರಿದ್ದಾರೆ !!**

# "ನಮ್ಮ ನಿಮ್ಮಲ್ಲಿ"

♦ **ಶಿವಕುಮಾರ್**

ಈ ಬಾರಿ ಅಪರಂಜಿಯ ಮಡಿಲು ಪುಸ್ತಕಗಳ ಬೊನಾನ್ಸಾದಿಂದ ತುಂಬಿದೆ. ಅಪರಂಜಿಯ ಬರಹಗಾರ ಬಳಗದ ಇಬ್ಬರು ಮಹನೀಯರ ಪುಸ್ತಕಗಳು ನಮ್ಮ ಕೈಸೇರಿವೆ. ಮೊದಲಿಗೆ ಶ್ರೀ ಸಿ.ಆರ್ ಸತ್ಯ ಅವರ ಪುಸ್ತಕ, "ತ್ರಿಮುಖಿ". ಎರಡನೆಯ ಪುಸ್ತಕ, " ಹೀಗೊಂದು ಕುಟುಂಬದ ಕಥೆ ". ಇದನ್ನು ಬರೆದವರು ಶ್ರೀ ಪಾಲಹಳ್ಳಿ ವಿಶ್ವನಾಥ್. ಇವರೀರ್ವರೂ ನಮ್ಮ ಬರಹಗಾರ ಬಳಗದವರೆಂಬ ಸದರದಲ್ಲಿ ನಾವೆಲ್ಲರೂ ಇವರುಗಳೊಡನೆ ಇಷ್ಟು ದಿನ ಬಹು ಸಲಿಗೆಯಿಂದ ಇದ್ದದ್ದು, ಇರುವುದು ನಿಜ. ಆದರೆ ಈ ಪುಸ್ತಕಗಳನ್ನು ಓದಿದಮೇಲೆ ಇಂತಹ ಪ್ರತಿಭಾವಂತರೊಡನೆ ಇನ್ನೂ ಸ್ವಲ್ಪ ಗೌರವ ಗಾಂಭೀರ್ಯ ದಿಂದ ನಡೆದುಕೊಳ್ಳಬೇಕಾಗಿತ್ತೇನೋ ಅನ್ನಿಸುವಷ್ಟು ಚೆನ್ನಾಗಿರುವ ಪುಸ್ತಕಗಳಿವು.




**ಮೊದಲಿಗೆ ಬಾಹ್ಯಾಕಾಶ ವಿಜ್ಞಾನಿಯಾಗಿರುವ ಸತ್ಯ ಅವರ ಬಹುಮುಖ ಪ್ರತಿಭೆ, ವಿನಯ, ವಿವೇಕ ಇವುಗಳನ್ನು ಹಾಸ್ಯದ ಬಾಳೆಲೆಯಲ್ಲಿ ಉಣಬಡಿಸಿಟ್ಟ ಪುಸ್ತಕ ತ್ರಿಮುಖಿ.** ನಮ್ಮ ನಾಡಿನ ಬಾಹ್ಯಾಕಾಶ ಕ್ಷಿಪಣಿಗಳ ವಿಜ್ಞಾನದ ವಿಕಸನಕ್ಕೆ ಶ್ರೀ ಕಲಾಮ್‌ರವರೊಡನೆ ಕೈಜೋಡಿಸಿ ಅಡಿಪಾಯವಿಟ್ಟಿದ್ದು ಸತ್ಯರವರು. ಆ ಪ್ರಾರಂಭದ ದಿನಗಳ ಬಗ್ಗೆ ಓದಿದಾಗ ನನಗೆ ನನ್ನ ಎಚ್.ಎಂ. ಟಿ ದಿನಗಳು ನೆನಪಿಗೆ ಬಂದವು. ಒಂದು ಹೊಸ ವೈಜ್ಞಾನಿಕ ಕ್ಷೇತ್ರದಲ್ಲಿ ಕೆಲಸ ಪ್ರಾರಂಭಿಸಿದಾಗ ಒಂದು ಉಲ್ಲಾಸಯುತ ಉತ್ಸಾಹ, ಜಗತ್ತನ್ನೇ ಗೆಲ್ಲುವ ಹುಚ್ಚು ಧೈರ್ಯ, ಇವೆಲ್ಲಾ ತಾನಾಗಿಯೇ ಮೂಡುತ್ತವೆ. ಈ ಅಮೂಲ್ಯ ಅನುಭವಗಳನ್ನೆಲ್ಲಾ ತಮ್ಮ ಪಳಗಿದ ಲೇಖಣಿಯಿಂದ ಸತ್ಯ ನಮ್ಮ ಮುಂದೆ ಬಿಚ್ಚಿಟ್ಟಿದ್ದಾರೆ. ಕಾಂಪೊಸಿಟ್ ಮಟೀರಿಯಲ್ಸ್ ತಯಾರಿಸಲು ಸತ್ಯ ವಿನ್ಯಾಸಗೊಳಿಸಿದ ಯಂತ್ರವನ್ನು ಶ್ರೀಮತಿ ಇಂದಿರಾ ಗಾಂಧಿ ಉದ್ಘಾಟಿಸುವ ದೃಶ್ಯವಂತೂ ಇಷ್ಟು ದೂರದ ಕಾಲಾವಧಿಯಲ್ಲೂ ಸಹಾ ಎದೆಯುಬ್ಬುವಂತೆ ಮಾಡಿತು. ಬಾಹ್ಯಾಕಾಶ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಸತ್ಯರವರು ಕನ್ನಡದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿರುವುದು ಕನ್ನಡಿಗರ ಭಾಗ್ಯ. ಈ ಪುಸ್ತಕದ ಮೂರು ಭಾಗಗಳಲ್ಲಿ ಮೊದಲ ಭಾಗ ಈ ವೈಜ್ಞಾನಿಕ ಸಾಹಸಗಳಿಗೆ ಮೀಸಲು. ಎರಡನೆಯ ಭಾಗ ಸತ್ಯರವರ ದೇಶ ವಿದೇಶ ಯಾತ್ರೆಗಳ ಬಹು ಶ್ರೀಮಂತ ಅನುಭವಗಳ ಸ್ವಾರಸ್ಯಮಯ ದಾಖಲೆ. ಮೂರನೆಯ ಭಾಗ ಸತ್ಯರವರ ಇತರ ಶ್ಲಾಘನೀಯ ಆಸಕ್ತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಇವರ ವೈವಿಧ್ಯಮಯ ಆಸಕ್ತಿಗಳಲ್ಲಿ ನನಗೆ ಬಹುವಾಗಿ ಪ್ರಿಯವಾದದ್ದು ಮಕ್ಕಳಿಗೆ ವೈಜ್ಞಾನಿಕ ವಿಷಯಗಳನ್ನು ಅರ್ಥವಾಗುವಂತೆ ಸಹಾಯಕವಾಗುವ ಮಾಡೆಲ್ ಅಥವಾ ಪ್ರಾತ್ಯಕ್ಷಿಕೆಗಳ ನಿರ್ಮಾಣ. ಈ ತಾಂತ್ರಿಕ

ಮಾದರಿಗಳು ವಿಜ್ಞಾನದ ಕಲಿಕೆಗೆ ನಿಜಕ್ಕೂ ಒಂದು ಮೌಲ್ಯಯುತ ಕೊಡುಗೆ. ಸತ್ಯರ ಪುಸ್ತಕವನ್ನು ನಮ್ಮ ಯುವ ಜನತೆ ಓದಿ ಪ್ರಭಾವಿತರಾಗಲಿ ಎಂದು ಅಪರಂಜಿ ಹಾರೈಸುತ್ತಾಳೆ.




**"ಹೀಗೊಂದು ಕುಟುಂಬದ ಕಥೆ" ಪುಸ್ತಕದ ಲೇಖಕ ಪಾಲಹಳ್ಳಿ ವಿಶ್ವನಾಥ್ ಅಪರಂಜಿಯ ಓದುಗರಿಗೆ ತಮ್ಮ "ಅಲ್ಪ ಸ್ವಲ್ಪ ವುಡ್‌ಹೌಸ್" ಲೇಖನ ಸರಣಿಯ ಮೂಲಕ ಪರಿಚಿತರು.** ಈ ಪುಸ್ತಕ ಅವರ ಕುಟುಂಬದ ಸದಸ್ಯರ ಗಾಥೆ. ತಾಯಿನಾಡು ಕನ್ನಡ ದೈನಿಕದ ಸಂಸ್ಥಾಪಕರಾದ ಶ್ರೀ. ಪಿ.ಆರ್ ರಾ ಮಯ್ಯ ಇವರ ತಂದೆ. ಖ್ಯಾತ ಅರ್ಥ ಶಾಸ್ತ್ರಜ್ಞ ಶ್ರೀ. ಪಿ.ಆರ್ ಬ್ರಹ್ಮಾನಂದ ಇವರ ಸೋದರ. ಜನಪ್ರಿಯ ಸಮಾಜ ಸೇವಿಕೆ ಶ್ರೀಮತಿ ಪಿ.ಆರ್ ಜಯಲಕ್ಷ್ಮಮ್ಮ ಇವರ ತಾಯಿ, ಸ್ವತಃ ವಿಶ್ವನಾಥರೇ ಕಾಸ್ಮಿಕ್ ಕಿರಣಗಳು, ಕಣಭೌತ ವಿಜ್ಞಾನ ಈ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಮಾಡಿರುವ ಪ್ರತಿಭಾವಂತ ವಿಜ್ಞಾನಿ, ಸೋದರಿ ಶ್ರೀಮತಿ ರಾಮೇಶ್ವರಿ ಪ್ರಸಿದ್ಧ ರಂಗತಜ್ಞೆ, ಇಂತಹ ಪ್ರತಿಭಾವಂತ ಕುಟುಂಬವೊಂದು ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಅದರ ಸದಸ್ಯರ ಪ್ರತಿಭೆಯಿಂದಾಗಿ ನಾಡಿನ ಸಾಂಸ್ಕೃತಿಕ ಬೆಳವಣಿಗೆಗೆ ಅನನ್ಯ ಕೊಡುಗೆ ನೀಡಿದ ಸಂಗತಿಯನ್ನು ಈ ಪುಸ್ತಕದಲ್ಲಿ ವಿಶ್ವನಾಥ್ ದಾಖಲಿಸಿದ್ದಾರೆ. ಇದನ್ನು ನೋಡಿದಾಗ ನನಗೆ ನಮ್ಮ ತಂದೆ ರಾಶಿಯವರು ಹೇಳುತ್ತಿದ್ದ ಮಾತುಗಳು ನೆನಪಿಗೆ ಬರುತ್ತವೆ. "ಒಂದು ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪೀಳಿಗೆಯಿಂದ ಪೀಳಿಗೆಗೆ ಸಂರಕ್ಷಿಸಿಕೊಂಡು ಬರುವುದು ಮಧ್ಯಮವರ್ಗದ ಕುಟುಂಬಗಳ ಕರ್ತವ್ಯ ಹಾಗೂ ಬಾಧ್ಯತೆ. ' ವಿಶ್ವನಾಥರ ಕುಟುಂಬ ಈ ಮಾತಿಗೆ ಒಂದು ಜ್ವಲಂತ ನಿದರ್ಶನ.

ಕುಟುಂಬದ ಸದಸ್ಯರ ಸಾಧನೆಗಳ ಜೊತೆಗೆ ಈ ಪುಸ್ತಕದಲ್ಲಿ ಆ ದಿನಗಳ ಮೈಸೂರು ರಾಜ್ಯದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಆಯಾಮಗಳು ಬಹು ಸ್ವಾರಸ್ಯವಾಗಿ ಮೂಡಿಬಂದಿವೆ. ಕೃಷ್ಣರಾಜ ಒಡೆಯರ್, ಮಿರ್ಜಾ ಇಸ್ಮೈಲ್ ಇವರುಗಳ ನಡವಳಿಕೆ, ವಿದ್ಯಾರ್ಥಿಭವನದ ದೋಸೆ, ಹರ್ಷ ಸ್ಟೋರ್ಸಿನ ಬಾದಾಮಿ ಹಾಲು, ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಪಂದ್ಯಗಳು, ಅಂದಿನ ಸಮಾಜವನ್ನು ರೂಪಿಸಿದ ಅನೇಕ ಧುರೀಣರ ಸ್ವಾರಸ್ಯಕರ ಘಟನೆಗಳು ಇವೆಲ್ಲವನ್ನೂ ಒಟ್ಟುಗೂಡಿಸಿ ವಿಶ್ವನಾಥರು ಬಹು ಕೌಶಲದಿಂದ ಅಂದಿನ ಬೆಂಗಳೂರಿನ ವರ್ಣರಂಜಿತ ಟ್ಯಾಪೆಸ್ಟ್ರಿಯೊಂದನ್ನು ಹೆಣೆದಿದ್ದಾರೆ. ಐವತ್ತರ ದಶಕದಲ್ಲಿ ತಾರುಣ್ಯವನ್ನು ಅನುಭವಿಸಿದ್ದ ನನ್ನ ತಲೆಮಾರಿನವರಿಗಂತೂ ಈ ಪುಸ್ತಕ ಅಂದಿನ ನೆನಪುಗಳ ಅನರ್ಘ್ಯ ಆಗರ.

ಒಟ್ಟಿನಲ್ಲಿ ಹೇಳುವುದಾದರೆ ವಿಶ್ವನಾಥರ ಸಂಶೋಧಕ ಮನಸ್ಸು , ಓದುಗರಿಗೆ ತೀರ ಅಪ್ಯಾಯಮಾನವಾಗುವ ರೀತಿಯನ್ನು ಸಂಶೋಧಿಸಿ ಬರೆದಿರುವ ಪುಸ್ತಕ ಇದು. ಕೊಂಡು ಓದುವ ಕನ್ನಡಿಗರಿಗೆ ಇದೊಂದು ರಸದೌತಣ. ಇಂತಹ ಪ್ರತಿಭಾನ್ವಿತರು ಅಪರಂಜಿಯ ಬಳಗದಲ್ಲಿದ್ದ ಮೇಲೆ ಅಪರಂಜಿ ಹೆಮ್ಮೆಯಿಂದ ಬೀಗುವುದರಲ್ಲಿ ಆಶ್ಚರ್ಯವೇನು ಅಂತೀನಿ.

■

# ಚಂದ್ರನಲ್ಲೂ ಇಡ್ಲಿ-ವಡೆ !

● **ಸಿ.ಆರ್.ಸತ್ಯ**

ಮೊನ್ನೆ ಇಸ್ರೋ ಸಂಸ್ಥೆಯ ರಾಕೆಟ್ ಉಡಾವಣೆ ಕೇಂದ್ರವಾದ ಶ್ರೀಹರಿಕೋಟಾಗೆ ಹೋಗಿದ್ದೆ. ಅಲ್ಲಿ ನಮ್ಮ ಬಡಾವಣೆಯಲ್ಲಿಯೇ ಇರುವ ದರ್ಶಿನಿ ಮಾಲೀಕರಾದ ಭಟ್ಟರು ಕಾಣಿಸಿಕೊಂಡರು. ಆಶ್ಚರ್ಯವಾಯಿತು. "ಇದೇನು ಭಟ್ಟರೆ, ನೀವಿಲ್ಲಿ..? " ಅಂತ ಕೇಳಿದೆ. ಭಟ್ಟರು "ನಾನು ಇಸ್ರೋವಿನ ಚಂದ್ರಾಯನ 5 ರಲ್ಲಿ ಚಂದ್ರ ನಲ್ಲಿಗೆ ಹೋಗ್ತಾ ಇದೀನಿ. ಅಲ್ಲಿ ಒಂದು ಚಿಕ್ಕ ದರ್ಶಿನಿ ತೆಗೆಯೋದಕ್ಕೆ ಅಂತ ಇಲ್ಲಿಗೆ ಬಂದು ಸಿದ್ಧತೆ ಮಾಡ್ಕೋತಾ ಇದೀನಿ." ಅಂತ ಅಂದರು. "ಎಲ್ಲಾ ಬಿಟ್ಟು ಚಂದ್ರನಲ್ಲೇ?" ಅಂತ ನಾನು ಅವಾಕ್ಕಾದೆ. ಭಟ್ಟರು ನಕ್ಕಿದರು. "ನೀವು ಯಾವ ಕಾಲದಲ್ಲಿದ್ದೀರಿ? ಅಷ್ಟು ಹೊತ್ತಿಗೆ ನಮ್ಮ ಗಗನಯಾನಿಗಳು ಅಲ್ಲಿ ವಾಸವಿದ್ದು ಇಡ್ಲಿ-ವಡೆ ಚಟ್ನಿ, ಇಡ್ಲಿ-ವಡೆ ಸಾಂಬಾರ್ ಅಂತ ಚಡಪಡಿಸ್ತಿರ್ತಾರೆ. ಕೆಲವರಿಗೆ ಬೈಟೂ ಕಾಫೀನೂ ಬೇಕಾಗುತ್ತೆ. ಇನ್ನು ಅಲ್ಲೇ ನೆಲೆಸ ಬೇಕಾದ ಕೆಲವು ಇಸ್ರೋ ವಿಜ್ಞಾನಿಗಳು ಮಸಾಲೆ ದೋಸೆ, ಬಿಸಿಬೇಳೆ ಭಾತ್ ಇರುತ್ಯೆ ಭಟ್ಟರೇ ಅಂತ ಈಗಲೇ ಕೇಳೋಕ್ಕೆ ಶುರು ಮಾಡ್ತಿದಾರೆ. ಅದಕ್ಕೆ ಪ್ರಪಂಚದಲ್ಲೇ ನಾನೇ ಮೊದಲಾಗಿ ಅಲ್ಲಿ ದರ್ಶಿನಿ ತೆಗಿತಿದೀನಿ. ರುಬ್ಬೋ ಗ್ರೈಂಡರು, ನೀರಿನ ಕೊಳದಪ್ಪಲೆ, ಕುರ್ಚಿ-ಟೇಬಲ್ ಗಳು-ಇಂತಹ ಭಾರವಾದ ಸಾಮಾನುಗಳನ್ನ ಮುಂಗಡವಾಗಿಯೇ ಚಂದ್ರಾಯನ 4 ರಲ್ಲಿ ಕಳಿಸ್ತಾ ಇದೀನಿ. ನನ್ನ ಜೊತೆಗೆ ಒಂದು ತಿಂಗಳಿಗೆ ಆಗೋ ಅಷ್ಟು ಅಕ್ಕಿ, ಬೇಳೆ, ಇತ್ಯಾದಿ ದಿನಸುಗಳನ್ನೂ ಈರುಳ್ಳಿ ಆಲೂಗೆಡ್ಡೆಗಳನ್ನೂ ತೆಗೆದು ಕೊಂಡು ಹೋಗ್ತಾ ಇದೀನಿ. ನನ್ನ ಹೆಂಡ್ತೀನೂ ದೊಡ್ಡ ಮಗಾನೂ ನನ್ನ ಜೊತೆಗೆ ಬರ್ತಾರೆ" ಅಂತ ವಿವರಿಸಿದರು. "ಅಷ್ಟೊಂದು ಭಾರವಾದ ಐಟಮ್ಸ್ ಗಳನ್ನ ತೊಗೊಂಡು ಹೋಗೊದಕ್ಕೆ ಇಸ್ರೋ ಅಧ್ಯಕ್ಷರು ಒಪ್ಪುತ್ತಾರೆಯೇ?" ಅಂತ ಕೇಳಿದೆ. ಅದಕ್ಕೆ ಭಟ್ಟರು "ನೋಡೋಣ. ಅವರು ಭಾರ ಜಾಸ್ತಿ ಆಯ್ತು ಅಂದರೆ ನನ್ನ ಹೆಂಡ್ತೀನ ಚಂದ್ರಾಯನ 6 ರಲ್ಲಿ ಬಾ ಅಂತೀನಿ" ಅಂತ ಹೇಳಿದರು.

ಅಷ್ಟರಲ್ಲಿ ಅವರ ಪಕ್ಕ ಇನ್ನೊಬ್ಬರು ಬಂದು ನಿಂತರು. ನೀವ್ಯಾರು ಸ್ವಾಮಿ? ಅಂತ ಕೇಳಿದೆ. ಅವರು "ನಾನು ಪ್ಯಾರೇಲಾಲ್ ಅಂತ. ರಿಯಲ್ ಎಸ್ಟೇಟ್ ಏಜೆಂಟು. ನಾನು ಚಂದ್ರಾಯನ 5 ರಲ್ಲೇ ಮುಂಗಡವಾಗಿ ಅಲ್ಲಿಗೆ ಹೋಗ್ತಾ ಇದೀನಿ" ಅಂತ ಅಂದರು. "ಯಾಕೆ?" ಅಂತ ಕೇಳಿದೆ. "ಅಲ್ಲಿ ಒಂದು ಸಾವಿರ ಎಕರೆ ಭೂಮಿ ಖರೀದಿ ಮಾಡ್ತಾ ಇದೀನಿ. ಖಾಲಿ ಸೈಟುಗಳನ್ನು, ವಿಲ್ಲಾಗಳನ್ನು, ಸಾಫ್ಟ್ ವೇರ್ ಆಫೀಸ್‌ಗಳನ್ನು ತಯಾರಿ ಮಾಡ್ತಾ ಇದೀನಿ. ಮುಂದೆ ನಮ್ಮ ಗಗನಯಾನಿಗಳು ಹೆಂಡತಿ ಮಕ್ಕಳೊಂದಿಗೆ ಅಲ್ಲಿಗೆ ಬಂದರೆ, ಅವರಿಗೆ ಮನೆಗಳು ಬೇಡವೆ?. ಇವುಗಳ ಜೊತೆಗೆ ಒಂದು ಮಾಲ್ ಕೂಡಾ ಕಟ್ಟು ಬಿಡಿ, ಅಲ್ಲಿ ಹಿಂದಿ ಸಿನಿಮಾಗಳನ್ನು ನೋಡೋದಕ್ಕೆ ಅವಕಾಶ ಮಾಡಿಕೊಡಿ ಅಂತ ಇಲ್ಲಿ ಟೆಕ್ಕಿಗಳೆಲ್ಲಾ ಕೇಳ್ತಿದಾರೆ. ಅದೂ ನನ್ನ ಮನಸ್ಸಿನಲ್ಲಿದೆ. ಇನ್ನು ಕೆಲವು ಟೆಕ್ಕಿಗಳು ಹೇಗೋ ಮಾಡಿ ಒಂದು ಪಾನ್ ಬೀಡಾ ಅಂಗಡೀನೂ ಇಟ್ಟು ಬಿಡಿ ಪ್ಯಾರೇಲಾಲ್ ಅಂತ ಕೇಳ್ತಿದಾರೆ. ಅದಕ್ಕೆ ಇಸ್ರೋ ಅಧ್ಯಕ್ಷರು ಒಪ್ಪುತ್ತಿಲ್ಲ. ನೀವೆಲ್ಲಾ ಅಲ್ಲೇ ಉಗುಳಿ, ಉಗುಳಿ ಚಂದ್ರನ ಮಣ್ಣೆಲ್ಲಾ ಕೆಂಪಾಗುತ್ತೆ. ಬೇಡ ಅಂದರು" ಅಂತ ಅಂದರು. ನನಗೆ ಒಂದು ಅನುಮಾನ

ಬಂತು. " ಅಲ್ಲಿ ವಾಸ ಮಾಡೋವರಿಗೆ ಅಕ್ಕಿ, ಬೇಳೆ, ತರಕಾರಿ, ಸೋಪು, ಸರಂಜಾಮು ಇತ್ಯಾದಿ ಇತ್ಯಾದಿ ಗಳನ್ನೆಲ್ಲಾ ಯಾರು ಒದಗಿಸ್ತಾರೆ?" ಅಂತ ಕೇಳಿದೆ. "ಅದಕ್ಕೆ ಈಗ ತಾನೇ ಕೇರಳದಿಂದ ಬಂದ–ಯಾವುದೋ ಅಹ್ಮದ್ ಅಂತ ಹೆಸರು– ಇಸ್ರೋ ಅಧ್ಯಕ್ಷರ ಜೊತೆ ಮಾತುಕತೆ ನಡೆಸ್ತಿದಾರೆ. ಒಂದು ದೊಡ್ಡ ಡಿಪಾರ್ಟ್ ಮೆಂಟಲ್ ಸ್ಟೋರ್ ತೆಗೀತಾರಂತೆ.

ಅಲ್ಲಿ ಪೊರಕೆ ಇಂದ ಹಿಡಿದು ಮಿಕ್ಕಿದ್ದೆಲ್ಲಾ ಇಡ್ತೀವಿ  ಅಂತ ಹೇಳ್ತಾ ಇದಾರೆ" ಅಂತ ಭಟ್ಟರು ಹೇಳಿದರು.

ಪ್ಯಾರೇಲಾಲ್ ಪಕ್ಕ ಇನ್ನೊಬ್ಬ ದಢೂತಿ ಮನುಷ್ಯ ಬಂದು ನಿಂತ. ಪ್ಯಾರೇಲಾಲ್ ಇವನು ನನ್ನ ಸ್ನೇಹಿತ ಅಮರ್ ಸಿಂಗ್ ಅಂತ. ಚಂದ್ರನ ಮೇಲೆ ಒಂದು ಬಿರ್ಯಾನಿ ಕಾರ್ನರ್ ಅನ್ನೋ ಹೆಸರಿನಲ್ಲಿ ನಾನ್ ವೆಜ್ ಹೋಟೆಲ್ ತೆಗೀಬೇಕೂ ಅಂತ ಇಸ್ರೋ ಅಧ್ಯಕ್ಷರನ್ನ ಕೇಳೋಕ್ಕೆ ಬಂದಿದ್ದಾನೆ  ಅಂತ ಅವನ ಪರಿಚಯ ಮಾಡಿಸಿ, ಏನಾಯ್ತು ಸಿಂಗ್, ನಿನ್ನ ಮಾತುಕತೆ? ಅಂತ ಪ್ಯಾರೇಲಾಲ್ ಕೇಳಿದರು. ಅವನು ಸಪ್ಪೆ ಮುಖ ಹಾಕಿಕೊಂಡು, " ಅವರು ಒಪ್ಪಲಿಲ್ಲ. ನಮ್ಮ ನೌಕೆಯಲ್ಲಿ ನಿಮ್ಮಂತಹವರನ್ನು ಹೇಗೋ ಸಾಗಿಸಬಹುದು. ಆದರೆ ಒಂದೊಂದು ಯಾನದಲ್ಲೂ ನೂರು ಇನ್ನೂರು ಕೋಳಿಗಳನ್ನು ಸಾಗಿಸೋ ತಂತ್ರಜ್ಞಾನ ಇನ್ನೂ ಇಸ್ರೋ ನಲ್ಲಿ ಇಲ್ಲ. ಒಂದೊಂದು ಕೋಳೀಗೂ ಸ್ಪೆಶಲ್  ಸ್ಪೇಸ್ ಸೂಟ್ ಹಾಕೋಕ್ಕೆ ಆಗಲ್ಲ ಅಂದ್ರು". ಅಂತ ಕಣ್ಣೀರು ಹಾಕ್ಕೊಂಡ. ಪ್ಯಾರೇಲಾಲ್ " ಇದು ಬಹಳ ಅನ್ಯಾಯ. ಏನು, ಇಸ್ರೋ ಸಂಸ್ಥೆ ಬರೀ ಶಾಖಾಹಾರಿಗಳ ಸಂಸ್ಥೆಯೇ? ಚಿಕನ್ ಬಿರ್ಯಾನಿ ಇಲ್ಲದೆ  ಟೆಕ್ಕಿಗಳು ಹೇಗೆ ತಾನೇ ಬದುಕುತ್ತಾರೆ?" ಅಂತ ಬೇಜಾರು ಪಟ್ಟಿಕೊಂಡರು. ಅದಕ್ಕೆ ಸಿಂಗ್, " ಪರ್ಯಾಯವಾಗಿ ಒಂದು ಬಾರ್ ತೆಗೆಯೋಕ್ಕೆ ಅವಕಾಶ ಕೊಡ್ತೀರಾ ಅಂತ ಕೇಳಿದೆ. ಅದಕ್ಕೆ ಅವರು ಅದು ಸಾಧ್ಯ ಅಂತ ಕಾಣುತ್ತೆ . ನೋಡೋಣ. ನಮ್ಮ ವಿಜ್ಞಾನಿಗಳಿಗೆ ಚಂದ್ರನ ಮೇಲೆ ನೀರಂತೂ ಸಿಗೋದಿಲ್ಲ, ಅದರ ಬದಲು ಬೀರ್ ಆದರೂ ಸಿಗೋ ಹಾಗೆ ಮಾಡಿ ಅಂತ ನನ್ನ ಕೇಳ್ತಾ ಇದಾರೆ. ಅವರ ಒಪ್ಪಿಗೆ ಸಿಕ್ಕಿದರೆ, ನಿಮ್ಮ ಜೊತೆಗೆ ಚಂದ್ರಯಾನ 5 ರಲ್ಲಿ ಇಪ್ಪತ್ತು ಕ್ರೇಟ್ ಬೀರ್‌ನ  ಕಳಿಸೋಣ ಅಂತ ಇದೀನಿ" ಅಂತ ಅಂದ. ಪ್ಯಾರೇಲಾಲ್ " ಆದಷ್ಟು ಬೇಗ ನಿಮ್ಮ ಬಾರ್ ಅನ್ನು ಓಪನ್ ಮಾಡೀಪ್ಪ. ನನ್ನ ಸೈಟ್ ಗಳನ್ನು ಜಾಸ್ತಿ ರೇಟ್ ನಲ್ಲಿ ಮಾರಬಹುದು" ಅಂತ ಆಸೆ ಪಟ್ಟುಕೊಂಡರು. ಇಸ್ರೋ ಆಫೀಸ್ ನಿಂದ ಇನ್ನೊಬ್ಬ ಹೊರಗೆ ಬಂದ. ಖುಷಿಯಾಗಿದ್ದ. ಭಟ್ಟರು " ಏನಾಯ್ತು ಶರೀಫ್? ಒಪ್ಪಿಗೆ ಸಿಗ್ತಾ?" ಅಂತ ಕೇಳಿದರು. ಶರೀಫ್ "ಸಿಕ್ತು ಭಟ್ಟರೆ. ಚಂದ್ರಾ ಮೊಬೈಲ್ಸ್ ಅಂತ ಮೊಬೈಲ್ ರಿಪೇರ್ ಶಾಪನ್ನು ತೆಗೀತಾ ಇದೀನಿ. ತಡ ಮಾಡ್ಬೇಡ. ನೀನು ಚಂದ್ರಯಾನ 4 ರಲ್ಲೇ ಅಲ್ಲಿಗೆ ಹೋಗಿ ರೆಡಿಯಾಗಿರು ಅಂತ ಹೇಳಿದರು"  ಅಂತ ಖುಶಿಯಾಗಿ ಹೇಳಿದ.

ಮನೆಗೆ ಬಂದು ಇಷ್ಟೆಲ್ಲಾ ಕೇಳಿ ಇನ್ನೇನು ಚಂದ್ರನ ಮೇಲೆ ಬಾಕಿ ಇದೆ? ಅಂತ ಚಿಂತನೆಗೆ ಇಳಿದೆ. ನನ್ನ ಹೆಂಡತಿ ಒಂದು ಮೆಟರ್ನಿಟಿ ಆಸ್ಪತ್ರೆ ಬೇಡವೇ? ಒಂದೆರಡು ಸಾಕೋ ನಾಯಿಗಳನ್ನು ಅಲ್ಲಿಗೆ ಕಳಿಸಬಾರದೆ? ? ಅಂತ ಕೇಳಿದಳು (ಅವಳಿಗೆ ನಾಯಿಗಳನ್ನು ಕಂಡರೆ ಬಹಳ ಪ್ರೀತಿ).

ನಾನು " ಮಹರಾಯ್ತೀ,, ಮೊದಲೆಲ್ಲಾ ಅಲ್ಲಿಗೆ ಹೋಗುವವರೆಲ್ಲಾ ಬ್ರಹ್ಮಚಾರಿಗಳೇ

, ಸಿಂಗಲ್ ಸ್ತ್ರೀಯರೇ. ಹೆರಿಗೆ ಆಸ್ಪತ್ರೆ ಬೇಡಿಕೆ ಬರಬೇಕಾದರೆ ಇನ್ನೂ ಬಹಳ ಸಮಯ ಬೇಕಾಗುತ್ತೆ. ಸಾಕೋ ನಾಯಿಗಳು ಅಂದ್ಯಾ? ಚಂದ್ರನಲ್ಲಿ ವಾತಾವರಣವೇ ಇಲ್ಲ. ಅವು ಬೊಗಳಿದ್ರೆ ಯಾರಿಗೂ ಕೇಳೋದೇ ಇಲ್ಲ. ಅವುಗಳು ಬೊಗಳೋದನ್ನ ಕೇಳಬೇಕು ಅಂದರೆ ಅವುಗಳ ಬಾಯಿ ಮುಂದೆ ನೀನು ಮೊಬೈಲ್ ಹಿಡ್ಕೋಬೇಕು" ಅಂತ ಹೇಳಿದೆ. ಅವಳು ಸುಮ್ಮನಾದಳು.

ಅವತ್ತು ರಾತ್ರಿ ಹುಣ್ಣಿಮೆ ಚಂದ್ರನನ್ನು ನೋಡಲು ನಮ್ಮ ಮನೆ ತಾರಸಿ ಮೇಲೆ ಏರಿ ಹೋದೆ. ಚಂದ್ರನನ್ನು ನೋಡಿ ಯಾಕೋ ದು:ಖವಾಯ್ತು. "ಚಂದಮಾಮಾ, ನೀನೂ ಬೆಂಗಳೂರು ತರಹ ಆಗಬೇಡಾಪ್ಪ. ಈಗ ಹೇಗಿದೀಯೋ ಹಾಗೇ ಇರು" ಅಂತ ಬೇಡಿಕೆ ಇಟ್ಟು ಬೇಜಾರಿನಿಂದಲೇ ಕೆಳಗಿಳಿದು ಬಂದು ಮಲಗಿಕೊಂಡೆ. ■

---

## ಸೇರಿಗೆ ಸವ್ವಾಸೇರು...!

●ಎ.ವಿಜಯೇಂದ್ರ ರಾವ್

ವಿಷ್ಣು ಪರಮ ಭಕ್ತ ಪಾರ್ಥಸಾರಥಿ ತನ್ನ ಆರಾಧ್ಯ ದೈವನನ್ನು ಜಪಿಸುತ್ತಾ ಘೋರವಾದ ತಪಸ್ಸು ಮಾಡಿದ್ದಕ್ಕೆ ವಿಷ್ಣು ಪ್ರತ್ಯಕ್ಷವಾಗಿ ನಿನಗೇನು ವರ ಬೇಕು ? ಎಂದು ಕೇಳಿದಾಗ, ದೀರ್ಘವಾಗಿ ಯೋಚಿಸಿ – ಭಗವಂತ, ನನಗೆ ಸಾವೇ ಬರಬಾರದು ಎಂದು ಕೇಳಿದ. ಅದಕ್ಕೆ ವಿಷ್ಣು ನೀನು ಅಂದುಕೊಂಡಂತೆಯೇ ಆಗಲಿ ಎಂದು ಹೇಳಿ ಅಂತರ್ಧಾನನಾದನು.

ಪಾರ್ಥಸಾರಥಿ ಹೇಳಲಾರದ ಸಂತೋಷ, ತಡೆಯಲಾರದೆ ರಸ್ತೆಯಲ್ಲಿರುವುದನ್ನು ಗಮನಿಸದೆ ಕುಣಿದು ಕುಪ್ಪಳಿಸಿದ.ಇದನ್ನು ನೋಡಿದ ಒಬ್ಬ ಹಿರಿಯರು – ಏನಪ್ಪಾ, ಯಾಕಿಷ್ಟು ಸಂತೋಷ ? ನಿನ್ನ ಹೆಸರೇನಪ್ಪಾ ಎಂದು ಕೇಳಿದಾಗ, ಅವನು – ನನ್ನ ಹೆಸರು 'ಪಾರ್ಥ.. ರಥಿ' ಎಂದನು, ಅವರಿಗೆ ಸರಿಯಾಗಿ ಅರ್ಥವಾಗಿದಿದ್ದಕ್ಕೆ, ಏನಪ್ಪಾ ಎಂದು ಮತ್ತೆ ಕೇಳಿದಾಗ, ಇವನು ನನ್ನ ಹೆಸರು ' ಪಾರ್ಥ..ರಥಿ' ಎಂದ. ಮನೆಗೆ ಬಂದು ಬಾಗಿಲು ಬಡಿಯುತ್ತಾ – ಏ ..ವಿತ್ರಿ, ಬಾಗಿಲು ತೆಗೆಯೆ ಬೇಗ ಎಂದು ಕೂಗಿದ. ಸಾವಿತ್ರಿ ಬಂದು ಬಾಗಿಲು ತೆಗೆದು ಏನ್ರೀ ನನ್ನ ಹೆಸರನ್ನು ವಿಚಿತ್ರವಾಗಿ ..ವಿತ್ರಿ, ..ವಿತ್ರಿ ಅಂತ ಕೂಗ್ತೀರಾ, ಲಕ್ಷಣವಾಗಿ ಸಾವಿತ್ರಿ ಅಂತ ಕರೆಯಬಾರದೆ ಎಂದು ಮೂದಲಿಸಿದಳು.

ಸರಿ, ಬನ್ನಿ ಊಟಕ್ಕೆ ಅಂತ ಕರೆದು ಅನ್ನ ಬಡಿಸಿದಾಗ, ಇವನ ಬಾಯಿಂದ ..ಕು,..ಕು ಅಂತ ಬಂತು, ಏನೇ ನಾನು ಹೇಳಿದರೂ ಬಡಿಸ್ತಾನೇ ಇದ್ದೀಯಲ್ಲಾ, ನಾನು ಹೇಳಿದ್ದು ಕೇಳಿಸಲಿಲ್ಲವಾ? ಎಂದು ಕೋಪದಿಂದ ಪ್ರಶ್ನಿಸಿದಾಗ, ಸಾವಿತ್ರಿ ಏನೋ ಚಿಕ್ಕ ಮಕ್ಕಳ ತರಹ ಏನೋ ..ಕು,..ಕು ಅಂತ ಹೇಳಿದ್ರಿ ಅಷ್ಟೇ, ಎಂದಾಗ ಈ ಜನಗಳಿಗೆ ಏನಾಗಿದೆ, ನಾನು ಹೇಳೋದು ಇವರುಗಳಿಗೆ ಅರ್ಥಾನೇ ಆಗ್ತಿಲ್ಲ ಅಂತ ಅಲವತ್ತುಕೊಂಡ ಪಾರ್ಥಸಾರಥಿ. ಇದನ್ನೆಲ್ಲಾ ಮರೆಯಲ್ಲಿ ಗಮನಿಸುತ್ತಿದ್ದ ವಿಷ್ಣು – ವರ ಕೇಳುವ ನಿಮಗೆ ಜಾಣತನ ಇದೆ ಅಂದುಕೊಂಡಿದ್ದರೆ, ಇನ್ನು ವರ ನೀಡುವ ನಮಗೆ ಇನ್ನೆಷ್ಟು ಜಾಣತನವಿರಬಹುದು. ಅದಕ್ಕೆ ನಿನಗೆ ಇನ್ನು ಮೇಲೆ " ಸಾವೇ" ಬರಲ್ಲ, ಅಂದರೆ ನಿನ್ನ ಬಾಯಿಂದ ಇನ್ನುಮುಂದೆ 'ಸಾ' ವೇ ಬರುವುದಿಲ್ಲ ಎಂದು ಮುಸಿ ಮುಸಿನಗುತ್ತಾ ವೈಕುಂಠದ ಕಡೆಗೆ ನಡೆದರು ಮಹಾವಿಷ್ಣು...! ■

# ನೋ ರಿಗ್ರೆಟ್ಸ್

●ನಳಿನಿ ಸೂರ್ಯಪ್ರಕಾಶ್

ಇತ್ತೀಚೆಗೆ ತಮ್ಮ ಎಂಭತ್ತೆಂಟನೆ ವಯಸ್ಸಿನಲ್ಲಿ ನನ್ನ ಮಾವನವರು ನಮ್ಮನ್ನಗಲಿದರು. ಬಾಳಮುಸ್ಸಂಜೆಯಲ್ಲಿ ಅವರು ಕೆಲವು ವಿಷಯಗಳನ್ನು ಯಾವಾಗಲಾದರೂ ನೆನೆಸಿಕೊಂಡು ಪೇಚಾಡಿಕೊಂಡ್ರೂ , ಕೊನೆಗದು ನಗುವಿನಲ್ಲಿ ಮುಕ್ತಾಯಗೊಳ್ತಿದ್ದುದೇ ಸಮಾಧಾನ.

ಮೊದಲನೆಯದು ಅವರು ಕೊಳ್ಳದಿದ್ದ ಸೈಟಿನ ಬಗ್ಗೆ. ನಮ್ಮ ಸಂಬಂಧಿಯೊಬ್ಬರು ಕೆಲ ವರ್ಷಗಳ ಹಿಂದೆ ಸಹಕಾರನಗರದ ತಮ್ಮ 30–40 ಸೈಟನ್ನು ಒಂದು ಕೋಟಿ ರೂ. ಗೆ ಮಾರಿದರು. ""ಸುಶೀಲ ಆ ಸಹಕಾರನಗರದ ಸೈಟನ್ನ ಕೊಂಡಿದ್ದು ಬರೀ ಮೂವತ್ತು ಸಾವಿರಕ್ಕಮ್ಮ! ಇವತ್ತಿನ ದಿನ ಒಂದು ಕೋಟಿಗೆ ಹೋಗಿದೆ ಅಂದ್ರೆ ಎಂಥಾ ಅದೃಷ್ಟ ಅಂತೀನಿ! ನಾನು ಸರ್ವಿಸಿನಲ್ಲಿದ್ದಾಗ ಆ ಕಡೆಯಲ್ಲ ನಮ್ಮ ಡಿಪಾರ್ಟಮೆಂಟಿನ ಎಂಪ್ಲಾಯೀಸಿನ ಸೊಸೈಟಿಯವರು ಸೈಟುಗಳನ್ನು ಮಾಡಿ ಮಾರ್ರೋರು. ನಮ್ಮ ಸೂಪರ್‌ವೈಸರ್ರು ನಂಗೆ ದಿನಾಗಲೂ ಎಷ್ಟು ಹೇಳೋರು ಅಂತೀನಿ! ಸತ್ ನಾರಾಯಣ(ಸತ್ಯನಾರಾಯಣ!) ಏನಪ್ಪಾ ನೀವು ಮನಸ್ಸು ಮಾಡ್ತಿಲ್ವಲ್ಲಾ, ಧೈರ್ಯ ಮಾಡಿ ಸಾಲಾನೋ, ಸೋಲಾನೊ ಒಂದು ಸೈಟು ತೊಗೊಂಡು ಹಾಕಿ ಅಂತ ದಿನಾ ಹೇಳೋರು. ಛೆ! ಎಲ್ಲಿ? ನಂಗಾಗೆಲ್ಲಾ ಸಂಬಳಾನು ಎಷ್ಟು ಬರ್ತಿತ್ತು? ಒಬ್ಬನ ಸಂಬಳದಲ್ಲಿ ಮನೆ, ಇಬ್ರು ಮಕ್ಕಳ ಸಂಸಾರ ನಡೀಬೇಕಿತ್ತಲ್ಲ? ಏನೋ ಆಗೋಯ್ತು. ಆಗೇನಾದ್ರೂ ಒಂದು ಸೈಟು ತೆಗೆದುಹಾಕಿದ್ದಿದ್ರೆ ಇವತ್ತಿಗೆ ಒಂದು ಕೋಟಿ! ಛೆ! ಛೆ!'' ಎಷ್ಟು ಪೇಚಾಡಿಕೊಳ್ಳೋರು ಅಂದ್ರೆ, ನನಗೂ ಕೈ ಕೈ ಹಿಸುಕಿಕೊಳ್ಳೋ ಹಾಗಾಗ್ತಿತ್ತು! "" ಕಮ್ಮಿ ಸಂಬಳ, ನಂಗೆ ಅಷ್ಟು ಧೈರ್ಯ ಬರಲಿಲ್ಲ. ಆದ್ರೂ ನಾನು ಸರ್ವಿಸಿನಲ್ಲಿದ್ದು ತೊಗೊಂಡ ಸಂಬಳಕ್ಕಿಂತಲೂ , ರಿಟೈರಾಗಿ ತೊಗೊಂಡಿರೋ ಪೆನ್ಷನ್ನೇ ಜಾಸ್ತಿ! ಹ್ಹಿ ಹ್ಹಿ ಹ್ಹಿ"" ಅಂತ ನಗೋರು. ಅವರ ಜೊತೆ ನನಗೂ ನಗು!

ಮತ್ತೊಂದು ಪೇಚಾಡಿಕೊಳ್ತಿದ್ದ ವಿಷಯವೆಂದರೆ ತಾವು ಕೊಳ್ಳದಿದ್ದ ತಿರುಪತಿ ಲಾಡು ಬಗ್ಗೆ ! ಸುಮಾರು ಐವತ್ತು ವರ್ಷಗಳ ಹಿಂದಿನ ಮಾತು. ''ನಮ್ಮ ಪ್ರಕಾಶು (ನನ್ನ ಪತಿ) ಜುಟ್ಟು ಬಿಡಿಸೋಕ್ಕೇಂತ ತಿರುಪತಿಗೆ ಹೋಗಿದ್ವು. ನಮ್ಮ ಜೊತೆ ನಮ್ಮ ಅಣ್ಣ ಅತ್ತಿಗೇನೂ ಬಂದಿದ್ರು. ಆಗೆಲ್ಲಾ ಈಗಿನ ಹಾಗೆ ತಿರುಪತಿಯಲ್ಲಿ ರಶ್ಶು, ಉದ್ದುದ್ದ ಕ್ಯೂ ಎಲ್ಲಾ ಇರ್ತಿಲಿಲ್ಲ. ಸೀದಾ ಮುಖ್ಯ ದ್ವಾರದಿಂದ ದರ್ಶನಕ್ಕೆ ನಡ್ಕೊಂಡು ಹೋಗೋದೇ! ಇನ್ನು ಲಾಡು ಪ್ರಸಾದವಂತೂ ಏ–ಒನ್ನು! ಅದೇನು ಏಲಕ್ಕಿ, ತುಪ್ಪದ ಘಮಲು ಅಂತೀನಿ! ಒಂದೊಂದು ಲಾಡೂನೂ ಇಷ್ಟಿಷ್ಟು ದಪ್ಪ ಇರೋದು. ಈಗಿನ ಹಾಗೆ ಒಬ್ರಿಗೊಂದು, ಎರಡು ಅಂತ ಆಗೆಲ್ಲಾ ಲಿಮಿಟ್ ಇರ್ತಿರಲಿಲ್ಲ. ಹಾಗಾಗಿ ನಮ್ಮತ್ತಿಗೆ ನೂರು ಲಾಡು...ತಮಾಷೆಯಲ್ಲಮ್ಮಾ, ನೂರು ಲಾಡು ತೊಗೊಂಡ್ರು ! ಊರಿಗೆ ಬಂದ್ಮೇಲೆ ನಮಗೊಂದೇ ಒಂದು ಲಾಡು ಕೂಡ ಕೊಡಲಿಲ್ಲ ಅಂತೀನಿ! ಎಲ್ಲಾರಿಗೂ ಸೇರಿ ತೊಗೊಂಡ್ರು ಅಂತ ನಾನು

ಯಾಮಾರಿಬಿಟ್ಟೆ! ಛೆ ಛೆ! ನಾನೂ ಆಗ ನಮ್ಮನೇಗೆ ಅಂತ ಕೊಂಡುಬಿಡಬೇಕಿತ್ತು!. ನಮ್ಮ ಪ್ರಕಾಶು ಗುಂಡು ತಲೆ ಸವರಿದಾಗೆಲ್ಲಾ ನಂಗೆ ಲಾಡೂದೇ ನೆನಪಾಗ್ತಿತ್ತು! " ಅಂತ ನಗೋರು. ಅವರ ಜೊತೆ ನನಗೂ ನಗು.

ಊರು ಕೇರಿ ಸುತ್ತುವ ವಿಷಯದಲ್ಲಿ ಎಳ್ಳಷ್ಟು ಆಸಕ್ತಿ ಇಲ್ಲದ ನನ್ನ ಮಾವನವರಿಗೆ ಊಟ ತಿಂಡಿಯ ವಿಷಯದಲ್ಲಿ ಅದಕ್ಕೆ ತದ್ವಿರುದ್ಧ ! ಬೆಂಗಳೂರಿನ ಹತ್ತಾರು ಹೋಟೆಲುಗಳ ತಿಂಡಿಗಳ ರುಚಿ ಬಲ್ಲವರಾಗಿದ್ರು. ಆಗಿನ ಕಾಲದ(ಈಗಲೂ ಇರುವ) ಗುಂಡಪ್ಪ ಹೋಟೆಲಿನ ಮೈಸೂರು ಪಾಕು, ಚೌ ಚೌ, ಗಾಂಧಿ ಬಜಾರಿನ ವಿದ್ಯಾರ್ಥಿ ಭವನದ ಮಸಾಲದೋಸೆ, ಬಸವನಗುಡಿಯ ದ್ವಾರಕಾ ಭವನದ ಕಾಲಿ ದೋಸೆ,, ಮಲ್ಲೇಶ್ವರಂನ ಜನತಾ ಹೋಟೆಲಿನ ಮಸಾಲದೋಸೆ, ಅದೆಷ್ಟೋ ದರ್ಶಿನಿಗಳು, ಒಂದೇ, ಎರಡೇ? ಕೊನೆಗೆ ನಾಯ್ಡು ಹೋಟೆಲಿನ ಕಾಲು ಸೂಪಿನ ಬಗ್ಗೆಯೂ ಹೇಳಿ ತಮ್ಮ ಗುಟ್ಟು ರಟ್ಟು ಮಾಡಿದ್ರು ! ಇಪ್ಪತ್ತು ವರ್ಷಗಳ ಹಿಂದೆ ಅವರಿಗೆ ಡಯಾಬಿಟೀಸು ಶುರುವಾದ ಮೇಲೆ , ಆ ಕಾಯಿಲೆಯ ಬಗ್ಗೆ ಸಾಕಷ್ಟು ಓದಿ ತಿಳಿದುಕೊಳ್ಳೋರು. ಒಂದು ಇಡ್ಲಿಯಲ್ಲಿ ಎಷ್ಟು ಕ್ಯಾಲೊರಿ, ಒಂದು ದೋಸೆಯಲ್ಲಿ ಎಷ್ಟು ಕ್ಯಾಲೊರಿಯಿರತ್ತೆ ಅಂತೆಲ್ಲಾ ಬಾಯಿಪಾಠವಾಗಿತ್ತು. ಆದರೆ ತಿನ್ನುವ ವಿಚಾರ ಬಂದಾಗ ಮಾತ್ರ ಲೆಕ್ಕಾಚಾರವೆಲ್ಲಾ ಠುಸ್ಸ್ ! ವೇದಾಂತ ಹೇಳೋಕ್ಕೆ, ಬದನೆಕಾಯಿ ತಿನ್ನೋಕ್ಕೇಂತ ತಮಗೆ ಇಷ್ಟವಿದ್ದಷ್ಟು ತಿಂದು, ಗುಳಿಗೆ ನುಂಗಿಕೊಳ್ಳೋರು , ಮಾತ್ರೆ ದೇವೋ ಭವ ಅಂತ !

ಯಾವುದೇ ಪೂಜೆ–ಪುನಸ್ಕಾರ ಮಾಡದೇ ಇದ್ರೂ ಪರ್ವಾಗಿಲ್ಲ, ಇನ್ನೊಬ್ಬರಿಗೆ ಕೇಡು ಬಯಸದೇ ಇದ್ರೆ ಅಷ್ಟೇ ಸಾಕು ಅಂತಿದ್ದ ನನ್ನ ಮಾವ ತೀರಿಕೊಳ್ಳುವ ಕೆಲ ದಿನಗಳ ಮುಂಚೆ ತಮಗಿಷ್ಟವಾದ ಗರಿ ಗರಿ ಉದ್ದಿನ ವಡೆಯನ್ನ ಹೋಟೆಲಿನಿಂದ ತರಿಸಿಕೊಂಡು ಚಪ್ಪರಿಸಿತಿಂದ್ರು. ಪರಲೋಕದಲ್ಲಿರುವ ನನ್ನ ಮಾವನವರಿಗೆ ಈಗ ತಾವು ಕೊನೆಯಲ್ಲಿ ತರಿಸಿಕೊಂಡು ತಿಂದ ಉದ್ದಿನವಡೆ ಕೊಟ್ಟ ಸಂತೋಷದ ಮುಂದೆ, ತಾವು ಎಂದೋ ಕೊಳ್ಳದ ಸೈಟು– ಲಾಡುಗಳು ಕೊಟ್ಟ ಪೇಚಾಟ ತುಂಬಾ ಗೌಣವಾಗಿ ಕಾಣ್ತಿರಬಹುದೇನೋ! "ಖಂಡಿತ! ನೋ ರಿಗ್ರೆಟ್ಸ್ !" ಅಂತಿರಬಹುದೇ ನನ್ನ ಮಾವ ?!

***********







ಮಾವಾ.. ಅಚ್ಚೇ ದಿನ್ ಅಂದ್ರೆ, ಇದೇ ಇರಬೇಕು
ಬೆಲೆಗಳನ್ನ ಏರಾಸೋದು ಅಲ್ವಾ...

# ಸಂಖ್ಯೆ 99

**ಶ್ರೀ ಲಕ್ಷ್ಮಿ**

ನೂರರಲ್ಲಿ ಒಂದು ಕಮ್ಮಿಯಾಗಿ ಉಳಿದದ್ದು ತೊಂಬತ್ತೊಂಬತ್ತು. ಎರಡಂಕಿ ಸಂಖ್ಯೆಗಳಲ್ಲಿ ಇದುವೇ ದೊಡ್ಡಣ್ಣ ಅನ್ನಿಸಿಕೊಂಡ್ರು ಸಹ ಮೂರಂಕಿ ಸಂಖ್ಯೆಗಳ ಮುಂದೆ ಮುದುರಿಕೊಂಡು ಕೂರತ್ತೆ. ಆದ್ರೂ ಸಹ ಬಹಳಷ್ಟು ವ್ಯಾಪಾರಿಗಳಿಗೆ ಈ ಸಂಖ್ಯೆ ಫೇವರಿಟ್ ಎಂದೇ ಹೇಳಬಹುದು ಏಕೆಂದರೆ ಅವರು ಈ ಸಂಖ್ಯೆಯನ್ನು ಒಂದು ಮನೋವೈಜ್ಞಾನಿಕ ಟ್ರಿಕ್ ಆಗಿ ಬಳಸಿಕೊಳ್ಳುವರು. ಅಷ್ಟು ಪರ್ಸೆಂಟ್ ಡಿಸ್ಕೌಂಟ್, ಇಷ್ಟು ಪರ್ಸೆಂಟ್ ಡಿಸ್ಕೌಂಟ್ ಎಂದು ಹೇಳಿ ಒಂದಿಷ್ಟು ಟೋಪಿ ಹಾಕುವುದರ ಜೊತೆಗೆ ಕೇವಲ 99, 199, 299, 499, 699, 999 ರೂಪಾಯಿಗಳು ಎಂದು ಹೇಳಿ ನಮ್ಮನ್ನು ಯಾಮಾರಿಸಿಬಿಡ್ತಾರೆ. ಆ ಸಮಯಕ್ಕೆ ನಮಗೆ ಹತ್ತಿರದ ನೂರಕ್ಕೋ, ಸಾವಿರಕ್ಕೋ ಕೇವಲ ಒಂದೇ ರೂಪಾಯಿ ಕಮ್ಮಿ ಇರುವುದು ಎಂದು ಅನ್ನಿಸುವುದೇ ಇಲ್ಲ. ಅದೊಂದು ಮಾರ್ಕೆಟಿಂಗ್ ತಂತ್ರ ಎಂದು ತಿಳಿದರೂ ಸಹ 99ರಿಂದ ಕೊನೆಗೊಳ್ಳುವ ವಸ್ತುಗಳಿಗೆ ಮುಗಿ ಬೀಳುತ್ತೇವೆ. ಕೊನೆಗೆ ಬಿಲ್ಲಿಂಗ್‌ನಲ್ಲಿ ಅದು ಇದು ಅಂತ ಬಹಳಷ್ಟು ತೆರಿಗೆ ಸೇರಿಸಿ ಹೆಚ್ಚಿಗೆ ಹಣವೇ ಕೊಟ್ಟು ಬರುತ್ತೇವೆ. 99ರ ಹಿಂದೆ ಹೋಗಿ ಆಗೋದು ಇಷ್ಟೇ. ಒಂದು ರೂಪಾಯಿ ಉಳಿಸಿ ನೂರು ರೂಪಾಯಿ ಕಳೆದುಕೊಂಡಿರುತ್ತೇವೆ. ಲಾಭಗೊಂಡ ವ್ಯಾಪಾರಿಯು ಒಂಬತ್ತು ಒಂಬತ್ತು ಒಂಬತ್ತು ತೋಳ ಹಳಕ್ಕೆ ಬಿತ್ತು ಎಂದು ಆಡಿಕೊಳ್ಳುತ್ತಾ ಹಾಡ್ ಹಾಡ್ತಾನೆ.

ಉತ್ಪನ್ನದ ಮಾರ್ಕೆಟಿಂಗ್ ನಲ್ಲೂ ಸಹ ಈ 99ರ ಬಳಕೆ ಹೆಚ್ಚೇ ಇರುತ್ತದೆ. ಸ್ವಚ್ಛಗೊಳಿಸುವ ಉತ್ಪನ್ನಗಳನ್ನು ಗಮನಿಸಿ. 99ರಷ್ಟು ಸ್ವಚ್ಛ ಗೊಳಿಸುವುದು, 99% ಸುರಕ್ಷಿತ ಹೀಗೆಲ್ಲ ಮುದ್ರಿಸಿರುತ್ತಾರೆ. ಎಷ್ಟರ ಮಟ್ಟಕ್ಕೆ ಶುಚಿ ಗೊಳಿಸುತ್ತದೆಯೋ ಎಂಬುದು ಆ ದೇವರಿಗೆ ಗೊತ್ತು. ಆದರೂ ಉತ್ಪನ್ನದ ಪ್ರಚಾರವಂತು ಜೋರಾಗಿರುತ್ತದೆ. ಕೆಲವು ಮಾರ್ಕೆಟಿಂಗ್ ಟ್ರಿಕ್ಸ್ ಗಳು ನಿಜಕ್ಕು ಅರ್ಥವಾಗದು. ಈ ದಶಮಾಂಶದ ಸಂಖ್ಯೆ ಬಳಸಿ ಮಾರ್ಕೆಟಿಂಗ್ ನೋಡಿರುತ್ತೀರಿ 99.99% ಸೂಕ್ಷ್ಮ ಜೀವಿಗಳನ್ನು ಕೊಲ್ಲುತ್ತದೆ (ಕಿಲ್ಸ್ 99.99 ಜೆರ್ಮ್ಸ್). ಅಷ್ಟು ನಿಖರವಾಗಿ ಹೇಳಲು ಅದು ಹೇಗೆ ಸಾಧ್ಯ? 99% ಅನ್ನು ನಂಬಿದ ಶತಮೂರ್ಖರು ನಾವಾಗಿರುತ್ತೇವೆ ಅಷ್ಟೆ.

ಮನೆಯಲ್ಲಿ ಯಾರಿಗಾದ್ರೂ ಜ್ವರ ಬಂದಾಗ ನೋಡ್ಬೇಕು, ಅದರಲ್ಲೂ ಮಕ್ಕಳಿಗೆ ಜ್ವರ ಬಂದ್ರೆ ಮುಗ್ದೆ ಹೋಯ್ತು. ಮೊದಲು ಹಣೆ ಮೇಲೆ ಕೈ ಇಟ್ಟು ನೋಡೋದು, ಕುತ್ತಿಗೆ ಮುಟ್ಟಿ ಜ್ವರದ ತಾಪ ಇದ್ಯಾ? ಅಂತೆಲ್ಲಾ ನೋಡಿದ ಮೇಲೆ, ಸ್ವಲ್ಪ ಬೆಚ್ಚಗೆ ಇದ್ರೆ ಸಾಕು, ಥರ್ಮಾಮೀಟರ್ ಅನ್ನು ಮಾಗುವಿನ ನಾಲಿಗೆ ಕೆಳಗಡೆ ಕೂರಿಸಿಬಿಡ್ತೇವೆ. ಆಟೋ ಮೀಟರ್ ರೀಡಿಂಗ್ ತರಹ ಓಡುವ ರೀಡಿಂಗ್ ಅನ್ನು ಭಯದಿಂದಲೇ ನೋಡ್ತಾ ಇರ್ತೀವಿ. ಸಾಮಾನ್ಯ ದೇಹದ ತಾಪಮಾನ 98.6°F ಇರಲಾಗಿ, ಇದು ಏರುತ್ತಾ 99, 99.1, 99.2, 99.3 ಹೀಗೆ ಸಾಗಿದರೆ 100ನ್ನು ತಲುಪುವ ಮೊದಲೇ ಜ್ವರ ಬಂದಿದೆ ಎಂದು ಮನಸ್ಸಿನಲ್ಲಿ ಲೆಕ್ಕಾಚಾರ ಹಾಕಿಬಿಡ್ತೀವಿ. ಆದರಿಂದ 99 ನಮ್ಮ ದೇಹಕ್ಕೆ ಆಗಿ ಬರುವ ನಂಬರ್ ಅಲ್ಲ ಬಿಡಿ. ಇನ್ನು ಈಗಂತೂ ಕೋವಿಡ್ ನ ದೆಸೆ ಥರ್ಮಲ್ ಚೆಕ್ ಅಂತ ಹೇಳಿ, ಹೋದಕಡೆಯಲೆಲ್ಲಾ ನಮ್ಮ ದೇಹದ

ತಾಪಮಾನ ಚೆಕ್ ಮಾಡ್ತಾನೆ ಇರ್ತಾರೆ. 99ರ ಮೇಲೆ ದೇಹದ ತಾಪಮಾನ ಕಂಡರೆ ಮತ್ತೆ ಎಡವಟ್ಟೆ.

ಇಂದಿನ ಬಹುತೇಕ ವಿದ್ಯಾರ್ಥಿಗಳ ಅಂಕಗಳನ್ನು ನೋಡಿದರೆ ಆಶ್ಚರ್ಯವೇ ಆಗುತ್ತದೆ. ಬಹಳ ಜನ 100 ಕ್ಕೆ 100 ತೆಗೆದರೆ, ಇನ್ನೊಂದಿಷ್ಟು ಮಕ್ಕಳು 97, 98, 99 ಹೀಗೆ ಅಂಕಗಳನ್ನು ಗಳಿಸುತ್ತಾರೆ. 99 ಅಂಕಗಳನ್ನು ಪಡೆದ ಮಕ್ಕಳ ರೋಧನ ಹೇಳತೀರದ್ದು. ಅಯ್ಯೋ! ಇನ್ನೊಂದು ಮಾರ್ಕ್ಸ್ ಇಂದ ಔಟ್ ಆಫ್ ಔಟ್ ಮಿಸ್ ಆಯ್ತು ಅಂತ ಕೊರಗ್ತಾನೆ ಇರ್ತಾರೆ. 50, 60, 70 ಅಂಕಗಳನ್ನು ಗಳಿಸಿದ ಮಕ್ಕಳಿಗಿಂತ ಈ 99 ಗಳಿಸಿದ ಮಕ್ಕಳ ನೋವು ಹೆಚ್ಚೇ ಇರುತ್ತದೆ ಅನ್ನಬಹುದು. ಕ್ರಿಕೆಟ್ ಆಟದಲ್ಲಿಯು ಸಹ ಈ 99 ರನ್ಗಳಿಗೆ ಔಟ್ ಆಗಿ ಅದೆಷ್ಟೋ ಆಟಗಾರರು ಸೆಂಚುರಿಯಿಂದ ವಂಚಿತರಾಗಿದ್ದಾರೆ. 93, 94 ರನ್ ಹೊಡೆದು ಔಟ್ ಆದಾಗ ಆಗದ ನೋವು 99 ರನ್ಗಳು ಹೊಡೆದು ಔಟ್ ಆದಾಗ ಆಗುವುದು ಖಂಡಿತ.

ಮೊದಲೆಲ್ಲಾ 5 ರೂಪಾಯಿ ಅಥವಾ 10 ರೂಪಾಯಿ ಕೊಟ್ಟಾಗ ಹಲವು ಕಡೆಗಳಲ್ಲಿ ಒಂದು ರೂಪಾಯಿ ಚಿಲ್ಲರೆ ಇಲ್ಲವೆಂದು ಚಾಕಲೇಟ್ ಕೊಡುತ್ತಿದ್ದರು. ಈಗೀಗ 100 ರೂಪಾಯಿಗೂ ಇದೇ ಗತಿ ಬಂದಿದೆ. 99 ರೂಪಾಯಿಯ ಮೊತ್ತದ ವಸ್ತುವಿಗೆ 100 ರೂಪಾಯಿ ಏನದ್ರೋ ಕೊಟ್ರೆ, ಒಂದು ರೂಪಾಯಿಯ ಚಾಕೊಲೇಟ್ ತಿಂದು ಬಾಯಿ ಸಿಹಿ ಮಾಡ್ಕೋ ಬೇಕಾಗತ್ತೆ ಅಷ್ಟೆ.

ದೇವರಿಗೆ ಹೇಳುವ ಶತನಾಮಾವಳಿ ಸ್ತೋತ್ರದಲ್ಲಿಯೂ ಸಹ ಒಂದು ನಾಮ ಮರೆತರೆ 99 ನಾಮವಳಿಯೇ ಆಗೋದು. ಆದ್ರೂ ಕೊನೆಯಲ್ಲಿ ಶತನಾಮಾವಳಿ ಸಂಪೂರ್ಣಮ್ ಎಂದು ಹೇಳಿ ಮುಗಿಸಿಬಿಡ್ತೀವಿ. ಕೆಲಸ ಕೊನೆಯ ಹಂತದಲ್ಲಿದೆ ಅನ್ನುವುದಕ್ಕೆ ಉಪಯೋಗಿಸುವ ಏಕೈಕ ಪರ್ಸಂಟೇಜ್ ಅಂದ್ರೆ 99. ಅದು 80 ಪರ್ಸೆಂಟ್ ಆಗಿರ್ಲಿ, 90 ಪರ್ಸೆಂಟ್ ಆಗಿರ್ಲಿ, ಆದ್ರೆ ನಾವು ಮಾತ್ರ ಹೇಳೋದು, 99% ಆಗಿಹೋಗಿದೆ ಅಂತ.


99 ರ ಕಥೆ ನೆನಪಾಯ್ತು. ಒಂದು ಊರಿನಲ್ಲಿ ಒಬ್ಬ ರಾಜ ತನ್ನ ಮಂತ್ರಿಯೊಂದಿಗೆ ವಿಹರಿಸುತ್ತಿರುವಾಗ ಅಲ್ಲೊಂದು ನೆಮ್ಮದಿಯಿಂದ ಖುಷಿಯಾಗಿ ಜೀವನ ನಡೆಸುತ್ತಿರುವ ಒಂದು ಸಂಸಾರವನ್ನು ಕಂಡು ಅವರು ಹೇಗೆ ಇಷ್ಟು ಖುಷಿಯಾಗಿರುವರು ಎಂದು ಮಂತ್ರಿಯನ್ನು ಕೇಳುತ್ತಾನೆ. ಆ ಮಂತ್ರಿಯು ಅವರು ತಮ್ಮ ಬಳಿ ಇರುವ ಕೆಲವೇ ಕೆಲವು ವಸ್ತುಗಳಲ್ಲೇ ಖುಷಿ ಕಂಡುಕೊಂಡಿದ್ದಾರೆ ಎಂದು ಹೇಳುವನು. ಅವರ ಖುಷಿಯನ್ನು ಹಾಳು ಮಾಡಬೇಕು ಎಂಬ ಉದ್ದೇಶದಿಂದಲೇ ರಾಜನು ಅವರ ಹೊಲದಲ್ಲಿ 99 ಚಿನ್ನದ ನಾಣ್ಯಗಳಿರುವ ಒಂದು ಚೀಲವನ್ನು ಇಟ್ಟು ಬರುತ್ತಾನೆ. ಚೀಲ ಸಿಕ್ಕಿದ ಸಂತೋಷದಲ್ಲಿ ಆ ಮನೆಯವರು ಆ ಚೀಲದಲ್ಲಿ ಎಷ್ಟು ನಾಣ್ಯಗಳಿದೆ ಎಂದು ಎಣಿಸಿ ನೋಡಿದಾಗ 99 ನಾಣ್ಯಗಳು ಸಿಗುತ್ತದೆ. ಆ ಇರದ ಒಂದು ನಾಣ್ಯಕ್ಕೆ ತಲೆ ಕೆಡಿಸಿಕೊಂಡು ಹುಡುಕಿ, ಇದ್ದ ನೆಮ್ಮದಿಯನ್ನೆಲ್ಲಾ ಹಾಳುಮಾಡಿಕೊಂಡು ಆ ಒಂದು ನಾಣ್ಯವನ್ನು ಸಂಪಾದಿಸಲು ಮುಂದಾಗುವರು. ನಂತರ ಆಸೆ ಹೆಚ್ಚಾಗಿ, ನೆಮ್ಮದಿ ಕಡಿಮೆಯಾಗಿ ಜೀವನೋತ್ಸಾಹ ಕಳೆದುಕೊಳ್ಳುತ್ತಾರೆ.

ಸಂಖ್ಯೆ, ಎಣಿಕೆಗಳಿಗಿಂತ ಹೊಂದಾಣಿಕೆ, ನಡುವಳಿಕೆ ಮುಖ್ಯ ಎನ್ನುವುದನ್ನು ತಿಳಿಯೋಣ. ■

# ಆರತಿ ಘಟಿಕಾರ್ ಅವರ 'ವಠಾರ ಮೀಮಾಂಸೆ'

**ನಳಿನಿ. ಟಿ. ಭೀಮಪ್ಪ**

ಮಧ್ಯಮವರ್ಗದವರು ಅನುಭವಿಸುವ ತಲ್ಲಣಗಳು, ಸಡಗರಗಳು, ಚಿಕ್ಕಪುಟ್ಟ ಸಂಭ್ರಮಗಳು ಎಲ್ಲವೂ ಆರತಿ ಘಟಿಕಾರ್ ಅವರ 'ವಠಾರ ಮೀಮಾಂಸೆ' ಪುಸ್ತಕದಲ್ಲಿ ನವಿರಾದ ಹಾಸ್ಯದೊಂದಿಗೆ ಸಮ್ಮಿಳಿತವಾಗಿವೆ. ಅವರ ಹಿಂದಿನ ಹಾಸ್ಯಸಂಕಲನ 'ಮಾತ್ರೆದೇವೋಭವ'ದ ಮುಂದುವರಿದ ಭಾಗವಾಗಿ ಈ ವಠಾರ ಎನಿಸುತ್ತದೆಯಾದರೂ, ಇಲ್ಲಿ ಹಾಸ್ಯದ ಜೊತೆ ಬದುಕಿನ ಏಳುಬೀಳು, ಆಸೆ, ಆಕಾಂಕ್ಷೆಗಳನ್ನು ಅದುಮಿಕೊಂಡು ಮಾಡಲೇಬೇಕಾದ ಸಣ್ಣಪುಟ್ಟ ತ್ಯಾಗಗಳು, ಹೊಂದಿಕೊಂಡು ಹೋಗಬೇಕಾದ ಅನಿವಾರ್ಯತೆಯನ್ನು ಕೆಲವು ಪ್ರಬಂಧಗಳು ಪ್ರತಿಫಲಿಸುತ್ತದೆ. ಪ್ರತಿಯೊಂದು ಸಂದರ್ಭಗಳನ್ನೂ ಹಾಸ್ಯದ ಮೂಲಕವೇ ಹೇಳುವುದು ಅಷ್ಟು ಸುಲಭವಲ್ಲ. ಆದರೆ ಆರತಿಯವರಿಗೆ ಈ ಕಲೆ ಬಹಳ ಅದ್ಭುತವಾಗಿ ಒಲಿದಿದೆ.




ವಠಾರದ ಜಗತ್ತನ್ನು ಇಲ್ಲಿ ನಿಚ್ಚಳವಾಗಿ ತೆರೆದಿಟ್ಟಿದ್ದಾರೆ. ಅಲ್ಲಿ ವಾಸಿಸುವ ಜನರಿಗೆ ಒಂದು ಪುಟ್ಟ ಸಾಮಾನು ಮನೆಗೆ ಬಂದರೂ ಹಬ್ಬವೇ, ಐವತ್ತು ರೂಪಾಯಿ ಸಂಬಳ ಹೆಚ್ಚಿಗೆಯಾದರೂ ಸಂಭ್ರಮವೇ. ಎಲ್ಲರೂ ಸೇರಿ ಆಚರಿಸುವ ಹಬ್ಬಗಳಿರಬಹುದು, ಬೇಸಿಗೆಯಲಿ ಮಾಡುವ ಹಪ್ಪಳ ಸಂಡಿಗೆಗಳಿರಬಹುದು, ನೀರಿಗಾಗಿ ಆಡಿದ ಜಗಳವೇ ಇರಬಹುದು, ಎಲ್ಲವೂ ಮರೆಯಲಾಗದ ಅನುಭವಗಳು. ಅಮ್ಮನ ಬಗೆಗೆ ಬರೆಯುವಾಗ ಸಂಸಾರವನ್ನು ನಡೆಸಲು, ಮಕ್ಕಳನ್ನು ಬೆಳೆಸಲು, ಆಕೆ ಪಡುವ ಶ್ರಮ ಎಲ್ಲವನ್ನೂ ಸೊಗಸಾಗಿ ನಿರೂಪಿಸಿದ್ದಾರೆ. ನಿಂಬೆ ಇವರ ಕೈಯ್ಯಲ್ಲಿ ಸಿಕ್ಕು, ಹನಿ ಹನಿಯನ್ನೂ ಬಿಡದೆ ಹಿಂಡಿಸಿಕೊಂಡಿದೆ. ಇವರು ತಯಾರಿಸಿದ ಮೈಸೂರುಪಾಕಿಗೆ ಒಂದು ಪರಾಕು ಹೇಳಲೇಬೇಕು. ಇನ್ನು ಕೊರೋನಾ ಕಾಲದಲ್ಲಿ ಫೇಸನ್ನು ಕನ್ನಡಿಯಲ್ಲಿ ನೋಡಿಕೊಂಡದ್ದಕ್ಕಿಂತ ಹೆಚ್ಚಾಗಿ ಫೇಸ್‌ಬುಕ್ಕನ್ನು ನೋಡುವ ಗೀಳು ಹೆಚ್ಚಾಗಿರುವುದರಿಂದ, ಫೇಸ್‌ಬುಕ್ ಲಾಕ್ಡೌನ್ ಆದರೆ ಹೇಗಿರಬಹುದು ಎಂಬ ಊಹೆಯನ್ನು ಬಲು ಸೊಗಸಾಗಿ ಬಣ್ಣಿಸಿದ್ದಾರೆ. ದೇವತೆಗಳ ಝೂಮ್ ಮೀಟಿಂಗ್, ಹಾಗೂ ಕೊರೋನಾ ಕಾಲದ ಮದುವೆಯ ಹಾಸ್ಯಪ್ರಸಂಗಗಳು ನಗೆಯುಕ್ಕಿಸುತ್ತವೆ. ಎಡವಿ ಬಿದ್ದರೆ ಆಳಿಗೊಂದು ಕಲ್ಲು ಎಂಬಂತೆ, ಮನೆ ವಸ್ತುಗಳು ರಿಪೇರಿಗೆ ಬಂದಾಗ ಒಂದರ ಹಿಂದೊಂದು ಕ್ಯೂನಲ್ಲಿ ಕೈಕೊಡುವ ಸಂಗತಿ, ಹುಡುಕಾಟದ ತಲ್ಲಣಗಳಲ್ಲಿ, ಹುಡುಕಿ ಹುಡುಕಿ ಹುಚ್ಚಾಗುವ ಪರಿಯನ್ನು ಹೇಳುವಾಗ ಓದುಗರು ಬೆಚ್ಚಿ ನಗುವಲ್ಲಿ ಸಂದೇಹವಿಲ್ಲ.

ಹೀಗೆ ಪ್ರತಿಯೊಂದು ಬರಹಗಳನ್ನು ನವಿರಾದ ಹಾಸ್ಯದೊಂದಿಗೆ ಆರತಿಯವರು ಪ್ರಸ್ತುತ ಪಡಿಸುವ ರೀತಿ ಮೆಚ್ಚುಗೆಯಾಗುತ್ತದೆ. ಹಾಸ್ಯಬರಹಗಳನ್ನು ಇಷ್ಟಪಡುವವರಿಗೆ ಇವರ ಲಲಿತಪ್ರಬಂಧಗಳು ತುಂಬಾ ಮೆಚ್ಚುಗೆಯಾಗುತ್ತವೆ. ಈ ಹಾಸ್ಯಾಭಿಯಾನ ಹೀಗೇ ನಿರಂತರವಾಗಿ ಸಾಗುತಿರಲಿ ಎಂದು ಹಾರೈಸುತ್ತಾ... **ನಳಿನಿ. ಟಿ. ಭೀಮಪ್ಪ**

# 'ತಂತ್ರ'ಜ್ಞಾನ

**●ಗೋಪಾಲಕೃಷ್ಣ ಹೆಚ್‌ಎನ್**

ನಮ್ಮ ಘನ ಸರ್ಕಾರದ ಸ್ವಾಮ್ಯದ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ತಯಾರಿಸುವ ದೊಡ್ಡ ಸಂಸ್ಥೆಯೊಂದರಲ್ಲಿ ನನ್ನ 4 ದಶಕಗಳ ವಿವಿಧ ಹಂತಗಳ ಸುದೀರ್ಘ ಸೇವಾವಧಿಯಲ್ಲಿ ನಾನು ಕಂಡಂಥ "ನಂಬಿದರೆ ನಂಬಿ, ಬಿಟ್ಟರೆ ಬಿಡಿ" ಈ ಶೀರ್ಷಿಕೆಯಡಿಯಲ್ಲಿ ಬರೆಯಬಹುದಾದಂತಹ ಪ್ರಸಂಗಗಳು ಅಸಂಖ್ಯಾತ. ಅಸಂಖ್ಯಾತ ಅಂದಾಕ್ಷಣ ಸಾವಿರಾರು ಏನಲ್ಲ. ನೂರಾರೂ ಅಲ್ಲ. ಮಾತಿಗಷ್ಟೇ ಹೇಳಿದೆ. ಹತ್ತಾರು ಖಂಡಿತ ಇವೆ. ಹಾಗಂತ ಒಂದ್ನಾಲ್ಕು ಉದುರಿಸಿ ನೋಡೋಣ ಎಂದು ನೀವು ಕೇಳಿದಿರೋ ನನಗೆ ಫಜೀತಿಯಾಗುವುದು ಗ್ಯಾರಂಟಿ. ಯಾಕಂದ್ರೆ ಹಾಳಾದ್ದು ಮರೆವು ಜಾಸ್ತಿ ನಂಗೆ. ಹೇಳೋಕೆ ಹೊರಟ್ರೆ ಯಾ ಬರಿಯುಕ್ಕೆ ಕೂತ್ರೆ ಹೊಳೆಯೋದೇ ಇಲ್ಲ. ಮರೆಯೋ ರೋಗ ಇದ್ದಿದ್ದಕ್ಕೇ ನಾನು ಹಗಲು ರಾತ್ರಿ ಜೀವ ತೇಯ್ದು, ರಕ್ತ ಬಸಿದು ಕೆಲಸ ಮಾಡಿ ನಮ್ಮ ಸಂಸ್ಥೆನ ಉದ್ಧಾರ ಮಾಡಿದ್ರೂ (ಇದು ನಾನಂದ್ಕೊಂಡಿರೋದು. ನಂಥರಾನೆ ಎಲ್ಲಾ ಕಾರ್ಮಿಕರೂ ಛಾನ್ಸ್ ಸಿಕ್ಕಾಗೆಲ್ಲಾ ಹೇಳ್ಕೊಳ್ಳೋದು) ತೀರಾ ದೊಡ್ಡ ಹುದ್ದೇಲಿ ಕೂತ್ಕೊಳ್ಳೊ ಭಾಗ್ಯ ನನಗೆ ಸಿಗಲಿಲ್ಲ ಅಂತ ನನಗೆ ನಾನೇ ಸಮಾಧಾನ ಮಾಡ್ಕೊಳ್ತಿರ್ತೀನಿ.ಮೊದಮೊದಲು ಎಲ್ಲಾ ಚೆನ್ನಾಗಿತ್ತು (ಸುಲಭವಾಗಿತ್ತು). ಇಂಟರ್ವ್ಯೂ ಮಣ್ಣುಮಸಿ ಏನೂ ಮಾಡ್ದೆ ನಾವು ಏನು ಕಡಿದು ಕಟ್ಟೆ ಹಾಕಿದ್ವೋ ಅದನ್ನ ನೋಡ್ಕೊಂಡು ಪ್ರೊಮೋಷನ್ ಕೊಟ್ಟು ಮುಂದಕ್ಕೆ ನೂಕ್ತಿದ್ರು. ಆ ಮೇಲೆ ಬಂತು ನೋಡಿ ಕಷ್ಟ. ಏಳೆಂಟು ಜನ ದೊಡ್ಡೊಡ್ ತಿರುಗೊ ಖುರ್ಚಿ ಮೇಲೆ ಕೂತ್ಕೊಂಡುಎದುರುಗಡೆ ಸಣ್ಣ ಖುರ್ಚಿ ಮೇಲೆ ನಮ್ಮನ್ನ ಕೂರುಸ್ಕೊಂಡು ಏನೇನೋ ಕೇಳ್ತಿದ್ರು.. ನಾವು ಮಾಡಿದ ಕೆಲಸ, ಮಾಡ್ತಾ ಇರೋ ಕೆಲಸ, ಮಾಡ್ಬೇಕು ಅಂದ್ಕೊಂಡಿರೋ ಕೆಲಸ, ಇನ್ಯಾರೋ ಎಲ್ಲೋ ಯಾವ ದೇಶದಲ್ಲೋ ಆಗ್ಲೇ ಮಾಡಿರೊ ಕೆಲಸ ಇತ್ಯಾದಿ ಇತ್ಯಾದಿ ಎಲ್ಲಾ ಕೇಳ್ತಿದ್ರು. ನಾನಾಗ್ಲೆ ಹೇಳ್ದ್ಹಾಗೆ ನನಗೆ ಎಲ್ಲಾ ಗೊತ್ತಿರ್ತಿದ್ವು. ಆದ್ರೆ ಹೇಳೋಣ ಅಂತ ಬಾಯಿ ತೆಗೆಯೋದ್ರೊಳಗೆ ಎಲ್ಲಾ ಮರ್ತು ಹೋಗ್ತಿದ್ವು. ಅಯ್ಯೋ ಸ್ಸಾರಿ ಏನೋ ಹೇಳುಕ್ಕೆ ಹೋಗಿ ಇನ್ನೇನೋ ಹೇಳ್ತಿದೀನಿ. ವಾಪಸ್ ವಿಷಯಕ್ಕೆ ಬರ್ತೀನಿ. ಇಲ್ಲಿದೆ ನೋಡಿ ಒಂದು ಪ್ರಸಂಗ.

ದೊಡ್ಡ ದೊಡ್ಡ ಕೈಗಾರಿಕಾ ಸಂಸ್ಥೆಗಳಲ್ಲಿ ಬೇರೆ ಬೇರೆ ಇಲಾಖೆಗಳು ಇರುವ ಹಾಗೆ ಕೈಗಾರಿಕಾ ತಂತ್ರಜ್ಞಾನ ಇಲಾಖೆ ಅಂತ ಒಂದು ಇಲಾಖೆನೂ ಇರುತ್ತೆ. ಅದು ಒಂಥರಾ ವಿಶಿಷ್ಟವಾದ ಇಲಾಖೆ. ಒಂದು ರೀತಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಅಂತಾರಲ್ಲ ಹಾಗೆ. 'ಮಿಸ್ಸೆಲೇನಿಯಸ್ ವರ್ಕ್ಸ್ ಡಿಪಾರ್ಟ್‌ಮೆಂಟ್' ಅಂತ ಕರೆದರೆ ಅದಕ್ಕೆ ಮರ್ಯಾದೆ ಜಾಸ್ತಿ ಅಂತ ನನ್ನ ಅಭಿಪ್ರಾಯ. ಯಾರಿಗೂ ವಹಿಸಲಾಗದ ಕೆಲಸ ಯಾ ಕಡತ ಏನಾದರೂ ಇದ್ದರೆ ಅದು ಸೀದಾ ಬಂದು ಬೀಳುವುದು ಈ ಇಲಾಖೆಗೆ ಅನ್ನೋದು ನನ್ನಂತೆ ಆ ಇಲಾಖೆಯಲ್ಲಿ ಕೆಲಸ ಮಾಡಿದವರೆಲ್ಲರ ಅನುಭವದ ಮಾತು. ಹಾಗಂತ ಈ ಇಲಾಖೇಲಿ ಮಣ್ಣು ಹೊತ್ತಿರೋರೆಲ್ಲಾ ಅಷ್ಟಕ್ಕಷ್ಟೆ ಅಂದ್ಕೊಂಡ್ರೆ ಅದು ಶುದ್ಧ ತಪ್ಪು. ಬಹಳ ಜನ ಮೇಧಾವಿಗಳು ಈ ಇಲಾಖೆಯಲ್ಲೇ ಬೆಳೆದು ಮೇಲೆ ಬಂದು ದೊಡ್ಡ ದೊಡ್ಡ ಹುದ್ದೆಗಳನ್ನ ಅಲಂಕರಿಸಿದ್ದಾರೆ ಅನ್ನೋದೂ ಸತ್ಯ.ಯಾಕಂದ್ರೆ ಸಂಸ್ಥೆಗೆ ಹೊಸಹೊಸತಂತ್ರ ಜ್ಞಾನದ ಪರಿಚಯ ಮಾಡಿಸಿ

ಯಶಸ್ವಿಯಾಗಿ ಕಾರ್ಯಗತ ಮಾಡುವುದೂ ಈ ಇಲಾಖೆಯ ಹೊಣೆ. ಈಗ ನಾನು ಹೇಳುಕ್ಕೆ ಹೊರಟಿರೋದು ಇದೇ ಇಲಾಖೆಯಲ್ಲಿ ನಾನು ವ್ಯವಸ್ಥಾಪಕನಾಗಿದ್ದಾಗ ನಡೆದ ಒಂದು ಪ್ರಸಂಗ.

ನಮ್ಮ ವಿಭಾಗದ ಮುಖ್ಯಸ್ಥರಿಗೆ ಅದೇನೋ ಒಂದು ಯೋಚನೆ ಬಂತು. ಅವರ ಆಫೀಸ್ಗೆ ಸ್ವಲ್ಪ ಗೆಟಪ್ ಕೊಟ್ಟು ಚೆನ್ನಾಗಿ ಕಾಣೋ ಥರ ಮಾಡ್ಬೇಕು ಅಂತ. ಒಳ್ಳೆ ಉದ್ದೇಶ ಬಿಡಿ. ಮಾಡಲೇಬೇಕಿತ್ತು. ಮಾಡಿದ್ರು. ಆಫೀಸು, ಮೀಟಿಂಗ್ ರೂಮು ಎರಡನ್ನೂ ಸೇರಿಸಿ ಒಂದು ಟೂ ಇನ್ ಒನ್ ಚೇಂಬರ್ ಮಾಡಿದ್ರು. ಅಂಥ ಚಂದ ಕಾಣೋ ಮೀಟಿಂಗ್ ಹಾಲ್‌ಗೆ ಒಂದು ಲಕ್ಷಣವಾದ ಗೋಡೆ ಗಡಿಯಾರ ಬೇಡ್ವೆ? ವಿಪರ್ಯಾಸ ಅಂದ್ರೆ ನಮ್ಮ ಮುಖ್ಯಸ್ಥರಿಗೆ ಗಡಿಯಾರ ಅಂದ್ರೆ ಅಲರ್ಜಿ. ಅವರ ಬಯಲಾಜಿಕಲ್ ಕ್ಲಾಕ್ ಎಷ್ಟು ಚೆನ್ನಾಗಿ ಕೆಲಸ ಮಾಡ್ತಿತ್ತು ಅಂದ್ರೆ ಅವರ ಟೈಂ ಮ್ಯಾನೇಜ್ಮೆಂಟ್ ಬಗ್ಗೆ ಇಡೀ ಫ್ಯಾಕ್ಟರಿನೇ ಹೆಮ್ಮೆ ಪಡ್ತಿತ್ತು.ಆದರೆ ಯಾವ ಗಡಿಯಾರವೂ ಅವರ ಕೈನ ಅಲಂಕರಿಸಿದ್ದು ಮಾತ್ರ ಯಾರೂ ನೋಡಿಲ್ಲ. ಆದರೂ ನವೀಕರಣಗೊಂಡ ಅವರ ಬೃಹತ್ ಚೇಂಬರ್‌ಗೆ ಅಲಂಕಾರವಾಗಿ ಕಾಣೊ ಒಂದ್ ಗೋಡೆ ಗಡಿಯಾರ ಇರಲಿ ಅಂತ ಅವರು ಮನಸ್ಸು ಮಾಡಿದ್ದು ಆಶ್ಚರ್ಯ. ತಂದು ಹಾಕೋರು ಯಾರು? ನಾನಾಗ್ಲೆ ಹೇಳ್ದ ಹಾಗೆ ಇಂಥ 'ಮಿಸ್ಸೆಲೇನಿಯಸ್, ಅರ್ಥಾತ್ ಜುಜುಬಿ ಕೆಲಸಗಳನ್ನ ಮಾಡೋದಕ್ಕೇ ಇರೋದು ಈ ಕೈಗಾರಿಕಾ ತಂತ್ರಜ್ಞಾನ ಇಲಾಖೆ ಅಂತ ಎಲ್ಲರಿಗೂ ಗೊತ್ತು ಕಾರ್ಖಾನೆಯಲ್ಲಿ. ಸರಿ. ಬುಲಾವ್ ಬಂತು ನನಗೆ. ಅವರ ಆಫೀಸ್ ಪಕ್ಕಾನೇ ನನ್ನ ಆಫೀಸು. ಈ ಇಲಾಖೆಯ ಗಮ್ಮತ್ತೇ ಅದು. ಮುಖ್ಯಸ್ಥರಿಗೆ ಥಟ್ಟಂತ ಕೆಲ್ಸ ಮಾಡಿಕೊಡೋರು ಪಕ್ಕದಲ್ಲೇ ಇರ್ಬೇಕು. ಆಫೀಸಲ್ಲೇ ಇದ್ದೆ. ಕರೆದ ಕೂಡ್ಲೆ ಹೋದೆ.

"ನೋಡಿದ್ರೇನ್ರೀ ನನ್ನ ಹೊಸ ಚೇಂಬರ್‌ನ? ಹ್ಯಾಗಿದೆ?" ಮುಖ್ಯಸ್ಥರ ಉವಾಚ.

"ತುಂಬಾ ಚೆನ್ನಾಗಿದೆ ಸರ್. ನಿಮ್ಮ ಸ್ಥಾನಕ್ಕೆ ತಕ್ಕ ಹಾಗೆ ಇದೆ. ಕಂಗ್ರಾಜುಲೇಷನ್ಸ್" ಮನಃ ಪೂರ್ವಕವಾಗಿ ಹೇಳ್ದೆ.

"ಒಂದ್ ಕೆಲ್ಸ ಮಾಡ್ರಿ. ಇದಕ್ಕೆ ಒಪ್ಪೊವಂಥ ಲೇಟೆಸ್ಟ್ ಮಾಡೆಲ್ ಬ್ರಾಂಡೆಡ್ ಗಡಿಯಾರ ಒಂದನ್ನ ತಂದ್ ಹಾಕ್ರಿ. ಯಾವ್ದೊ ರಸ್ತೆ ಪಕ್ಕದ ಅಂಗಡಿಯಿಂದ ತರ್ಬೇಡಿ."

"ಡನ್ ಸರ್" ಅಂದು ಜಾಗ ಖಾಲಿ ಮಾಡ್ದೆ.

ಸಣ್ಣಪುಟ್ಟ ಕೆಲಸಗಳಿಗೆ ದುಡ್ಡು ಎಷ್ಟು ಬೇಕಾದ್ರೂ ಖರ್ಚು ಮಾಡೋಕೆ ನಮಗೆ ಸ್ವಾತಂತ್ರ್ಯ ಕೊಟ್ಟಿತ್ತು ನಮ್ಮ ಜನರಲ್ ಆಡಳಿತ ಮಂಡಳಿ (ಮ್ಯಾನೇಜ್‌ಮೆಂಟು). ಸೀದಾಸಾದಾ ಮಾಡಬೇಕು ಅಷ್ಟೆ. ಎಲ್ಲವುದಕ್ಕು ಒಂದು ರೀತಿನೀತಿ ಇರತ್ತೆ. ಅದನ್ನ ಫಾಲೋ ಮಾಡಬೇಕು. ನಾನು ಮಾಡಿದ್ದೂ ಅಷ್ಟೆ. ಒಂದೆರಡು ಕಡೆ ಫೋನಾಯಿಸಿ ಖಚಿತ ಪಡಿಸಿಕೊಂಡು ಸುಮಾರು 800 ರೂ ಆಗಬಹುದೆಂದು ಅಂದಾಜು ಮಾಡಿದೆ. ಖರ್ಚು ಮಾಡಲು ನಮ್ಮ ಮುಖ್ಯಸ್ಥರ ಲಿಖಿತ ಅನುಮತಿ ಬೇಕಿತ್ತು. ಒಂದು ಟಿಪ್ಪಣಿ ರೆಡಿ ಮಾಡಿಅದಕ್ಕೆ ಒಂದು ಕಡತದ ರೂಪ ಕೊಟ್ಟು ಅದನ್ನು ಹಣಕಾಸು ಇಲಾಖೆಯ ಮೂಲಕ ಮುಖ್ಯಸ್ಥರಿಗೆ ಮಂಜೂರಾತಿಗಾಗಿ ಕಳಿಸಬೇಕಾದ್ದು ನಿಯಮ. ನನ್ನ ಟಿಪ್ಪಣಿಯಲ್ಲಿ "ನಮ್ಮವಿಭಾಗದಲ್ಲಿ ಒಂದು ವಾಲ್ ಕ್ಲಾಕ್‌ನ ಅವಶ್ಯಕತೆ ಇದೆ.

ಅದನ್ನು ಖರೀದಿ ಮಾಡಲು ರೂ.800ನ್ನು ಮಂಜೂರು ಮಾಡಬೇಕಾಗಿ ವನಂತಿ." ಎಂದು ಸಂಕ್ಷಿಪ್ತವಾಗಿ ಬರೆದು ಅನುಮೋದನೆಗಾಗಿ ಹಣಕಾಸು ಇಲಾಖೆಗೆಕಳಿಸಿದೆ. (ಒಂದು ರೂಪಾಯಿ ಖರ್ಚು ಮಾಡಿದರೂ ಅದು ಹಣಕಾಸು ಇಲಾಖೆಯ ಗಮನಕ್ಕೆ ಬರಲೇಬೇಕು.)

ಮಾರನೇ ದಿನವೇ ನನ್ನ ಕಡತ ವಾಪಸ್ ಬಂತು. ಹಣಕಾಸು ಇಲಾಖೆಯ ಅಧಿಕಾರಿಯು ಬರೆದ ಷರಾ ಇಂತಿತ್ತು. ".............. ವಾಲ್ ಕ್ಲಾಕ್ ಖರೀದಿಸಲು ಸಂಸ್ಥೆಯ ನಿಯಮಾವಳಿಯ ಪ್ರಕಾರ ಅವಕಾಶವಿಲ್ಲ."

ಮುಖ್ಯಸ್ಥರನ್ನು ಮುಖತಃ ಭೇಟಿ ಮಾಡಿ ಕಡತ ತೋರಿಸಿದೆ. ನಮ್ಮ ಇಲಾಖೆಯಲ್ಲೇ ಬಹಳ ವರ್ಷಗಳು ಕೆಲಸ ಮಾಡಿ ಮೇಲೆ ಬಂದು ಮುಖ್ಯಸ್ಥರಾಗಿದ್ದ ಮೇಧಾವಿಗಳು ಅವರು. ಚುರುಕುಮತಿಯವರು, ಅನುಭವಸ್ಥರು ಜೊತೆಗೆ ಹಾಸ್ಯಪ್ರಿಯರು ಕೂಡ. ಹಣಕಾಸು ಇಲಾಖೆಯು ಬರೆದಿದ್ದ ಷರಾದ ಮೇಲೆ ಒಂದ್ ಸಲ ಕಣ್ಣಾಡಿಸಿ ಹೇಳಿದ್ರು. "ನೋಡೀಪ್ಪಾ, ಈ ಹಣಕಾಸು ವಿಭಾಗ ಅನ್ನೋದು ಒಂದು ರೀತಿಯ ನೆಸ್ಸೆಸರಿ ಈವಿಲ್ ಅಂತಾರಲ್ಲ ಹಾಗೆ. ಇಲ್ದೆ ಇದ್ರೂ ಕಷ್ಟ ಇದ್ರೂ ಕಷ್ಟ. ಅದರ ಕಾರ್ಯವ್ಯಾಪ್ತಿಯೇ ಹಾಗೆ. ಎಲ್ಲಾ ಕೆಲಸ ಕಾರ್ಯಗಳಿಗೂ ಹಣ ಒದಗಿಸಬೇಕು. ಜೊತೆಜೊತೆಗೆ ಅದಕ್ಕೆ ಕಡಿವಾಣಾನೂ ಹಾಕಬೇಕು. ಹಾಗಾಗಿ ಬಂದ ಕಡತಗಳನ್ನ ಮುಂದಕ್ಕೆ ಕಳಿಸುವುದರ ಬದಲು ಹಿಂದಕ್ಕೆ ತಳ್ಳುವುದಕ್ಕೆ ಏನಾದರೂ ಒಂದು ಕಾರಣ ಹುಡುಕುವುದರಲ್ಲಿ ಅವರು ನಿಸ್ಸೀಮರು. ಪರವಾಗಿಲ್ಲ. ಒಂದ್ ಕೆಲ್ಸ ಮಾಡಿ. ಒಂದ್ ವಾರ ಸುಮ್ಮನಿದ್ ಬಿಡಿ. ಆಮೇಲೆ ಇನ್ನೊಂದ್ ಕಡತ ಕಳಿಸಿ. ಅದರಲ್ಲಿ ವಾಲ್ ಕ್ಲಾಕ್ ಅನ್ನೋದರ ಬದಲು ಟೈಮ್ ಮೆಝುರಿಂಗ್ ಮೆಶೀನ್ ಅಂತ ಬರೀರಿ." ನಿಮ್ ಕೆಲ್ಸ ಆಗ್ದೆ ಇದ್ರೆ ಕೇಳಿ."

ಅವರು ಹೇಳಿದ ಒಂದು ವಾರದ ಮೇಲೆ ನಂದೂ ಒಂದು ವಾರ ಸೇರಿಸಿ 15 ದಿನ ಬಿಟ್ಟು ಕಡತ ಪುನಃ ಕಳಿಸಿದೆ. ದೊಡ್ಡೋರು ಹೇಳಿದ ಹಾಗೆ ಬದಲಾವಣೆ ಮಾಡಿ. ಮುಂದಿನದ್ದು ಚರಿತ್ರೆ. ಆ ಗೋಡೆ ಗಡಿಯಾರ ಈಗಲೂ ನನ್ನನ್ನೂ, ಹಣಕಾಸಿನ ವಿಭಾಗವನ್ನೂ, ಆ ಮುಖ್ಯಸ್ಥರನ್ನೂ ನೆನಪಿಸುತ್ತಾ ಅದೇ ಚೇಂಬರಿನಲ್ಲಿ ಸಮಯಮಾಪನ ಯಂತ್ರವಾಗಿ ಅವಿರತವಾಗಿ ದುಡಿಯುತ್ತಿದೆ ಅಂತ ಅಲ್ಲಿ ಈಗಲೂ ಕೆಲಸ ಮಾಡುತ್ತಿರುವ ನನ್ನ ಸ್ನೇಹಿತರು ಸಿಕ್ಕಾಗ ಜ್ಞಾಪಿಸ್ತಿರ್ತಾರೆ.

■

---

## ಯಾವತ್ತಿನದು?

ತಮಿಳು ದಂಪತಿ ದೆಹಲಿಗೆ ಹೊರಟಿದ್ದರು. ನಾಗಪುರ ಸ್ಟೇಷನ್ ಬಂದಾಗ ಹೆಂಡತಿಗೆ ಒಂದು ತಮಿಳು ಮ್ಯಾಗಜೈನ್ ಸಿಕ್ಕರೆ ಓದುತ್ತಾ ಕೂಡಬಹುದು ಎಂದೆನಿಸಿತು. ಆಗ ಪ್ಲಾಟ್‌ಫಾರ್ಮ್ ಮೇಲೆ 'ಪೇಪರ್ ಪೇಪರ್..' ಎಂದು ಕೂಗುತ್ತಿದ್ದವನು ಕಣ್ಣಿಗೆ ಬಿದ್ದ. ಈಕೆ ಸಡಗರದಿಂದ ಅವನ್ನು ಕೂಗಿ 'ಕಲ್ಕಿ' ಹೈ? ಎಂದು ತಮ್ಮ ಫೆವರಿಟ್ ಪತ್ರಿಕೆಯ ಹೆಸರು ಹೇಳಿ ಕೇಳಿದರು.

ಅವನು 'ಕಲ್ ಕಿ? ನೈ, ಸಬ್ ಆಜ್ ಕಾ ಹೈ..' ಎಂದ.

# ಮದುವೆಯ ಗಾಸಿಪ್

●ವಿ. ಗಣೇಶ್

"ಅಕ್ಕ ವಿಷಯ ಗೊತ್ತಾಯ್ತು? ಗಣೇಶ ಯಾರೋ ಒಬ್ಬ ಮುಸ್ಲಿಮ್ ಹುಡುಗಿಯನ್ನು ಮದುವೆಯಾದನಂತೆ" ರಾಮಣ್ಣ ಹೇಳಿದಾಗ ಅಕ್ಕನಿಗೆ ತಲೆ ಸಿಡಿದು ಹೋದಂತಾಯಿತು.

ರಾಮಣ್ಣ ನನ್ನ ಅತ್ತೆ ಮಗ ಮಗ. ಅವನು ನಮ್ಮ ಕುಟುಂಬದ ಒಬ್ಬ ಸದಸ್ಯನಂತೆ. ಬಾಲ್ಯದಲ್ಲೇ ಅನಾಥನಾದ ಅವನನ್ನು ನಮ್ಮ ತಂದೆಯವರೇ ತಂದು ಹಾಕಿದ್ದರು. ಈಗ ಅವನು ಓದಿ ಒಳ್ಳೆಯ ಕೆಲಸದಲ್ಲಿದ್ದಾನೆ. ಆಗಾಗ್ಗೆ ನಮ್ಮ ಅಕ್ಕನ ಮನೆಗೆ ಬರುತ್ತಿರುತ್ತಾನೆ.

ನಾನು ಸಹ ಅಕ್ಕನ ಮನೆಯಲ್ಲಿದ್ದು ಓದಿ ಆಗ ಭದ್ರಾವತಿಯಲ್ಲಿ ಉಪನ್ಯಾಸಕ ವೃತ್ತಿಯನ್ನು ಮಾಡುತ್ತಿದ್ದೆ. ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದುದರಿಂದ ಅವರಿಗೆ ಸಮಾಧಾನವಿರಲಿಲ್ಲ. ಹಾಗಾಗಿ ನನಗೆ  ಮದುವೆ ಮಾಡಬೇಕೆಂದು ತೀರ್ಮಾನಿಸಿ, ಅಕ್ಕ-ಭಾವನವರು ಸಾಕಷ್ಟು ಕಡೆ  ಸೂಕ್ತ ಕನ್ಯೆಗಾಗಿ ಹುಡುಕುತ್ತಿದ್ದರು. ಆ ಸಂದರ್ಭದಲ್ಲಿ ರಾಮಣ್ಣನು ಸಿಡಿಲೆರಗಿದಂತಹ ಈ ವಾರ್ತೆಯನ್ನು ತಂದಿದ್ದನು.

"ಏನು? ನೀನು ಹೇಳುತ್ತಿರುವುದು. ತಮಾಷೆಗೂ ಕೂಡ ಇಂತಹ ಮಾತುಗಳನ್ನು ಆಡಬೇಡ. ಗಣೇಶ ಎಂದರೇನು? ಅವನು ಮುಸ್ಲಿಂ ಕನ್ಯೆಯನ್ನು ವಿವಾಹವಾಗುವುದು ಎಂದರೇನು? ಅವನೇನೆಂದು ನನಗೆ ಗೊತ್ತಿಲ್ಲವೇ?" ಎನ್ನುತ್ತಾ ಅಕ್ಕ ಕೋಪದಿಂದ ಪ್ರತಿಕ್ರಿಯಿಸಿದಳು.

"ಇಲ್ಲ ಅಕ್ಕ, ನಾನು ಹೇಳುತ್ತಿರುವುದು ನಿಜ. ನಿನ್ನೆ ತೀರ್ಥಹಳ್ಳಿಗೆ ಹೋಗಿದ್ದೆ ಅಲ್ಲಿ ವೆಂಕಟ್‌ಮಾವ ಸಿಕ್ಕಿದ್ದರು. ಅವರೇ ಈ ವಿಷಯವನ್ನು ನನಗೆ ತಿಳಿಸಿದರು. ಅವರ ಮನೆಯಲ್ಲಿ ಸುಮ ಎಂಬ ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವ ಹುಡುಗಿ ಬಾಡಿಗೆಗೆ ಇದ್ದಾಳೆ. ಅವಳೇ ಈ ವಿಷಯವನ್ನು ಹೇಳಿದಳಂತೆ. ಮಾವ ಅವಳ ಬಳಿ ಗಣೇಶನ ಪರವಾಗಿ ಎಷ್ಟೇ ವಾದಿಸಿದರೂ ಮದುವೆ ನಡೆದಿರುವುದು ಸತ್ಯ ಎಂದಳಂತೆ. ಅವರು ತುಂಬಾ ಆತಂಕದಿಂದ ನನ್ನಲ್ಲಿ ಈ ಬಗ್ಗೆ ವಿಚಾರಿಸಿದರು. ನಾನು ನೀನು ಹೇಳಿದಂತೆ ಈ ವಿಷಯವನ್ನು ಸಾರಾಸಗಟಾಗಿ ತಿರಸ್ಕರಿಸಿದೆ. ಆದರೆ ಅವರ ಪ್ರಕಾರ ಬ್ಯಾಂಕಿನಲ್ಲಿರುವ ಬಹಳಷ್ಟು ಮಂದಿ ತಮಗೆ ಪರಿಚಯ ಇರುವವರು ಇದೇ ವಿಷಯವನ್ನು ಮಾತನಾಡುತ್ತಿದ್ದಾರೆ ಎಂದರು. ಅದಕ್ಕಾಗಿ ಈ ವಿಷಯ ಸತ್ಯವೇ ಇರಬೇಕು" ಎಂದು ಹೇಳಿದರು.

"ಯಾವ  ಹುತ್ತದಲ್ಲಿ ಯಾವ ಹಾವು ಇದೆಯೋ?" ಯಾರಿಗೆ ಗೊತ್ತು? ನಮ್ಮ ಗಣೇಶ ಹುಡುಗಿಯರ ಹತ್ತಿರ ಚೆನ್ನಾಗಿ ಮಾತನಾಡುತ್ತಾನೆ, ಆದ್ದರಿಂದ ಯಾರೋ ಬಲೆ ಬೀಸಿರಬಹುದು" ಎಂದುಕೊಂಡು ನಾನು ಯಾವ ಪ್ರತಿಕ್ರಿಯೆಯನ್ನು ಕೊಡದೆ ಹಾಗೇ ಬಂದೆ. ನಿನ್ನಷ್ಟೇ ನನಗೂ ತುಂಬಾ ಬೇಸರವಾಗಿದೆ" ಎಂದು ತನ್ನ ನೋವನ್ನು ವ್ಯಕ್ತಪಡಿಸಿದ.

ರಾಮಣ್ಣ ಮತ್ತು ಅಕ್ಕ ನನ್ನ ಬಗ್ಗೆ ಸಾಕಷ್ಟು ಚರ್ಚಿಸಿದರು. 'ಹೋಗಿ ಹೋಗಿ ಒಬ್ಬ ಮುಸ್ಲಿಂ ಹುಡುಗಿಯನ್ನು ಮದುವೆಯಾದ ಎಂದರೆ ನಾವು ಸಮಾಜಕ್ಕೆ ಹೇಗೆ ಮುಖ ತೋರಿಸುವುದು?' ಎಂದು ವಿಲವಿಲ ಒದ್ದಾಡಿದರು. ಆ  ಸಮಯಕ್ಕೆ

ಸರಿಯಾಗಿ ಆಫೀಸಿನಿಂದ ಭಾವ ಉಡುಪರು ಬಂದರು. ವಿಷಯ ತಿಳಿದ ಅವರೂ ಸಹ ಪಾತಾಳಕ್ಕೇ ಇಳಿದು ಹೋದರು. ಅಕ್ಕ–ಭಾವ ಎಂದರೆ ನನಗೆ ತಂದೆ ತಾಯಿಯಂತಿದ್ದರು. ನಾನು ಅವರನ್ನು ಕೇಳದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ ಅಂತಹುದರಲ್ಲಿ ಮದುವೆಯಂತಹ ವಿಷಯದಲ್ಲಿ ಏಕಪಕ್ಷೀಯವಾಗಿ ನಾನು ತೀರ್ಮಾನ ತೆಗೆದುಕೊಂಡುದುದನ್ನು ಕೇಳಿ ಪೂರ್ತಿಯಾಗಿ ಕುಗ್ಗಿಹೋದರು. ಏನಾದರೂ ವಿಚಾರಿಸೋಣ ಎಂದರೆ ಆಗಿನ ಕಾಲದಲ್ಲಿ ಈಗಿನಂತೆ ಫೋನಿನ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಬೆಳಗಿನವರೆಗೂ ಅವರು ಕಾಯಲೇಬೇಕಿತ್ತು. ಬೆಳಿಗ್ಗೆ ಕಾಲೇಜಿಗೆ ಫೋನ್ ಮಾಡಿ ವಿಚಾರಿಸಬೇಕು ಎಂದು ತೀರ್ಮಾನಿಸಿದರು. ಇಡೀ ರಾತ್ರಿ ಗಂಡ ಹೆಂಡತಿ ಇಬ್ಬರೂ ನಿದ್ದೆಯನ್ನೇ ಮಾಡಲಿಲ್ಲ

ಮಾರನೆಯ ದಿನ ಬೆಳಿಗ್ಗೆ ಗಡಿಬಿಡಿಯಿಂದ ಭಾವನವರು ಪೋಸ್ಟ್ ಆಫೀಸಿನ ಕಡೆಗೆ ಹೊರಟರು. ಮನೆಯಲ್ಲಿ ಅಕ್ಕನು ಆತನು ತರುವ ಮಾಹಿತಿಗಾಗಿ ಬಕಪಕ್ಷಿಯಂತೆ ಕಾಯುತ್ತ ಕುಳಿತಿದ್ದಳು.

ಅಷ್ಟೊತ್ತಿಗೆ ಸರಿಯಾಗಿ ಸುಮಾರು ಇಪ್ಪತ್ತು ಹುಡುಗರ ಗುಂಪೊಂದು ಅವರ ಮನೆಗೆ ಆಗಮಿಸಿತು. ಮೊದಲೇ ಹೆದರುತ್ತಾ ಕುಳಿತಿದ್ದ ಅಕ್ಕನಿಗೆ ಹುಡುಗರ ಗುಂಪನ್ನು ನೋಡಿ ಏನೋ ಅಪಾಯ ಕಾದಿದೆ ಎಂಬುದರ ಸೂಚನೆ ಸಿಕ್ಕಿದಂತಾಯಿತು. ಏನೂ ತೋಚದೆ ಚಿಂತಿಸುತ್ತಿರುವಾಗ, ಅವರ ಜೊತೆಯಲ್ಲೇ ಬಂದ ಉಪನ್ಯಾಸಕರು ಒಳಗೆ ಬರುತ್ತಾ, "ನಮಸ್ಕಾರ ತಾಯಿ, ನಾನು ಬಸವರಾಜ್ ಅಂತ, ಭದ್ರಾವತಿಯಿಂದ ಬರುತ್ತಿದ್ದೇನೆ. ಇವರೆಲ್ಲ ನಮ್ಮ ಕಾಲೇಜಿನ ವಿದ್ಯಾರ್ಥಿಗಳು" ಎನ್ನುತ್ತಿರುವಾಗ ಅವರಿಗೆ ಮುಂದೆ ಮಾತನಾಡಲು ಅವಕಾಶವನ್ನೇ ಕೊಡದ ಅಕ್ಕ,

"ಯಾಕೆ, ಯಾಕೆ ಏನಾಯಿತು? ನಮ್ಮ ಗಣೇಶನ ಬಂದಿದ್ದಾನ? ಎಲ್ಲಿ ಕಾಣಿಸುತ್ತಿಲ್ಲವಲ್ಲ? ಎಲ್ಲಿಗೆ ಹೋದ" ಎಂದು ಆತಂಕದಿಂದ ಕೇಳತೊಡಗಿದರು

"ಅವರಿಗೆ ರಜೆ ಇರಲಿಲ್ಲ, ಹಾಗಾಗಿ ಅವರು ಅಲ್ಲೇ ಕಾಲೇಜಿನಲ್ಲಿ ಇದ್ದಾರೆ. ಮುಂದಿನ ವಾರ ಬರುತ್ತೇನೆ ಎಂದು ಹೇಳಲು ತಿಳಿಸಿದ್ದಾರೆ" ಎಂದು ಉಪನ್ಯಾಸಕರು ತಿಳಿಸುತ್ತಿರು. ಆಗ ಮಧ್ಯೆ ಬಾಯಿ ಹಾಕಿದ ಅಕ್ಕ,

"ನಮ್ಮ ಗಣೇಶನಿಗೆ ಮದುವೆಯಾಯಿತು ಎಂಬ ವಿಷಯ ಕೇಳಿದೆವು ನಿಜವೇ? ಮದುವೆಯಾಗಿದ್ದರೆ ಯಾವಾಗ ಯಾರ ಜೊತೆಯಲ್ಲಿ ಮದುವೆಯಾಯಿತು?" ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳತೊಡಗಿದರು.

"ನೀವೇಕೆ ಇಷ್ಟೊಂದು ಆತಂಕ ಪಡುತ್ತಿದ್ದೀರಿ? ಅಕ್ಕ–ಭಾವ ನನಗೆ ಕನ್ಯೆಯನ್ನು ಹುಡುಕುತ್ತಿದ್ದಾರೆ ಎಂದು ಯಾವಾಗಲೂ ಅವರೇ ಹೇಳುತ್ತಿರುತ್ತಾರೆ. ಅಂತಹುದರಲ್ಲಿ ಮದುವೆಯಾಗಿದ್ದರೆ ಅವರು ನಿಮಗೆ ಹೇಳದೇ ಮದುವೆ ಯಾಗುತ್ತಾರಾ? ನಾನು ಹುಡುಗರ ಜೊತೆಗೆ ಇಲ್ಲಿಗೆ ಹೊರಡುವವರೆಗೆ ಅವರು ಮದುವೆಯಾಗಿರಲಿಲ್ಲ. ಅವರೇ ಏಕೆ ನಮ್ಮ ರೂಮಿನಲ್ಲಿರುವ ಐದೂ ಮಂದಿ ಉಪನ್ಯಾಸಕರಲ್ಲಿ ಯಾರಿಗೂ ಇನ್ನೂ ಮದುವೆಯಾಗಿಲ್ಲ" ಎಂದು ನಗುತ್ತಾ ನುಡಿದರು.

"ಇಲ್ಲಿಯ ಕಾಲೇಜಿನಲ್ಲಿ ಈ ದಿನ ಸ್ಪೋರ್ಟ್ಸ್ ನಡೆಯುತ್ತದೆ. ಅದಕ್ಕಾಗಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನು ಕರೆದುಕೊಂಡು ನಾನು ಬಂದಿದ್ದೇನೆ. ನಿಮ್ಮ

ಮನೆಗೆ ಹೋಗಲೇಬೇಕು ಎಂದು ಹೇಳಿದ್ದರಿಂದ, ಈಗ ತಾನೇ ಬಸ್ಸಿನಿಂದ ಇಳಿದ ನಾವು ನೇರವಾಗಿ ನಿಮ್ಮ ಮನೆಗೇ ಬಂದಿದ್ದೇವೆ" ಎಂದರು.

"ಅಯ್ಯೋ! ಇಷ್ಟೇನಾ ವಿಷಯ, ನಾನು ಹೆದರಿ ಹೋಗಿದ್ದೆ. ನಿನ್ನೆಯ ದಿನ ಆತನು ಮುಸ್ಲಿಂ ಹುಡುಗಿಯೊಬ್ಬಳನ್ನು ಮದುವೆಯಾದ ಎಂದು ಯಾರೋ ವರ್ತಮಾನ ಕೊಟ್ಟರು. ಅದನ್ನು ಕೇಳಿ ನಾವೆಲ್ಲ ಹೆದರಿ ಹೋಗಿದ್ದೆವು. ಈಗ ಹುಡುಗರು ಬಂದಿರುವುದು ಗಲಾಟೆ ಮಾಡುವುದಕ್ಕೆ ಎಂದು ಭಯ ಪಟ್ಟಿದ್ದೆ." ಎನ್ನುತ್ತಾ ಅಕ್ಕ ಸಮಾಧಾನದ ನಿಟ್ಟುಸಿರು ಬಿಟ್ಟರು.

"ಏನಕ್ಕ ನೀವು ಹೇಳುವುದು? ನಿಮ್ಮ ಗಣೇಶ್ ಏನೆಂದು ನಿಮಗೆ ಗೊತ್ತಿಲ್ಲವೇ? ನಿಮ್ಮನ್ನೆಲ್ಲ ಬಿಟ್ಟು ಅವರು ಮದುವೆಯಾಗಲು ಸಾಧ್ಯವೇ?" ಎನ್ನುತ್ತಾ ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ವಿಷಯವನ್ನು ಕೇಳಿದ ಅಕ್ಕನಿಗೆ ಹಾಲು ಕುಡಿದಷ್ಟು ಸಂತೋಷವಾಯಿತು. ಬೇಡ ಬೇಡವೆಂದರೂ ಕೇಳದೆ ಅವರು ಆಗಮಿಸಿದ ಎಲ್ಲ ಮಕ್ಕಳಿಗೂ ಕಾಫಿ ತಿಂಡಿ ಮಾಡಿ ತೃಪ್ತಿಯಾಗುವಂತೆ ನೀಡಿದರು. ಅವರು ಹೊರಟಾಗ 'ದಯವಿಟ್ಟು ಆಫೀಸಿನಲ್ಲಿ ನಮ್ಮ ಮನೆಯವರಿಗೂ ಈ ವಿಷಯ ತಿಳಿಸಿ' ಎಂದಾಗ 'ಖಂಡಿತವಾಗಿ ಈಗಲೇ ಹೇಳುತ್ತೇನೆ' ಎನ್ನುತ್ತ ಬಸವರಾಜ್ ಅಲ್ಲಿಂದ ಹೊರಟರು.

ಆಫೀಸಿಗೆ ಹೋದಾಗ ಅಲ್ಲೂ ಭಾವ ಉಡುಪರು ಆತಂಕದಿಂದ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳತೊಡಗಿದರು. ಆಗ ಸದರಿ ಉಪನ್ಯಾಸಕರು,

"ಉಡುಪರೇ, ಗಣೇಶ್ ಮದುವೆಯಾಗಿದ್ದಾರೆ ಎಂಬ ವಿಷಯ ನೂರಕ್ಕೆ ನೂರು ಸುಳ್ಳು, ಈಗ ತಾನೇ ನಾನು ಅಲ್ಲಿಂದ ವಿದ್ಯಾರ್ಥಿಗಳನ್ನು ಸ್ಪೋರ್ಟ್ಸ್‌ಗಾಗಿ ಕರೆದುಕೊಂಡು ಬರುತ್ತಿದ್ದೇನೆ. ನೀವು ನಿಶ್ಚಿಂತೆಯಾಗಿರಬಹುದು, ನಿಮಗೆ ಯಾರೋ ಸುಳ್ಳು ಸುದ್ದಿ ಕೊಟ್ಟಿದ್ದಾರೆ. ಅವರಿಗೆ ಬೇರೆ ಹೆಣ್ಣು ನೋಡಬಹುದು" ಎಂದಾಗ ಅವರು ತುಂಬಾ ಸಮಾಧಾನ ಹೊಂದಿದರು.

ಮುಂದಿನ ದಿನಗಳಲ್ಲಿ ನಾನು ಅಕಸ್ಮಾತಾಗಿ ಯಾವುದೋ ಒಂದು ಮದುವೆ ಮನೆಯ ಕಾರ್ಯಕ್ರಮಕ್ಕಾಗಿ ತೀರ್ಥಳ್ಳಿಗೆ ಹೋಗಿದ್ದೆ. ಅಲ್ಲಿ ಕಾಕತಾಳೀಯವೆಂಬಂತೆ ಈ ವಿಷಯವನ್ನು ಪ್ರಚಾರಮಾಡಿದ್ದ ಬಾಡಿಗೆದಾರಳಾದ ಸುಮಾ ಕೂಡ ಮದುವೆಗೆ ಆಗಮಿಸಿದ್ದಳು. ನಾನು ನೇರವಾಗಿ ಅವಳ ಬಳಿಗೆ ಹೋಗಿ,

"ಏನಮ್ಮ ನನಗೆ ಮದುವೆಯಾಗಿದೆ ಎಂಬ ಸುಳ್ಳು ವರ್ತಮಾನವನ್ನು ಕೊಡುತ್ತಿರುವಂತೆ, ಕಾರಣ ಕೇಳಬಹುದೇ? ಇದರಿಂದ ನಿನಗೇನಾದರೂ ಲಾಭವಾಗುತ್ತದೆಯೇ? ದಯಮಾಡಿ ಇನ್ನೆಂದೂ ಇಂತಹ ಸುಳ್ಳು ಸುದ್ದಿಗಳನ್ನು ಹಬ್ಬಿಸಬೇಡ. ನನ್ನ ಮದುವೆ ನಿಶ್ಚಯವಾದ ಮೇಲೆ ಖಂಡಿತ ನಿಮಗೆ ಆಹ್ವಾನ ಪತ್ರಿಕೆಯನ್ನು ಕಳಿಸಿಕೊಡುತ್ತೇನೆ. ಅಲ್ಲಿಯವರೆಗೆ ನನ್ನ ತಂಟೆಗೆ ಬರಬೇಡ ತಾಯಿ" ಎಂದು ವಿನಂತಿಸಿಕೊಂಡೆ.

ನಾನು ಹಾಗೆ ಹೇಳುತ್ತಿರುವಾಗ ಅವಳ ಮುಖ ಇಂಗು ತಿಂದ ಮಂಗನಂತಾಗಿತ್ತು. ಏನೂ ಉತ್ತರ ಕೊಡದೆ ತಲೆತಗ್ಗಿಸಿಕೊಂಡು ಜಾಗ ಖಾಲಿ ಮಾಡಿದಳು. ಆದರೆ ಅಲ್ಲಿಂದ ಇಲ್ಲಿಯವರೆಗೂ ಅವಳು ಯಾಕೆ ಹಾಗೆ ಸುಳ್ಳು ಸುದ್ದಿಯನ್ನು ಹಬ್ಬಿಸಿದಳು ಎಂದು ನನಗೆ ಗೊತ್ತಾಗಲೇ ಇಲ್ಲ. ■

# ಅಯ್ಯೋ ಶಿವನೇ?

**●ಹರಿಪ್ರಸಾದ್ ಎ.ಆರ್.**

ಆ ದಿನ ಬೆಳಗಾಗೆದ್ದು ಸವಿಯಾದ ಕಾಫ಼ಿಯನ್ನು ಸವಿಯುತ್ತಾ ವರ್ತಮಾನ ಪತ್ರಿಕೆಯಲ್ಲಿ ಅಮ್ಮನವರ ನಿಧನ ಮತ್ತು ಅವರ ಅಂತಿಮ ಸಂಸ್ಕಾರದ ಬಗ್ಗೆ ವಿವರವನ್ನು ಓದುತ್ತಾ ಅವಳ ರಾಜಕೀಯ ಜೀವನ ಬಗ್ಗೆ ಆಲೋಚಿಸುತ್ತಾ ಇರಬೇಕಾದರೆ ದೂರವಾಣಿ ಶಬ್ದ ಮಾಡಿತು. ನೋಡಿದರೆ ನನ್ನ ಸ್ನೇಹಿತರಾದ ಶೇಖರ್ ಗಾಬರಿಯಿಂದ ಮಾತನಾಡಿ "ರೀ, ನಮ್ಮ ಮಿತ್ರರಾದ ಚಂದ್ರೂ ಹೋಗಿಬಿಟ್ಟರಂತೆ ಕಣ್ರೀ, ನರಸೀಪುರದಿಂದ ನನ್ನ ಮಿತ್ರರಾದ ದಾಸರು ಹೇಳಿದರು, ಅವರು ಚಂದ್ರೂನ ಮೊಬೈಲಿಗೆ 3–4 ಬಾರಿ ಪ್ರಯತ್ನಿಸಿದರೂ ಅದು ಸಿಗಲಿಲ್ಲವಂತೆ, ಕಾಲ್ ಡೈವರ್ಟೆಡ್ ಅಂತ ಸೂಚನೆ ಸಿಗುತ್ತಿತ್ತು. ಕೊನೆಗೆ ಇನ್ನೊಂದು ಬಾರಿ ಪ್ರಯತ್ನಿಸಿದಾಗ ಆ ಕಡೆಯಿಂದ ಮಹಿಳೆಯೊಬ್ಬರು ಅದನ್ನು ತೆಗೆದುಕೊಂಡು "ರೀ, ಇಲ್ಲಿ ಅನಾಹುತವಾಗಿದೆ, ಚಂದ್ರೂರವರು ಇನ್ನಿಲ್ಲ" ಎಂದು ಹೇಳಿದರು, ಹಾಗಾಗಿ ಅದು ನಿಮ್ಮ ಊರಿನಲ್ಲೇ ಆಗಿರುವ ವಿಷಯ, ನಿಮಗೆ ತಿಳಿದಿರಬೇಕು ಎಂದು ನಿಮಗೆ ದೂರವಾಣಿ ಕರೆ ಮಾಡಿದೆ" ಎಂದರು. ನನಗೆ ಕೈಕಾಲೇ ಸ್ವಲ್ಪ ಕಾಲ ಆಡಲಿಲ್ಲ; ಅದಕ್ಕೇ ನಿಮಗೆ ಗೊತ್ತಿರಬಹುದು ಎಂದು ನಿಮಗೆ ಫೋನ್ ಮಾಡಿದೆ" ಎಂದರು.

ಈ ವಿಷಯ ಕೇಳಿ ನನಗೂ ಷಾಕ್ ಆಯಿತು. ನಮ್ಮ ಚಂದ್ರೂ ಈ ಊರಿಗೆಲ್ಲಾ ಪ್ರಸಿದ್ಧಿ. ಒಂದು ಸಂಸ್ಥೆಯನ್ನು ಕಟ್ಟಿಕೊಂಡು ಬಹಳ ಸಮಾಜಸೇವೆಯನ್ನು ಮಾಡುವುದರೊಂದಿಗೆ ಸಾಹಿತಿಗಳೂ ಕೂಡಾ. ನನಗೆ ಅವರು ಬಹಳ ಕಾಲದಿಂದ ಸ್ನೇಹ ಇತ್ತು. ಅಯ್ಯೋ ದೇವರೇ ಇದೇನಾಯಿತು, ಮೊನ್ನೆ ತಾನೇ ರಾಯಚೂರಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ನೋಡಿದ್ದೆನಲ್ಲಾ, ಆಗ ಅವರು ಆರೋಗ್ಯವಾಗಿದ್ದ್ರಲ್ಲಾ, ಈಗ ಯಾರನ್ನ ಕೇಳೋದು ಅಂತ ಯೋಚನೆ ಮಾಡಿ ಅವರ ಮೊಬೈಲಿಗೇ ಸಂಪರ್ಕ ಸಾಧಿಸಲು ಪ್ರಯತ್ನ ಮಾಡಿದಾಗ ದಾಸರಿಗೆ ಬಂದ ಸಂದೇಶವೇ ನನಗೂ ಬಂತು. ಸಂಸ್ಥೆಯ ಕಾರ್ಯದರ್ಶಿಯವರಿಗೆ ಫೋನಾಯಿಸಿದೆ. ಅವರು ಮಾತನಾಡಿ " ರೀ ಏನು ಹೇಳುತ್ತಿದ್ದೀರಿ, ನಿನ್ನೆ ತಾನೇ ಅವರೊಡನೆ ನಾನು ಐಸ್‌ಕ್ರೀಮ್ ತಿಂದಿದ್ದೀನಿ, ಬಹಳ ಹೊತ್ತು ಚರ್ಚೆ ಮಾಡಿದ್ದೀನಿ, ಈಗ ನೋಡಿದರೆ ನೀವು ಹೀಗೆ ಹೇಳುತ್ತಿದ್ದೀರಿ, ಸರಿಯಾಗಿ ತಿಳಿದುಕೊಳ್ರೀ, ಹೀಗೆಲ್ಲಾ ಮಾತನಾಡಬಾರದು' ಎಂದರು. ಸರಿ, ನಾನು ನನ್ನ ಇನ್ನೊಬ್ಬ ಸ್ನೇಹಿತನಾದ ರಾಘುಗೆ ಫೋನಾಯಿಸಿದೆ. ಅವನು ಹೌದಾ, ನೋಡ್ತೀನಿ ಎಂದು ಹೇಳಿ ಫೋನ್ ಇಟ್ಟ.

ಇದೊಳ್ಳೇ ಸಮಸ್ಯೆಯಾಯ್ತಲ್ಲಾ ಎಂದು ಯೋಚಿಸುವ ವೇಳೆಗೆ ನನ್ನ ಸ್ನೇಹಿತರಾದ ಶೇಖರ್‌ರವರೇ ನನ್ನ ಮನೆಗೆ ಬಂದು ರೀ, ಅವರ ಮನೆಗೆ ಹೋಗಿ ಬಂದುಬಿಡೋಣ, ಸರಿಯಾಗಿ ವಿಷಯ ತಿಳಿಯುತ್ತೆ ಎಂದರು. ಹೋಗುವಾಗ ದಾರಿಯಲ್ಲಿ ನಮ್ಮ ಇನ್ನೊಬ್ಬ ಸ್ನೇಹಿತರ ಗಂಧದ ವಸ್ತುಗಳ ಅಂಗಡಿ ಇತ್ತು. ಹೇಗಾದರೂ ಆಗಲಿ ಎಂದು ಎರಡು ಗಂಧದ ಹಾರ ತೆಗೆದುಕೊಂಡೆವು. ದಾರಿಯಲ್ಲಿ ಮುಂದಿನ ಕಾರ್ಯಗಳಿಗೆ ಹೇಗಪ್ಪಾ, ಶೋಕ ಸಮಾರಂಭ ಮಾಡಬೇಕು, ಅವರ ಮಡದಿ ಮಕ್ಕಳಿಗೆ ಸಮಾಧಾನ ಮಾಡಬೇಕು ಎಂದೆಲ್ಲಾ ಆಲೋಚಿಸಿಕೊಂಡೇ ಹೋದೆವು.

ಸುಂದ್ರೂ ಮನೆಯ ಬಳಿ ಹೋದಾಗ ಅಲ್ಲಿ ರಾಘೂನ ಕಾರು ಅಲ್ಲಿ

ನಿಂತಿತ್ತು. ಇನ್ನೂ ಕೆಲವು ದ್ವಿಚಕ್ರ ವಾಹನಗಳೂ ಇದ್ದವು. ಚಂದ್ರೂರ ಕಾರೂ ಅಲ್ಲೇ ನಿಂತಿತ್ತು. ನನಗೆ ಎದೆಯಲ್ಲಿ ಢವಢವ ಪ್ರಾರಂಭವಾಯಿತು. ನೋಡಿದರೆ, ರಾಘು, ನಾಣಿ, ಕಿಟ್ಟಿ, ಇಸ್ಮೈಲ್, ಶಂಕರ ಎಲ್ಲಾ ಬಂದು ನನಗಾಗಿ ಕಾಯುತ್ತಿದ್ದರು. ಎಲ್ಲರ ಕೈಯಲ್ಲೂ ಒಂದೊಂದು ಹಾರ ಇತ್ತು. ನಿಮಗೆಲ್ಲಾ ಹೇಗೆ ವಿಷಯ ತಿಳಿತೂ ಎಂದು ಕೇಳಿದಾಗ ನಮಗೆ ಆ ಗಂಧದ ಅಂಗಡಿಯವನು ವಿಷಯವನ್ನ ಬಹಳ ಬೇಜಾರಿನಿಂದ ತಿಳಿಸಿ ನನ್ನ ಅಂಗಡಿಯಿಂದ ಪ್ರತಿ ತಿಂಗಳು ಕನಿಷ್ಠ 25–30 ಹಾರ ಕೊಳ್ಳುತ್ತಿದ್ರು, ಅದು ನನಗೆ ಲಾಸ್ ಆಯಿತು ಎಂದು ಹೇಳಿದನು. ಅಲ್ಲೇ ನಾವೂ ಹಾರ ತೆಗೆದುಕೊಂಡು ಬಂದೆವು ಎಂದರು. ತಕ್ಷಣ ನಾನು ರಾಘೂಗೆ ಎಲ್ಲರಿಗೂ ವಿಷಯ ತಿಳಿಸಬೇಡಾ ಅಂತ ಹೇಳಿರಲಿಲ್ವೇ ಎಂದು ತರಾಟೆಗೆ ತೆಗೆಕೊಳ್ಳುತ್ತಿರುವಂತೆಯೇ ಅಲ್ಲಿಗೆ ಇನ್ನೂ ಅನೇಕ ಜನಗಳು ಜಮಾಯಿಸಲು ಪ್ರಾರಂಭಿಸಿದರು. ಆ ಮನೆ ಇರುವ ಪ್ರದೇಶವು ಒಂದು ಸಣ್ಣ ರಸ್ತೆ ಆಗಿದ್ದು ಸಂಚಾರದಟ್ಟಣೆಯು ಅಧಿಕವಾಗಿ ವಾಹನಗಳು ಚಲಿಸುವುದೇ ಕಷ್ಟವಾಯಿತು. ಗಲಾಟೆ ಕೂಡಾ ಆರಂಭವಾಯಿತು. ಇದೇನಪ್ಪಾ ಆಯಿತು, ವಿಷಯವೇನೆಂಬುದೇ ಇನ್ನೂ ತಿಳಿದಿಲ್ಲ, ಆಗಲೇ ಇಷ್ಟೆಲ್ಲಾ ಆಯಿತಲ್ಲಾ ಅಂತ ತಲೆಮೇಲೆ ಕೈ ಹೊತ್ತು ಕುಳಿತೆ.

ಏನೇ ಆದರೂ ನಾವು ಈಗ ಅವರ ಮನೆಗೆ ಹೋಗಬೇಕಾದ್ದುದರಿಂದ ಹೋಗೋಣ ಎಂದು ಹೊರಟರೆ ಯಾರೂ ಮುಂದೆ ಹೋಗೋಕೇ ತಯಾರಿಲ್ಲ, ಕೊನೆಗೆ ನಾನೇ ಮುಂದೆ ಹೋಗಿ ಮನೆಯ ಕಾಲಿಂಗ್ ಬೆಲ್ ಒತ್ತಿದೆ. ಬಾಗಿಲು ತೆಗೆದ ಚಂದ್ರೂ ಅವರನ್ನು ನೋಡಿ ನನಗೆ ತಲೆ ತಿರುಗಿ ಬೀಳುವುದೊಂದು ಬಾಕಿ ಇತ್ತು. ಯಾಕ್ರೀ ಹೀಗಾಗಿದೀರಿ ಭಟ್ರೇ, ಬನ್ನಿ ಒಳಗೆ ಎಂದರು. ಹಾರವನ್ನ ಅವರಿಗೆ ಕಾಣದಂತೆ ಮುಚ್ಚಿಟ್ಟುಕೊಂಡಿದ್ದೆ. ಅಲ್ರೀ, ರಾಯಚೂರಿಂದ ಯಾವಾಗ ಬಂದ್ರೀ, ಏನು ಸಮಾಚಾರ, ಎಂದು ಕೇಳಿದೆ. ಅಗ ಅವರು ಮೊನ್ನೆನೇ ಬಂದೆ, ನೆನ್ನೆಯೆಲ್ಲಾ ವಿಶ್ರಾಂತಿ, ಈ ದಿನ ಕೆಲವು ಕೆಲಸಗಳಿವೆ, ಆದರೆ ನೋಡ್ರೀ ನನ್ನ ಮೊಬೈಲು ಕೈಕೊಟ್ಟಿದೆ, ನೆನ್ನೆಯಿಂದ ಯಾವ ಫೋನೂ ಬಂದಿಲ್ಲ, ನನಗೂ ಕರೆ ಮಾಡೋಕೂ ಆಗ್ತಿಲ್ಲ ಎಂದು ಹೇಳಿದರು. ಆಗ ನಾನು ನನ್ನ ಸಮಸ್ಯೆಯನ್ನ ಹೇಳಿ ಅದಕ್ಕೇ ನಿಮ್ಮನ್ನೇ ನೋಡಿಕೊಂಡು ಹೋಗೋಣ ಎಂದು ಬಂದೆವು. ಆ ವೇಳೆಗೆ ದಾಸರು ಪಟ್ಟದಿಂದ ಮೂರ್ತಿಯವರ ಮೊಬೈಲಿಗೆ ಚಂದ್ರೂರವರು ಹೇಗಿದಾರೆ ಎಂದು ಕೇಳಿದಾಗ ಶೇಖರ್‌ರವರು ಅದನ್ನು ಚಂದ್ರೂಗೇ ಕೊಟ್ಟು ಮಾತನಾಡಲು ಹೇಳಿದರು. ದಾಸರು ತಮ್ಮ ತೊಂದರೆಯ ಜೊತೆಗೆ ಅವರಿಗೆ ಬಂದ ಸಂದೇಶವನ್ನೂ ಹೇಳಿರಬೇಕು, ಆಗ ಚಂದ್ರೂರವರು ನಮ್ಮ ಕಡೆ ನೋಡಿ ನಗಲು ಪ್ರಾರಂಭಿಸಿದರು. ನೆನ್ನೆನೇ ನಾನು ಕಂಬಾನಿಯವರ ಪಿಯೋ ಸಿಮ್‌ಅನ್ನು ದುಬಾರಿ ಬೆಲೆ ಕೊಟ್ಟು ಹೊಸದಾಗಿ ಹಾಕಿಸಿಕೊಂಡೆ, ಅಗಿನಿಂದಲೂ ಈ ತಾಪತ್ರಯ ಪ್ರಾರಂಭವಾಗಿದೆ ಕಣ್ರೀ, ನೆನ್ನೆ ಇಡೀ ನನಗೆ ಯಾವ ಕರೆಗಳೂ ಬಂದಿಲ್ಲ, ಬಹುಶಃ ನನ್ಗೆ ಬರಬೇಕಾಗಿದ್ದ ಎಲ್ಲ ಕರೆಗಳೂ ಯಾರೋ ಒಬ್ಬನಿಗೆ ಹೋಗಿ ಅವನು ತಲೆಕೆಟ್ಟು ಅವರು ಸತ್ತುಹೋದರು ಕಣ್ರೀ ಎಂದು ಹೇಳಿರಬೇಕು ಎಂದರು. ನಾವೆಲ್ಲಾ ಪೆಚ್ಚುಪೆಚ್ಚಾಗಿ ನಕ್ಕೆವು. ಆಗ ಅದು ಅವರಿಗೂ ಅರ್ಥವಾಗಿ ಎಲ್ಲರೂ ಹೊಟ್ಟೆತುಂಬಾ ನಕ್ಕು ಸುಸ್ತಾದೆವು. ಅವರ ಮನೆಯಲ್ಲು ಒಳ್ಳೆಯ ಕಾಫ್ಹೀ ಕುಡಿದು ಅಲ್ಲಿಂದ ಹೊರಟೆವು. ಪಾಪ, ಅಲ್ಲಿ ಸೇರಿದ್ದ ಜನರೆಲ್ಲಾ ನಿರಾಶರಾಗಿ ಹಿಂತಿರುಗಿದರು. ■

# ವಿದ್ಯಾ ಮಂದಿರದಲ್ಲಿ ಸಿರಿಗನ್ನಡಂ ಗೆಲ್ಗೆ

**●ಎಚ್. ಆರ್. ಹನುಮಂತ ರಾವ್**

ರಾಜ್ಯೋತ್ಸವದ ಹಿಂದೊಂದು ಶನಿವಾರ. ಮಧ್ಯಾನ್ಹದ ವೇಳೆ. ಅಳಿದುಳಿದ ಬೋಧಕರು ತಮ್ಮ ತಮ್ಮ ಕಾರ್ಯ ಚಟುವಟಿಕೆಗಳ ಮುಗಿಸಿ ಸ್ವಗೃಹದ ಕಡೆ ಹೊರಡುವ ತರಾತುರಿ. ಕಾಲೇಜಿನ ಕಾಮನ್ (ಈಗಿನ ಸ್ಟಾಫ್ ರೂಂ) ರೂಮಿನಲ್ಲಿ ಆ ದಿನ ಸಾಕಷ್ಟು ಮಂದಿ ವಿದ್ಯಾ ಪ್ರವರ್ತಕರ ಕೂಟವೇ ಒಂದೆಡೆ ಸೇರಿತ್ತು. ಅವರವರ ಬೋಧನಾ ಮತ್ತಿತರ ಆಡಳಿತ ಕಾರ್ಯಗಳ ಒತ್ತಡದಿಂದಾಗಿ ಇಂತಹ ಸಂದರ್ಭ ಒದಗುವುದೇ ಅಪರೂಪ. ರಾಜ್ಯೋತ್ಸವದ ದಿನ ಹತ್ತಿರವೇ ಇದ್ದು ನಮ್ಮಲ್ಲಿ ಆ ದಿನ ಕನ್ನಡ ಬಾವುಟ ಹಾರಿಸುವುದ ಬಿಟ್ಟರೆ ಯಾವ ವಿಶೇಷ ಚಟುವಟಿಕೆಗಳೂ ಕಂಡಿರಲಿಲ್ಲವಾಗಿ, ಈ ವೇಳೆ ಕನ್ನಡದ ಬಗ್ಗೆ ಸಲಹೆ, ಚರ್ಚೆ, ಠರಾವುಗಳು ಆಕಸ್ಮಿಕವಾಗಿ ಏನೇನೋ ನಡೆದು ಹೋದವು. ಅಭಿಪ್ರಾಯ ಭೇದಗಳಿಂದಾಗಿ ಸ್ವಲ್ಪಮಟ್ಟಿಗೆ ವಾತಾವರಣವೂ ಕಾವೇರಿತ್ತು. ವಿಷಯವಂತೂ ತೀರಾನೇ ಸರಳ.

ಕನ್ನಡದ ಶಾಖೆಯ ಪ್ರವೀಣರಲ್ಲೊಬ್ಬರಾದ ಎಂ.ವಿ.ಕೆ. ನೇರವಾಗಿ ವಿಜ್ಞಾನ ಬೋಧಿಸುವವರನ್ನ ಈ ತಪ್ಪಿಗೆ ಗುರಿಮಾಡಿದರು. ಇವರಿಗೆ ಅಂಗ್ಲ ಭಾಷೆ ಬಿಟ್ಟರೆ ಮತ್ತಿನ್ನೇನೂ ಬೇಕಿಲ್ಲವೆಂದು ಮೂದಲಿಸಿದರು. ಅಂಗ್ಲ ಭಾಷೆ ಮತ್ತಿತರ ಭಾಷಾ ವಿಶಾರದರು ಮುಗುಮ್ಮಾಗಿ ಈ ಮಾತಿಗೆ ಹೂಗುಟ್ಟಿದ್ದು ವಿಜ್ಞಾನ ಬೋಧಕರನ್ನ ಕೆರಳಿಸಿತ್ತು. ಹಾಗೆ ನೋಡಿದರೆ, ಇತರ ಭಾಷಾ ಅಧ್ಯಾಪಕರೆಷ್ಟು ಮಂದಿ ತಮ್ಮ ಪಠ್ಯ ಭಾಷೆ ವಿನಾ ಕನ್ನಡಕ್ಕಾಗಿ ಏನು ಉತ್ಸಾಹ ಯಾವಾಗ, ಎಲ್ಲಿ, ಎಷ್ಟರ ಮಟ್ಟಿಗೆ ತೋರಿಸಿದ್ದಾರೆಂದು ಕೆಣಕಿದರು. ಈ ಬಗ್ಗೆ ಗಣಕ ಶಾಸ್ತ್ರ ಅಧ್ಯಾಪಕ ಕೆ. ಎನ್.ಆರ್. ಶಾಸ್ತ್ರಿ ಅಂಕಿಅಂಶ ವಿವರಗಳನ್ನ ಕೇಳಿ, ಮತ್ತಷ್ಟು ವಿಕೋಪಕ್ಕೆ ತಳ್ಳಿದರು. ಬಹುಷ: ಇದಕ್ಕೇ ಕಾಯುತ್ತಿದ್ದ ಜೀವ ಶಾಸ್ತ್ರ ವಿಭಾಗದ ಪ್ರಬೇಷನರಿ ಮಾಸ್ತರ ಎಚ್.ಕೆ.ಯವರು ಹಾಳೆಯ ಮೇಲೆ ದೊಡ್ಡದಾಗಿ ಬರೆದ ಶೂನ್ಯವನ್ನ ತೋರಿಸಿ ಕೂತರು. ಉರ್ದು, ಅರಬ್, ಪರ್ಷಿಯನ್ ಪಂಡಿತರುಗಳು ತಾವೆ ಸ್ವತ: ಪ್ರಯತ್ನ ಮಾಡದಿದ್ದರೂ, ಕನ್ನಡದ ಭಾಷಾ ಕಾರ್ಯ ಕ್ರಮಗಳಲ್ಲೇ ನಡೆದರೂ ತಪ್ಪದೇ ಹಾಜರೆಂದು ತಮ್ಮ ಮುಖ, ಗಡ್ಡ ತೀಡಿ, ಕಣ್ಣಲ್ಲಿ ಮಿಂಚಿ, ನಗೆ ಬೀರಿದರು. ಹಿಂದಿ ಪಂಡಿತ ಗೋಪಾಲ್‌ರು ಸುಮ್ಮನಿರದೆ, ಗೋಜಲನ್ನ ತಮ್ಮೆಡೆಗೇ ಎಳೆದುಕೊಂಡರು! ರಾಷ್ಟ್ರ ಭಾಷೆ ಹಿಂದಿಯಾಗಿರುವಾಗ ನಮ್ಮ ಉತ್ಸಾಹ ಮಾತೃ ಭಾಷೆಗಿಂತ ಹಿಂದಿಗೆ ಉಚ್ಚ ಸ್ಥಾನ ಕಲ್ಪಿಸಿ, ಏಕ ಭಾಷಾ ಪ್ರವೀಣರಲ್ಲದಿದ್ದರೂ ವ್ಯಾವಹಾರಿಕ ಜ್ಞಾನವಿರುವಷ್ಟು ಪ್ರಚಾರ ಹಿಂದಿಗೆ ಅತ್ಯವಶ್ಯಕ ಎನ್ನುತ್ತಲೇ, ಕನ್ನಡ ಬೋಧಕರೆಲ್ಲರೂ ಅವರಮೇಲೆ ಒಟ್ಟಿಗೇ ಮುಗಿಬಿದ್ದು ಅವರಿಗೆ ಬೆವರಿಳಿಸಿದರು!

ಮಾತು ಕೋಲಾಹಲಕ್ಕೆ ತಿರುಗಿತ್ತು! ಮಾತೃ ಭಾಷೆಗಿಲ್ಲದ ಸ್ಥಾನ ಅರಬ್ಬರಿಂದ ಕೊಂಡು ತಂದ ಎರವಲು ಭಾಷೆಗೇಕೆ ಈ ರಾಷ್ಟ್ರ ಭಕ್ತಿ ಸೂಚಕ ದೀಪದಾರತಿ ಎಂದು ಕೂಗಾಡಿದರು ಶ್ರೀಮತಿ ಮೀನಾಕ್ಷೀ ಮೇಡಮ್! ನಾವು ಅವರ ಗುಲಾಮಗಿರಿಯಲಿದ್ದ ಕಾರಣಕ್ಕಾಗಿ ಸ್ವತಂತ್ರವಾದ ಮೇಲೂ ಅವರ ಎಂಜಲು ಬೇಕೇಕೆ? ನಮ್ಮ ಪಂಪ, ರನ್ನ, ಕುಮಾರ ವ್ಯಾಸ, ಕುಂತಿ, ಇಂತಹವರೆಲ್ಲ ಕನ್ನಡವನ್ನ

ಎತ್ತಿಹಿಡಿದವರು. ದೇಶದ ಹಿರಿಮೆಯನ್ನ ಎತ್ತಿ ಹಿಡಿಯುವ ನಮ್ಮದೇ ವೈದಿಕ ಭಾಷೆಗಳೇನು ನಿಷ್ಪ್ರಯೋಜಕವಾ ಎಂದು ಸಂಸ್ಕೃತ ಪಂಡಿತರು ರೇಗಿದರು!

ಪ್ರಿನ್ಸಿಪಾಲರು 'ನೋಡಿ, ನಾವು ಬೋಧಕರು ಎಂದಿಗೂ ಮಾರ್ಗದರ್ಶಕರಾಗಿರಬೇಕಲ್ಲದೆ, ಹೀಗೆ ಛಾವಣಿ ಹರಿಯುವಂತೆ ಕೂಗಾಡುವುದು ಸಭ್ಯತೆಗೆ ಮೀರಿದ್ದಲ್ಲವೆ? ಕಾಲೇಜಿನ ಶಿಸ್ತು ಮೀರಿ ನಡೆವುದು ನಮಗೆ ಅಗೌರವ ತರುವಂತಹುದು. ನಾನು ಯಾರನ್ನೂ ಅಂದು ತೃಪ್ತಿ ಪಟ್ಟುಕೊಳ್ಳುವನಲ್ಲ. ಆದರೆ ಶಿಸ್ತು, ಸಂಯಮ ನಮ್ಮದಾಗಿರಬೇಕು. ಆದ್ದರಿಂದ, ಕೂಡಲೇ ಎಲ್ಲರೂ ಏಕ ಮನಸ್ಸಿನಿಂದ ಕಾರ್ಯ ಪ್ರವರ್ತಕರಾಗಿ, ವಿದ್ಯಾರ್ಥಿಗಳನ್ನ ಕನ್ನಡದ ಬಗ್ಗೆ ಎಲ್ಲರೂ ಒಟ್ಟಾಗಿ ಹುರಿದುಂಬಿಸಿ, ಏನೇನು ಕಾರ್ಯಕ್ರಮಗಳನ್ನ ನಡೆಸಬೇಕೆನ್ನುವದನ್ನ ಪಟ್ಟಿಮಾಡಿ ನನ್ನ ಬಳಿ ಬನ್ನಿ. ನಾನು ಎಲ್ಲ ರೀತಿಯ ಸಹಕಾರ, ಹಣವೂ ಕೊಡಿಸುತ್ತೇನೆ, ನಡೆಸುವ ಸಭೆಗಳಿಗೆ ಉದ್ದಾಮ ಕನ್ನಡ ವಾಕ್ಪಟುಗಳನ್ನ ಕರೆದು ತರುವ ಹೊಣೆ ನನಗೂ ಇರಲಿ. ಮುಂದಿನ ವಾರದ ಪ್ರಾರಂಭದಲ್ಲೇ ಷುರುಮಾಡಿ.' ಎಂದು ಹೇಳಿ ತಮ್ಮ ಸ್ವಸ್ಥಾನಕ್ಕೆ ತರೆಳಿದರು. ಅವರು ಹೊರಟಮೇಲೆ, ಸಂಸ್ಕೃತ ಅಧ್ಯಾಪಕರು ಟಿ.ಎಸ್.ಆರ್. ಯಾವಯಾವುದೋ ಲೆಕ್ಕ ಮಾಡಿ, ಯಾರ‍್ಯಾರು ಎಷ್ಟು ಮಂದಿ ಕನ್ನಡದಲ್ಲೇ ಮಾತಾಡುವರೆನ್ನುವದನ್ನ ಕೈ ಎತ್ತುವುದರಿಂದ ಲೆಕ್ಕಮಾಡಿದಾಗ ಆಶ್ಚರ್ಯ ಕಾದಿತ್ತು! ನೂರಕ್ಕೆ ತೊಂಬತ್ತಕ್ಕೂ ಮೀರಿ ಕನ್ನಡದ ಪರವಾಗಿ ಮತ ಬಿದ್ದಿತ್ತು!

ಈ ತಪ್ಪು ಲೆಕ್ಕದಿಂದ ಮತ್ತಷ್ಟು ಮಾತುಗಳೆರಚಾಡುವಿಕೆ. ನೂರಕ್ಕೆ ಹತ್ತು ಮಂದಿಯಾದರೂ ಕನ್ನಡವನ್ನೇ ಮಾತಿನಲ್ಲಿ ಸರಸರ ಒಪ್ಪವಾಗಿ ಮಾತಾಡುವರಿಲ್ಲ. ಎಲ್ಲರೂ ದಿ.ಕೈಲಾಸಂ ಎನ್ನುತ್ತಿದ್ದ ಕನ್ನಡಾಂಗ್ಲೋ ಭಾಷೆಯನ್ನೆ ಮಾತಾಡುವದೆಂದು ಒಪ್ಪಿಕೊಂಡು ಕೊನೆಗೆ ಪ್ರಿನ್ಸಿಪಾಲರ(ಈ ಅಂಗ್ಲ ಪದವೂ ಅವರ ಕಚೇರಿಯ ಮೇಲೆ ಶೋಭಿಸುತ್ತಿದೆಯೆಂದು ಎಲ್ಲರಿಗೂ ತಿಳಿದದ್ದೇ) ಮಾತಿಗೆ ಒಪ್ಪಿದರು. ಅತ್ಯಂತ ಸೌಮ್ಯದ, ಎಲ್ಲರಿಗೂ ಪ್ರಿಯರಾದ ಈ ಸಂಸ್ಕೃತ ಪಂಡಿತ ಪ್ರವೀಣರು ತಮ್ಮ (ಸರ್ವ ಸಮ್ಮತವಾಗಬಹುದಾದ) ಅಭಿಪ್ರಾಯ ಸೂಚಿಸಿದರು. 'ನೋಡಿ, ಈ ದಿನ ನಮ್ಮ ಚರ್ಚೆ ವಿಕೋಪಕ್ಕೆ ಹೋಗಿದ್ದಾಯಿತು. ಮುಂದೆ ಕೂಡದು. ಪ್ರಿನ್ಸಿಪಾಲರೇ ಎಚ್ಚರಿಸಿದ್ದಾರೆ. ಕೈ ಎತ್ತುವುದರಿಂದಾಗಿ ನಾವೆಲ್ಲಾ ಕನ್ನಡಾಭಿಮಾನಿಗಳೇ ಎಂಬುದು ಸ್ಪಷ್ಟ, ಅದರೆ ಸಮಯದೊತ್ತಡದಿಂದಲೋ, ಮತ್ತೇನೋ ವೈಯುಕ್ತಿಕ ಕಾರಣಕ್ಕೋ, ಕನ್ನಡದ ಪ್ರಚಾರಕ್ಕೆ ಕೈ ಹಾಕದಿರಬಹುದು, ನಮ್ಮ ಮಧ್ಯೆಯೇ ಇರುವ ಕನ್ನಡಾಭಿಮಾನಿಗಳು ಸಾಕಷ್ಟು ಉತ್ಸಾಹದಿಂದಲೇ ಕನ್ನಡದ ಸೇವೆ, ಪ್ರಚಾರ ಮಾಡುತ್ತಿದ್ದಾರೆ, ಕನ್ನಡ ಸಂಘ ಲವಲವಿಕೆಯಿಂದಿದೆ. ಈ ಕಾರಣ, ನಾವೆಲ್ಲ ಕನ್ನಡದ ಪರ ಈ ಕ್ಷಣದಿಂದಲೇ 'ಸಿರಿಗನ್ನಡಂ ಗೆಲ್ಗೆ' ಎಂದು ಹೇಳಿ, ಈಗಿನಿಂದಲೇ 'ಕನ್ನಡಕ್ಕಾಗಿ ಕಾಯಾ, ವಾಚಾ, ಮನಸಾ ಶ್ರಮಿಸುತ್ತೇವೆ, ಯಾರೇ ಕನ್ನಡಕ್ಕೆ ಅಡ್ಡ ಬಂದರೂ ಅವರನ್ನ ಮೆಟ್ಟಿ ನಿಲ್ಲುತ್ತೇವೆ'ಎಂದು ಇಲ್ಲೇ ಘೋಷಿಸಿ, ಹಾಗೆಯೇ ನಡೆದುಕೊಳ್ಳುವ ಮತ್ತು ಎರಡನೆಯದಾಗಿ ನಮ್ಮನಮ್ಮಲ್ಲೇ ಮಾತಾಡುವಾಗ ಕನ್ನಡ ಬಿಟ್ಟು ಬೇರೆ ಭಾಷೆಯನ್ನ ಬೆರಸಬಾರದೆನ್ನೋಣ, ತಪ್ಪು ಮಾಡಿದರೆ, ಒಂದು ಪದಕ್ಕೆ ಮೀರಿದರೆ ಒಂದು ರುಪಾಯಿ ಜುಲ್ಮಾನೆ ವಿಧಿಸುವ" ಎಂದರು.

ಟಿ.ಎಸ್.ಕೆ. ಅವರ ಚಾಣಾಕ್ಷತನ ಮುಂದಾಗುಬಹುದಿದ್ದ ಉಲ್ಕಾಪಾತವನ್ನ

ತಪ್ಪಿಸಿದರೂ, ಮಾತಿನ ಮಧ್ಯೆ ಬೇರೆ ಭಾಷೆ ಬೆರಕೆಯಾದರೆ ಪದಕ್ಕೊಂದು ರುಪಾಯಿ ಶುಲ್ಕ ವಿಧಿಸುವುದನ್ನ ಎಲ್ಲರೂ ನಿರ್ದಾಕ್ಷಿಣ್ಯವಾಗಿ ತುಂಡರಿಸಿದರು. ಹಾಗೆ ಮಾಡಿದ್ದೇ ಆದರೆ ನೈತಿಕತೆಯೇ ಮರೆತು, ಎಲ್ಲರೂ ದೂರ ಸರಿಯುತ್ತಾರೆ. ಉದ್ದೇಶವೇ ಮರೆಯಾಗುತ್ತದೆ. ಕನ್ನಡಕ್ಕೂ ಹಣಕ್ಕೂ ಗಂಟು ಹಾಕುವುದು ಸರಿಯಲ್ಲ. ಮತ್ತೊಬ್ಬ ಹಿರಿಯರು 'ಈ ದಿನಗಳಲ್ಲಿ ಒಂದು ರುಪಾಯಿಗೆ ಬೆಲೆಯೇ ಇಲ್ಲದಂತಾಗಿದೆ. ಅಲ್ಲದೆ, ಹಿಂದೆ ಈ ತೆರೆನ ತಪ್ಪಿನಿಂದ ಪರಸ್ಪರ ಮಿತ್ರತ್ವಕ್ಕೇ ಸಂಚಾರ ಬಂದುದನ್ನ ಪ್ರಾತ:ಸ್ಮರಣೀಯ ತೀ.ನಂ.ಶ್ರೀ.ಅವರು('ಕಾಸಿನ ಸಂಘ'–ಹರಟೆಯಲ್ಲಿ) ಎಲ್ಲೋ ಹೇಳಿರುವುದನ್ನ ಜ್ಞಾಪಿಸಿದರು. ನೀವು ಹತ್ತು ರುಪಾಯಿ ಶುಲ್ಕ ವಿಧಿಸಿದರೂ ಕೊಟ್ಟು ನೆಮ್ಮದಿಯಿಂದಿರುತ್ತಾರೇ ವಿನಾ ತಪ್ಪನ್ನ ತಿದ್ದಿಕೊಳ್ಳುವುದೇ ಇಲ್ಲ.

ಮೊಟ್ಟ ಮೊದಲ ಕಾರ್ಯಕ್ರಮಕ್ಕೆ ಕನ್ನಡದ ಉದ್ದಾಮ ಸಾಹಿತಿಯೊಬ್ಬರನ್ನ ಕರೆಸಿದ್ದರು. ಆ ಸಂಜೆ ಐದು ಗಂಟೆ ಸಮೀಪಿಸುತ್ತಿದ್ದಂತೆ ಸಾಹಿತಿಗಾಗಿ ಕಾದುನಿಂತರು. ಅರ್ಧ ಗಂಟೆಯಾದರೂ ಅವರ ಬರವೇ ಇಲ್ಲ. ಮತ್ತೂ ಅರ್ಧ ಗಂಟೆ. ಕೊನೆಗೆ ಪ್ರಿನ್ಸಿಪಾಲರು ಮುಖ್ಯ ಕಾರ್ಯನಿರ್ವಾಹಕರನ್ನ ಕೇಳಿ ಫೋನ ಮಾಡಿದಾಗ ಅತಿಥಿ ಹೇಳಿದರು'ನಿಮ್ಮವರು ನನಗಾಗಿ ವಾಹನ ಕಳಿಸುವರಿದ್ದೇವೆಂದಿದ್ದರು, ಅದಕ್ಕಾಗಿ ಕಾದಿದ್ದೇನೆ, ವಾಹನವಿಲ್ಲೆಂದು ಹೇಳಿದ್ದರೆ ನಾನೇ ಬರುತ್ತಿದ್ದೆ, ನನಗೆ ಕನ್ನಡದ ಅಭಿಮಾನಕ್ಕಿಂತ ವಾಹನ ಹೆಚ್ಚಲ್ಲ, ತಿಳಿಯಿರಿ ಎಂದು ಸೂಕ್ಷ್ಮವಾಗಿಯೇ ತಿವಿದಿದ್ದರು! ಕಾರು ಕಳಿಸುತ್ತೇವೆಂದು ಅವರಿಗೆ ಹೇಳಿದ್ದ ವಿದ್ಯಾರ್ಥಿ ಆ ಸಂಜೆ ಅಲ್ಲಿಗೆ ಬರವೇ ಇಲ್ಲ! ಅವನಿದ್ದಿದ್ದರೆ ತನ್ನದೇ ಕಾರಿನಲ್ಲಿ ತರುವಂತೆ ಮಾತಾಗಿತ್ತು.

ಕಾರ್ಯಕ್ರಮವೇನೋ ತಡವಾಗಿ ಪ್ರಾರಂಭವಾಯಿತು. ಸಾಹಿತಿಗಳನ್ನ ಸಭೆಗೆ ಪರಿಚಯಿಸಿ ಮಾತಾಡಲಿದ್ದ ಪ್ರೊಫೆಸರ್ ಆ ದಿನ ಜ್ವರದಿಂದ ಬಳಲಿ ಬರಲಾಗದುದಕ್ಕೆ ಮೊದಲೇ ಕ್ಷಮೆ ಕೋರಿದ್ದರೇನೋ ಸರಿ. ಆದರೆ, ಅವರ ಬದಲಾಗಿ ಪರಿಚಯಿಸುವ ಹೊರೆ ಹೊತ್ತವರಿಗೆ ಅತಿಥಿಗಳ ವಿವರ ಹೆಚ್ಚು ತಿಳಿಯದೆ ಹೇಳಿದ್ದನ್ನೇ ತಿರುವುಮುರಿವು ಮಾಡಿ ಹೇಳಿ, ಅತಿಥಿಗಳು ಹ್ಯಾಪ್ಮೋರೆ ಹಾಕುವಂತಾಗಿದ್ದು, ವ್ಯಂಗ್ಯದ ಸಾಕಷ್ಟು ಕರತಾಡನೆಗಳ ಪಡೆದು, ಉರಿಮುಖದವರಾಗಿ ನೇಪಥ್ಯಕ್ಕೆ ಸರಿದರು. ಮೊದಲಿಗೆ, ಹುಡುಗಿಯರ ಪ್ರಾರ್ಥನೆಗಿಂತ ಅವರು ಉಟ್ಟಿದ್ದ ಉಡುಪು, ಶೃಂಗಾರವನ್ನ ಬಹಳವೇ ಮೆಚ್ಚಿದ್ದ ಹುಡುಗರು ಭಾರೀ ಚಪ್ಪಾಳೆ, ಕೇಕೆಗಳಿಂದ ಸಮರ್ಥಿಸಿದರು! ನಂತರ ಶಾಲು ವಗೈರೆ ಸನ್ಮಾನಗಳು ಮುಗಿದು 'ಕನ್ನಡ ಸಾಹಿತ್ಯ, ಅದರ ಶತಶತಮಾನಗಳ ಮೆರಗು' ಎಂಬ ಶಿರೋನಾಮೆಯಡಿ ಭೂಗೋಳ ವಿದ್ವಾಂಸ ಕೀ.ಕಂ. ನಾಗೇಗೌಡರು ಭಾಷಣ ಮಾಡಿ ಮುಗಿಸುವ ವೇಳೆಗೆ ಸಾಕಷ್ಟು ವಿದ್ಯಾರ್ಥಿನಿಯರು ಸಭಾಗೃಹದ ಪಕ್ಕದಲ್ಲಿದ್ದ ರೆಸ್ಟಾರೆಂಟಲ್ಲಿ ಕಾಫಿ ಸೇವಿಸಲು ಜಾಗ ಖಾಲಿಮಾಡಿದ್ದರು. ವೇಳೆಯೂ ಮೀರುತ್ತಿತ್ತು. ನಂತರ ಕಾಲೇಜಿನ ಇತಿಹಾಸದ ಬಗ್ಗೆ ಮತ್ತೊಬ್ಬ ವಿದ್ವಾಂಸರೇ ಸಾಕಷ್ಟು ವೇಳೆ ಸವೆಸಿ, ಮುಖ್ಯ ಅತಿಥಿಗಳ ಜೊತೆಗೆ ಅಧ್ಯಕ್ಷರಾಗಿ ಕೂತಿದ್ದ ಪ್ರಿನ್ಸಿಪಾಲರು ಮುಖ ತಿರುಚುವಂತಾಗಿತ್ತು. ಇದೀಗ ಒಬ್ಬ ಕಾಲೇಜಿನ ವಿದ್ಯಾರ್ಥಿಯಿಂದ ಕಾಲೇಜಿನ ಬಗ್ಗೆ ಕಳಕಳಿಯ ಪದ್ಯಗಳು ಹಾಡಿಸಿ ಮುಗಿಯುತ್ತಿದ್ದಂತೆ, ಆ ಸಭೆಗೆ ಕರೆಸಿದ್ದ ಮುಖ್ಯ ಮಂತ್ರಿಗಳ ಆಪ್ತ ಸಹಾಯಕ ಮಂತ್ರಿ ತನಗೆ ತುರ್ತು ಕರೆ ದಿಲ್ಲಿಯಿಂದ ಬಂದ ಕಾರಣ ಇಲ್ಲಿ ಬರಲಾಗದ್ದಕ್ಕೆ ಕ್ಷಮೆ ಕೋರಿ ಆತ ಬರೆದು ಕಳಿಸಿದ ಭಾಷಣ ಸಭೆಗೆ ಓದಿಸಲಾಯಿತು. ಇನ್ನಷ್ಟು ವೇಳೆ ಸವೆದಿತ್ತು!

ಇದೀಗ ಸುಪ್ರಸಿದ್ಧ ಸಾಹಿತಿಗಳ ಭಾಷಣ ಸಭೆಯಲ್ಲಿ ಅಳಿದುಳಿದಿದ್ದ ಮಂದಿಗೆ. 'ಕಾಲೇಜು ಮಹಾ ಪ್ರಾಧ್ಯಾಪಕರೆ, ಪಂಡಿತ ಪ್ರವೀಣರೇ, ಮಹನೀಯರೆ, ಮಹಿಳೆಯರೇ, ವಿದ್ಯಾರ್ಥಿ, ವಿದ್ಯಾರ್ಥಿನಿಯರೆ, ಇದೀಗ ನನ್ನ ಇಲ್ಲಿಗೆ ಕರೆಸಿ, ಸನ್ಮಾನಿಸಿದ್ದೀರಿ. ನಾನು ಬಹಳವೇ ಅಭಾರಿ. ನಾನು ನಿಮ್ಮನುದ್ದೇಶಿಸಿ ಮಾತಾಡಬೇಕೆಂದಿದ್ದ ವಿಷಯ ಬಹಳವೇ ಇದೆ. ಆದರೆ, ಕಾರ್ಯಕ್ರಮ ತಡವಾಗಿ ಮತ್ತಿತ್ತರ ಕಾರಣಗಳಿಂದಾಗಿ ವೇಳೆ ಮೀರುತ್ತಿದ್ದು, ನಾನೀಗ ಭಾಷಣ ಮಾಡುವುದಾದರೆ ನಿಮ್ಮ ತಾಳ್ಮೆ ಪರೀಕ್ಷಿಸಿದಂತಾಗುವುದೇನೋ ಎಂಬ ಸಂಶಯ ಕಾಡುತಿದೆ. ಸಮಯ ಮೀರಿದೆ. ನಿಮಗೂ ಮಿತಿಯಿದೆಯೆಂಬುದನ್ನ ಬಲ್ಲೆ. ಈ ಕಾರಣ ನಾನು ಹೇಳಬೇಕೆಂದಿರುವುದನ್ನ ಕೆಲವೇ ಮಾತುಗಳಲ್ಲಿ ಮುಗಿಸಿ, ನನ್ನ ಪೂರ್ತಿ ಭಾಷಣವನ್ನ ನಿಮ್ಮ ಮುಖ್ಯ ಪ್ರಾಧ್ಯಾಪಕರಿಗೆ ಹಸ್ತಾಂತರಿಸುತ್ತಿದ್ದೇನೆ, ಅದರ ಪ್ರತಿ ಮಾಡಿ ನಿಮಗೆ ತಲುಪಿಸುವಂತೆ ನನ್ನ ಕೋರಿಕೆ;' ಎಂದು ಸ್ವಲ್ಪವೇ ಸಮಯದಲ್ಲಿ ಮುಗಿಸಿ ಕೈ ಮುಗಿದರು. ಸಭೆ ಭುವನೇಶ್ವರಿಗೆ ಜೈಕಾರ ಮಾಡುವದೊಂದಿಗೆ ಮುಕ್ತಾಯ.

ಮಾರನೇ ದಿನ, ಮುಂದೆ ಕಾರ್ಯಕ್ರಮಗಳನ್ನ ಎಗ್ಗಿಲ್ಲದಂತೆ ನಡೆಸುವಂತೆ ಕಾಲೇಜಧ್ಯಕ್ಷರ ಅಪ್ಪಣೆ ಬಂತು.

ಆ ಮಾಸದ ಕೊನೆಯಲ್ಲಿ ಕನ್ನಡ ಮಾತಾಡುವುದರ ಬಗ್ಗೆ ಎಲ್ಲರೂ ತಪ್ಪುಒಪ್ಪುಗಳ ಕಲೆಹಾಕಿದಾಗ, ಕಾರ್ಯಕ್ರಮ ನಡೆದ ಒಂದೇ ದಿವಸದ ತಪ್ಪುಗಳು ನೂರಕ್ಕೆ ಎಪ್ಪತ್ತು ಮಂದಿಗೂ ಜಾಸ್ತಿ ಪರ್ಸು ಕಚ್ಚುವಂತಾಗಿತ್ತು. ಆದರೇನು, ಮುಂದೆ ನಾವು ತಿದ್ದಿಕೊಳ್ಳುತ್ತೇವೆಂದು ಮತ್ತೆ ಘೋಷಿಸಿ, ಎಲ್ಲರೂ ಬುಳ್ಳೂರಾಯನ ಹೋಟೆಲಿಗೆ ಮುಗಿಬಿದ್ದು ಗಡದ್ದಾಗಿ ದೋಸೆ ವಗೈರೆ ಮೆದ್ದರು ವಿದ್ಯಾ ವಾಚಸ್ಪತಿಗಳು!

ಸಿರಿಗನ್ನಡಂ ಗೆಲ್ಗೆ–ಬುಳ್ಳೂರಾಯನ ಹೋಟೆಲ ದೋಸೆಗಂತೂ ಕೊರತೆ ಮಾಸಗಳಾದರೂ ಆಗುವಂತಿಲ್ಲವೆಂದು ಕೆಲಮಂದಿ ಪ್ರೊಬೇಷನರಿಗಳು ಕುಹಕವಾಡಿದ್ದು ಈ ಓಲೆಕಾರನ ಕಿವಿಗೆ ಬಿದ್ದಿದೆ. ■

**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**




**ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಅಂತ ಮೇಷ್ಟ್ರು ಕೇಳಿದ್ರು, ನಾನು ಬಗ್ಗೀತು ಎಂದೆ..... ಕೋಪ ಬಂತು ಅವರ್ಗೆ..... ಅದ್ರಲ್ಲೇನಜ್ಜ ತಪ್ಪಿದೆ?.**

# ಬಾಯಿ ಮುಚ್ಕೊಳಪ್ಪಾ.....

**●ವೈ.ಎನ್. ಗುಂಡೂರಾವ್**

ನಮ್ಮ ತಾಯಿಯ ಸೋದರ ಮಾವನ ಮಕ್ಕಳಲ್ಲಿ ಪಟ್ಟಾಭಿ ಎಂಬುವವನು ಒಬ್ಬ. ಮಹಾಘಟಿಂಗ, ಏನಾದರೊಂದು ಕೀಟಲೆ ಮಾಡುತ್ತಲೇಯಿರುತ್ತಿದ್ದ. ಆಟಕ್ಕೆಂದು ಹೊರಟ ಹುಡುಗರ ಚಡ್ಡಿಜೇಬಿನಲ್ಲಿ ಮನೆಯವರು ತಿಂಡಿ ತುಂಬಿ ಕಳುಹಿಸಿದರೆ ಈ ಕಿಲಾಡಿ ಪಟ್ಟಾಭಿ ದೇವಸ್ಥಾನದ ಕಲ್ಲಿನ ಮೇಲೆ ಬಹಳ ಸುಸ್ತಾದವನಂತೆ ಕುಳಿತುಬಿಡುತ್ತಿದ್ದ. ಆಟ ಆಡೋಣ ಬಾ ಅಂದ್ರೆ, "ಅಯ್ಯೋ ನನ್ನ ಕೈಲಾಗೋಲ್ಲಪ್ಪ, ಆಗೋಲ್ಲಪ್ಪ ನನ್ನ ಕೈಲಿ, ವಿಪರೀತ ಹಸಿವೆ, ಎದ್ದೇಳಕ್ಕೂ ಆಗ್ತಾಯಿಲ್ಲ..." ಎಂದು ಗೋಡೆಗೊರಗಿ ಕುಳಿತುಬಿಡುತ್ತಿದ್ದ. ಅವನ ಜೇಬಿನಲ್ಲಿದ್ದ ಡುಮ್ಮ ಗೋಲಿಯ ಆಸೆಯಿಂದ ಆಟಕ್ಕೆ ಬಂದಿದ್ದ ಚಂದ್ರ, ರಾಜಿ, ಶ್ರೀಕಂಠ, ನಾನು ಎಲ್ಲರೂ ಹೋಗ್ಲಿಬಿಡು. ನಾವು ತಿಂಡಿ ತಂದಿದ್ದೇವೆ. ಅದರಲ್ಲೇ ಸ್ವಲ್ಪ ಸ್ವಲ್ಪ ಕೊಡ್ತೇವೆ ಎಂದಿದ್ದೇ ತಡ ಎದ್ದು ಲವಲವಿಕೆಯಿಂದ ಕುಳಿತು "ಕಡ್ಲೆಪುರಿ, ಹುರಿಗಾಳು, ಚಕ್ಕಲಿ–ಕೋಡುಬಳೆ" ಹೀಗೆ ಯಾರ್‍ಯಾರು ಏನೇನು ತಂದಿದ್ದಾರೋ ಅದನ್ನೆಲ್ಲಾ "ಇನ್ನು ಸ್ವಲ್ಪ ಹಾಕ್ರೋ, ಏನ್ ಜಿಪುಣತನ ಮಾಡ್ತಿರೋ" ಎಂದು ಬಲವಂತ ಮಾಡಿ ಹಾಕಿಸಿಕೊಂಡು ತಿನ್ನುತ್ತಿದ್ದ.

ಹೀಗೊಮ್ಮೆ ಯಾರೋ ಹುಡುಗ ತಂದಿದ್ದ ಹುರಿಗಾಳು ಸಿಕ್ಕಿತು ಎಂದು ತಿಂದ. ಗಟ್ಟಿ ಹೆಸರು ಕಾಳೊಂದು ಹಲ್ಲಿನ ಸಂದಿಗೆ ಸಿಕ್ಕಿಕೊಂಡು ತ್ರಾಸಕೊಡತೊಡಗಿದ್ದಾಗ ಕಡ್ಡಿಹಾಕಿ ಬಾಯನ್ನು 'ಆ....' ಎಂದು ತೆಗೆಯಲು ಹೋದರೆ ದವಡೆ ಕಚ್ಚಿ ಹಿಡಿದಂತಾಗಿ ತೆರೆದ ಬಾಯನ್ನು ಮುಚ್ಚಲಾಗಲೇಯಿಲ್ಲ. ಆಟವಾಡುತ್ತಿದ್ದ ನಮ್ಮ ಬಳಿ ಬಂದು "ಆ.....ಆ.....ಆ.....' ಎಂದೆನ್ನತೊಡಗಿದ. ನಮಗೆ ಅರ್ಥವಾಗದೆ ಏನು, ಏನು? ಎಂದೆವು. ಬಲಗೈಯಲ್ಲಿ ದವಡೆ ಮುಟ್ಟಿ ಐದುಬೆರಳನ್ನು ಮುಚ್ಚಿ, ಬಿಡಿಸಿ ತೋರಿಸುತ್ತಾ ಆಗ್ತಾಯಿಲ್ಲ ಎಂದು ಕೈ ಅಲ್ಲಾಡಿಸಿದ.

ಆಗಲೇ ನಮಗೆಲ್ಲಾ ಅರ್ಥವಾದದ್ದು. ದವಡೆಯನ್ನು ಮುಚ್ಚಲಾಗದೆ ಒದ್ದಾಡುತ್ತಿದ್ದನೆಂಬುದು. ಕೆಲವರು ಅವನ ಮನೆಗೆ ವಿಷಯ ತಿಳಿಸಲು ಓಡಿದೆವು. ಅವರ ಅಣ್ಣ ಕೇಶವ ಬಂದವನು ದವಡೆಯ ಅಕ್ಕಪಕ್ಕವನೆಲ್ಲ ಹಿಚುಕಿ ಮುಚ್ಚುವಂತೆ ಮಾಡಲು ಪ್ರಯತ್ನಿಸಿದ. ಏನು ಮಾಡಿದರೂ ಲಾಕ್ ಆಗಿದ್ದ ದವಡೆ ಮುಚ್ಚಲಾಗುತ್ತಲೇಯಿಲ್ಲ. ಅಷ್ಟರಲ್ಲಿ ಅವರ ತಂದೆಯೂ ಬಂದರು. ಅವರೂ ಏನೇನೋ ಸಲಹೆ, ಸೂಚನೆ ಕೊಟ್ಟು ಮುಚ್ಚುವಂತೆ ಮಾಡಲು ಪ್ರಯತ್ನಿಸಿದರು. ಊಹುಂ! ಏನು ಮಾಡಿದರೂ ಮುಚ್ಚಲಾಗುತ್ತಲೇಯಿಲ್ಲ.

ಇಂತಹ ಸುದ್ದಿಹಳ್ಳಿಯಲ್ಲಿ ಬಹುಬೇಗ ಹರಡಿಬಿಡುತ್ತದೆ. ಸುಮಾರು ಜನ ಪಟ್ಟಾಭಿಯ ಮನೆ ಮುಂದೆ ಸೇರಿಬಿಟ್ಟರು. ಒಬ್ಬೊಬ್ಬರು ಒಂದೊಂದು ಸಲಹೆ ಕೊಡತೊಡಗಿದರು. ಎದುರು ಮನೆಯ ಪಂಡಿತ ಶ್ರೀನಿವಾಸಮೂರ್ತಿಗಳು ಅದೆಂತಾದ್ದೋ ಚೂರ್ಣವನ್ನು ಬಾಯಿಗೆ ಹಾಕಿ ನೀರು ಕುಡಿಸಿ ಐದು ನಿಮಿಷದಲ್ಲಿ ಮುಚ್ಚಿಕೊಳ್ಳುವಂತಾಗುತ್ತದೆ ಎಂದರು. ಐದಾಯ್ತು, ಹತ್ತಾಯ್ತು, ಒಂದು ಗಂಟೆಯೂ ಆಯಿತು. ಅದೇ ಸ್ಥಿತಿ 'ಆ....' ಎಂದು ಕುಳಿತಿದ್ದಾನೆ.

"ನೋಡಿ ಕೆಳಗಡೆ ಗಡ್ಡ ಹಿಡ್ಕಂಡು ತಲೆ ಮ್ಯಾಗೆ ಒಂದು ಮಡ್ಗಿ ತಾನೇ ಮುಚ್ಕತದೆ" ಎಂದ ಒಬ್ಬ.

"ಅಯ್ ಕೆಳಗಡೆ ದವಡೆ ಅಳ್ಳಾಡಿಸಿ, ಸ್ವಲ್ಪ ಸಡಿಲವಾದರೆ ಮುಚ್ಕೊಬೋದು ಇನ್ನೊಬ್ಬನ ಸಲಹೆ.

"ಬೆನ್ನಿಗೊಂದು ಗುದ್ದಿ ಸ್ವಾಮಿ ಸರಿ ಹೋಯ್ತದೆ".

"ಕಾಲುಗಳ ಮ್ಯಾಲಕ್ಕೆ ಮಾಡಿ ನ್ಯಾತಾಕ್ಬುಡಿ. ಬಾಯಿ ಮುಚ್ಕಂತಾರೆ"

"ಏನು ಬ್ಯಾಡ, ಕೆರೆ ತನಕ ಓಡ್ಸಿ, ಓಡೋ ಆತುರದಲ್ಲಿ ಮುಚ್ಕಳ್ದೇದ್ರೆ ಕೇಳಿ... ಅವರ್ಲೆ ಸುಬ್ಬಪ್ನೋರ ನಾಯಿ ಕಂಡ್ರೆ ಆಗ್ದು. ನಾಯಿ ಕರಕಂದು ಬಂದು ಬುಡಿ, ನಾಯಿ ನೋಡಿದರೆ ಓಡ್ತಾರೆ".

"ಕೆರೆ ಪಕ್ಕದಲ್ಲಿ ಆಟ ಆಡ್ತಾಯಿದ್ರು ಅಲ್ವಾ, ನಂಗೊತ್ತು, ಇದೆಲ್ಲಾ ಮಾರಿ–ಮಸಣರ ಕಾಟವೇ. ಲಿಂಗಾಪುರಕ್ಕೆ ಯಾರನ್ನಾದರೂ ಓಡ್ಸಿ, ಮಾರಮ್ಮನಿಗೊಂದು ಕಾಯಿ ಒಡೆಸ್ಕಂಡು ಬಂದ್ರೆ ಸರಿಹೋಯ್ತದೆ". ಮಾರಿ, ಮಸಣರ ಭೀರುವಿನ ಸಲಹೆ.

ಹುಡುಗರ ಮಧ್ಯೆಯೇ ಸುಳಿದಾಡುತ್ತಿದ್ದ ಈ ಸುದ್ದಿ ವಯಸ್ಸಾದವರ ಕಿವಿಗಳಿಗೂ ತಲುಪಿತು. ಬಂದ ಕೆಲವರು ಏನೇನೋ ಸಲಹೆ ಕೊಟ್ಟರು, ಹೋದರು. ಪ್ರಯೋಜನವಾಗಲಿಲ್ಲ. ಕಡೆಗೆ ಗಾಡಿ ಕಟ್ಟಲು ತಿಳಿಸಿ ಯಳಂದೂರಿನ ಆಸ್ಪತ್ರೆಗೆ ಕರೆದೊಯ್ಯುವುದೆಂದು ತೀರ್ಮಾನಿಸಿ ಗಾಡಿ ಹೂಡಲು ಆಳಿಗೆ ಹೇಳಿ ಕಳುಹಿಸಿದರು.

ಅಷ್ಟರಲ್ಲಿ ಎದುರುಗಡೆ ಪಂಚಾಯ್ತಿ ಹಾಲ್‌ನ ಹಿಂದಿನ ಮನೆಯಲ್ಲಿದ್ದ ದೊಡ್ಡ ನಾಗಣ್ಣನಿಗೂ ಈ ವಿಷಯ ತಿಳಿದು ಓಡೋಡಿ ಬಂದ. ಜಗುಲಿಯ ಕುದುರೆಯ ಗೋಡೆಯ ಮೇಲೆ ಕುಳಿತಿದ್ದ ಪಟ್ಟಾಭಿಯ ಮುಖ, ಗಡ್ಡ, ಕೆನ್ನೆ ಎಲ್ಲ ಸವರಿದ, ಕೆಳಗಡ್ಡ ಹಿಡಿದು ಅದುಮಿದ, ಉಹುಂ.... ಬರೋವ್ರು ಬರ್ತಿದ್ರು, ಹೋಗೋವ್ರು ಹೋಗ್ತಿದ್ರು. ಪಟ್ಟಾಭಿ ಮಾತ್ರ 'ಆ....' ಎಂದು ಕೊಂಡು ಎಲ್ಲರ ಮುಖವನ್ನು ನೋಡುತ್ತಾ ಕುಳಿತೇಯಿದ್ದ.

ಬಂದವರೆಲ್ಲ ಏನೇನೋ ಹೇಳುತ್ತಿದ್ದಾರಲ್ಲ ಎಂಬ ಸಂಕೋಚ, ಯಾರೇನು ಮಾಡಿದರೂ ಸರಿಹೋಗ್ತಿಲ್ಲವಲ್ಲ ಎಂಬ ನಾಚಿಕೆ, ಹೀಗಾಯಿತಲ್ಲ ಎಂಬ ಜಿಗುಪ್ಸೆ ಇವು ಯಾವುವೂ ಅವನ ಮುಖದಲ್ಲಿ ಕಾಣುತ್ತಿರಲಿಲ್ಲ. ಅಥವಾ 'ಆ...' ಎಂದು ಕುಳಿತಿದ್ದರಿಂದ ಮುಖದ ಭಾವನೆಗಳನ್ನು ನಮಗೆ ಗುರುತಿಸಲಾಗುತ್ತಿರಲಿಲ್ಲವೋ ಒಂದೂ ತಿಳಿಯದಾಗಿತ್ತು.

ಕಡೆಗೆ ದೊಡ್ಡ ನಾಗಣ್ಣ ರಾಯರೇ, ನಂಜೊತೆ ಕಳ್ಸಿ. ನಾನು ಮನೆಗೆ ಕರ್ಕೊಂಡ್ಹೋಗಿ ಪ್ರಯತ್ನ ಪಡ್ತೀನಿ ಎಂದ.

"ಬೇಡಪ್ಪ, ಯಾರೇನು ಮಾಡೋದು ಬೇಡ. ಹೇಗೂ ಆಸ್ಪತ್ರೆಗೆ ಹೊರಟಿದ್ದಾಗಿದೆ. ಅಲ್ಲೇ ತೋರಿಸಿ ಕೊಂಡು ಬಂದು ಬಿಡ್ತೇನೆ" ಎಂದರು ರಾಮರಾಯರು.

ರಾಯರೇ ಗಾಡಿ ಕಟ್ಟಿಕೊಂಡು ಬರಲು ಇನ್ನೂ ಹತ್ತು ನಿಮಿಷ ಆಗುತ್ತೆ.

ಅಷ್ಟರ ಒಳಗೆ ಆಗದಿದ್ರೆ ಕರ್‍ಕೊಂಡ್ಹೋಗಿ. ಅಲ್ಲೀತನಕ ಸುಮ್ನೆ ಕೂತಿರೋದ್ರ ಬದಲು ಕಳಿಸಿ ಅಷ್ಟೆ ಎಂದ ನಾಗಣ್ಣ. ನಾಗಣ್ಣ ಮರಗೆಲಸ, ಕುಲುಮೆ ಕೆಲಸ ಎಲ್ಲ ತಿಳಿದ ಮನುಷ್ಯ.

ಸರಿ ಅದೇನ್ಮಾಡ್ತಿಯೋ ಮಾಡು. ಆದ್ರೆ ಹುಷಾರು ಎಂದು ಎಚ್ಚರಿಸಿ ಪಟ್ಟಾಭಿಯನ್ನು ಕಳುಹಿಸಿದರು. ಕಿಂದರಿ ಜೋಗಿಯ ಹಿಂದೆ, ಹೊರಟಂತೆ ಅವರ ಹಿಂದೆ ನಾವು, ಹುಡುಗರ ದಂಡು.

ಏಯ್, ಎಲ್ಲಿಗೆ ಬರ್‍ತೀರಾ? ಯಾರು ಬರೋದು ಬೇಡ. ಹೋಗಿ ಹೋಗಿ ಆಡ್ಕೊಳ್ಳಿ ಎಂದು ಅಟ್ಟಿದ ನಾಗಣ್ಣ. ಪಟ್ಟಾಭಿಯೊಬ್ಬನನ್ನೇ ಕುಲುಮೆಯ ಹತ್ತಿರ ಕರೆದೊಯ್ದು ಅತ್ತ ಮುಖ ಮಾಡಿ ಕೂಡಿಸಿದ. ಕಬ್ಬಿಣದ ಸಲಾಕೆಯೊಂದನ್ನು ಕೆಂಪಗೆ ಕಾಯಿಸಿದ. ತಿರುಗಪ್ಪ ಈ ಕಡೆ ಎಂದ ನಾಗಣ್ಣ. ಕೆಂಪಗೆ ಕಾದ ಸಲಾಕೆಯನ್ನು ನೋಡೇ ಪಟ್ಟಾಭಿಗೆ ಚೆಡ್ಡಿ ಒದ್ದೆಯಾದಂತೆನಿಸಿತು. ಎಲ್ಲಿ ಬಾಯಿಯೊಳಕ್ಕೆ ಸಲಾಕೆಯನ್ನು ತೂರಿಸಿಬಿಡುತ್ತಾನೋ ಎಂದು ಹೆದರಿ ಓಡಿ ಹೋಗಲು ಎದ್ದ.

ಕೈಹಿಡಿದು ಕೂಡಿಸಿದ ನಾಗಣ್ಣ, ನೋಡು ಪಟ್ಟಾಭಿ ಕೂತ್ಕೊ. ನಾನೇನು ಬಾಯಿ ಸುಡಲ್ಲ. ನೀನೇ ಬಾಯಿ ಮುಚ್ಕೊಂಬಿಡು. ಇಲ್ದಿದ್ರೆ ಬಾಯಿಯೊಳಕ್ಕೆ ಸ್ವಲ್ಪ ಹಾಕಿ, ದವಡೆ ಬಿಸಿ ಮಾಡಿ, ಮುಚ್ಕೊಳ್ಳೊ ಹಾಗೆ ಮಾಡ್ತೀನಿ. ಏನೂ ಆಗೋಲ್ಲ. ಹೆದರ್‍ಕೋಬೇಡ ಎಂದ ಧೈರ್ಯ ಹೇಳಿದ ನಾಗಣ್ಣ.

ಕೆಂಪಗೆ ಕಾದ ಸರಳನ್ನು ಬಾಯಿಯೊಳಗೆ ಎಲ್ಲಿ ಹಾಕಿಬಿಡುತ್ತಾನೋ ಎಂದು ಹೆದರಿದ ಪಟ್ಟಾಭಿ ಕಾದ ಸರಳನ್ನು ಬಾಯಿಯ ಹತ್ತಿರ ತರುತ್ತಿದ್ದಂತೆ 'ಆ' ಎಂದು ಮುಚ್ಚಿಕೊಂಡು ಬಿಟ್ಟ. ನೋಡಿದ್ಯಾ ಏನೂ ಆಗ್ಲಿಲ್ಲ ಅಲ್ವಾ, ಎಲ್ಲಿ ಒಂದೆರಡು ಸಾರಿ ಬಾಯಿ ತೆಗೆದು, ಮುಚ್ಚಿ ಮಾಡು ನೋಡೋಣ ಎಂದು ಪರೀಕ್ಷಿಸಿದ ನಾಗಣ್ಣ. ಪಟ್ಟಾಭಿ ಹಾಗೇ ಮಾಡಿದ. ಸರಿ ಹೋಗೇಬಿಟ್ಟಿತ್ತು. ನಾಗಣ್ಣ, ಪಟ್ಟಾಭಿಯನ್ನು ಅವರ ಮನೆ ಬಳಿ ಕರೆ ತಂದಾಗ ಮುಚ್ಚಿದ ಬಾಯಿಯನ್ನು ಕಂಡ ಹುಡುಗರೆಲ್ಲರೂ 'ಹೋ' ಎಂದು ಕಿರುಚಿದರು. ರಾಮರಾಯರಿಗೂ ಆಶ್ಚರ್ಯ. ಏನ್ಮಾಡಿದೆ ನಾಗಣ್ಣ ಎಂದರು. ಏನೋ ಮಾಡಿದೆ. ಬಿಡಿ ರಾಯರೆ, ಸದ್ಯ ಸರಿಹೋಯ್ತಲ್ಲ ಎಂದ.

ಬಾಯಿಯೊಳಕ್ಕೆ ಕೆಂಪಗೆ ಕಾದ ಸರಳನ್ನು ಹಾಕಿ ಬಿಡುತ್ತಾನೆಂಬ ಭಯ ಅವನ ಮನಸ್ಸನ್ನು ಆವರಿಸಿದ್ದು, ಅದು ಶರೀರದ ಮೇಲೆ ಕೆಲಸಮಾಡಿ ದವಡೆ ಮುಚ್ಚುವಂತೆ ಮಾಡಿರಬೇಕು.

ಮುಂದೆಂದೂ ಹುರಿಗಾಳು ತಂಟೆಗೆ ಹೋಗಿದ್ದರೆ ಕೇಳಿ. ಹುರಿಗಾಳು ತಿಂತಿಯಾ ಪಟ್ಟಾಭಿ ಎಂದರೆ ಸಾಕು, ಅಯ್ಯೋ ಬೇಡಪ್ಪ ಎಂದು ಮುಖ ತಿರುವಿಬಿಡುತ್ತಿದ್ದ. ■

---

## ಸಂದೇಹ

ಅಂಚೆ ಕಚೇರಿಯಲ್ಲಿ 30 ವರ್ಷ ದುಡಿದು ನಿವೃತ್ತಿ ಆಗಿ ಹೊರನಡೆದ ಆತ ತನ್ನ ಬಾಸ್‌ಗೆ ಹೇಳಿದ್ದು: ಸರ್, ನನ್ನ ಪಿಎಫ್, ಗ್ರಾಚುಯಿಟಿ ಚೆಕ್ ಪೋಸ್ಟ್ ಮಾಡಬೇಡಿ. ಡಿಲೆವರಿ ಆಗುತ್ತೋ ಇಲ್ಲವೋ..


● ದಂನಆ

- ಯಶಸ್ಸು ತಲೆಗಷ್ಟೇ ಹೋಗದು. ಒಮ್ಮೊಮ್ಮೆ ಬಾಯಿಗೂ ಹೋಗುತ್ತದೆ.
- ಸಾಹಿತಿಗಳು ಗಾಳಿ ಗೋಪುರಗಳನ್ನು ನಿರ್ಮಿಸಿದರೆ ಓದುಗರು ಅವುಗಳಲ್ಲಿ ವಾಸಿಸುತ್ತಾರೆ, ಪ್ರಕಾಶಕರು ಬಾಡಿಗೆ ವಸೂಲು ಮಾಡುತ್ತಾರೆ.
- ಲೈಫ್ ಡಸ್ ನಾಟ್ ಕಂ ಟು ಅಸ್ ವಿತ್ ಅ ಸ್ಪೆಷಲ್ ವಾರಂಟಿ.
- ನಾನು ಅದನ್ನು ತತ್ವಶಃ ಒಪ್ಪುತ್ತೇನೆ ಎಂದು ಹೇಳುವವನಿಗೆ ಅದನ್ನು ಅನುಷ್ಠಾನಕ್ಕೆ ತರಲು ಕಿಂಚಿತ್ತೂ ಆಸಕ್ತಿ ಇರುವುದಿಲ್ಲ.
- ಅಂಚೆ ತಡವಾಯಿತು ಎಂದು ನಾನು ದೂರುತ್ತಿಲ್ಲ. ಆದರೆ ಕಳೆದ ವಾರ ನನಗೆ ಕಳಿಸಿದ ಹೂ ಬೀಜಗಳು ನನಗೆ ತಲುಪಿದಾಗ ಪುಷ್ಪಗುಚ್ಛವಾಗಿತ್ತು.
- ಮಕ್ಕಳಿಗೆ ಆಗಾಗ್ಗೆ ಬೇಸರವಾಗಲು ಬಿಡುವುದು ಒಳಿತು. ಆಗ ಬೇಸರ ನೀಗಿಸಲು ಅವರೇ ಉಪಾಯಗಳನ್ನು ಕಂಡುಕೊಳ್ಳುತ್ತಾರೆ.
- ಎ ಗ್ರಾಂಡ್ ಮದರ್ ಈಸ್ ಎ ಮದರ್ ಹು ಹ್ಯಾಸ್ ಎ ಸೆಕೆಂಡ್ ಚಾನ್ಸ್.
- ಚಿತ್ರದಲ್ಲಿ ಬಾಂಬ್ ಅನಿರೀಕ್ಷಿತವಾಗಿ ಸಿಡಿದರೆ ಅದು ಅಚ್ಚರಿ. ಆದರೆ ಬಾಂಬ್ 5 ನಿಮಿಷಗಳಲ್ಲಿ ಸಿಡಿಯಲಿದೆ ಎಂದು ಪ್ರೇಕ್ಷಕರಿಗೆ ಗೊತ್ತಿದ್ದು ಹೀರೋಗೆ ಗೊತ್ತಿಲ್ಲದಿದ್ದರೆ ಅದು ಸಸ್‌ಪೆನ್ಸ್ – ಆಲ್ಫ್ರೆಡ್ ಹಿಚ್‌ಕಾಕ್ ಉವಾಚ.
- ಸೈನಿಕರು ಹೋರಾಡುತ್ತಾರೆ. ಆದರೆ ಹೀರೊ ಮಾತ್ರ ರಾಜ.
- ಮಕ್ಕಳು ನನ್ನ ಮಾತು ಕೇಳುತ್ತಿಲ್ಲ ಎಂದು ಯೋಚಿಸಬೇಡಿ. ಆದರೆ ಅವರು ನಿಮ್ಮನ್ನು ಯಾವಾಗಲೂ ಗಮನಿಸುತ್ತಿರುತ್ತಾರೆ ಎಂಬುದರ ಬಗ್ಗೆ ಯೋಚಿಸಿ.
- ಯು ಕೆನ್ ಬಯ್ ಫ್ಲಾಟರಿ ಬಟ್ ಎನ್ವಿ ಮಸ್ಟ ಬಿ ಅರ್ನಡ್.
- ತಾಳ್ಮೆ ಅತ್ಯವಶ್ಯಕ. ಮೊಟ್ಟೆಯಿಂದ ಕೋಳಿ ಹೊರಬರಲು ಕಾವು ಕೊಡಬೇಕು. ಒಡೆಯುವದರಿಂದ ಅಲ್ಲ.

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ




# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ, ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**
**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**
ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಫೇಸ್ಬುಕ್

**●ಅಮೃತವರ್ಷಿಣಿ ವಿ ಎಲ್**

ಈ ಫೇಸ್ಬುಕ್‌ನ ಸ್ವರೂಪ ಅರ್ಥ ಮಾಡ್ಕೊಳಕ್ಕೇ ಆಗ್ತಿಲ್ವಲ್ಲ ಗುರೂ.

ಒಂದು ಕಡೆ ಮ್ಯಾಜಿಕ್ ನೋಡಿ ಉರುಳಾಡಿಕೊಂಡು ನಗೋ ಚಿಂಪಾಂಜಿ ತೋರ್ಸುತ್ತೆ, ಅದರ ಕೆಳಗಡೇನೇ ಇವರ್ಯಾರೋ ಇಂಥ ಈಶ್ವರಿ, ಈ ತಾಯಿಗೆ ಲೈಕ್ ಕೊಟ್ಟು ಕೃಪೆಗೆ ಪಾತ್ರರಾಗಿ ಅನ್ನೋ ಚಿತ್ರ ಕಾಣುತ್ತೆ. ಇನ್ನೊಬ್ರು ನಿಮ್ಗೆ ಈ ಚಿತ್ರದಲ್ಲಿ ನಿಮ್ಮ ಇಷ್ಟದೈವ ಕಂಡ್ರೆ ಕಮೆಂಟ್ ಮಾಡಿ, ಕಾಣದಿದ್ರೆ ಲೈಕ್ ಮಾಡಿ ಅನ್ನೋ ವಿಚಿತ್ರ ಆಪ್ಷನ್ ಕೊಡುತ್ತಾರೆ.

ಇಂತಿಪ್ಪ ಫೇಸ್ಬುಕ್ ಗೆ ಯಾವುದೋ ದಿನಾಚರಣೆ ಬಂದ್ಬಿಟ್ರೆ ಪರದಾಟ ತಪ್ಪಿದ್ದಲ್ಲ. ಮೈತುಂಬ ಆ ದಿನಾಚರಣೆಯ ಪಟಗಳನ್ನು ಅಂಟಿಸಿಕೊಂಡು ಯಾವುದನ್ನ ತೋರಿಸ್ಲಿ ಯಾವುದನ್ನ ಬಿಡ್ಲಿ ಅಂತ ಇಡೀ ದಿನ ಕಣ್ಕಣ್ಣು ಬಿಡ್ತಾ ಇದ್ಬಿಡುತ್ತೆ ಪಾಪ.

ಇನ್ನು ಯಾರಾದ್ರೂ ಸ್ವಲ್ಪ ಫೇಮಸ್ ಆದವ್ರು ಏನೋ ಆಗಿ ಸಾವನ್ನಪ್ಪಿದ್ರೆ ಥೇಟ್ ರಸ್ತೆ ರಸ್ತೆಗಳ ಮೂಲೆಗಳಲ್ಲಿ ನೇತಾಡುವ "ಭಾವಪೂರ್ಣ ಶ್ರದ್ಧಾಂಜಲಿ" ಗಳಂತೆ ಆಗುತ್ತೆ ಈ ನಮ್ ಫೇಸ್ಬುಕ್‌ನ ಇಡೀ ಗೋಡೆ. ಆರ್‌ಐಪಿಗಳ ಸರಮಾಲೆ ಎಷ್ಟುದ್ದ ಬೆಳೆದರೂ ಸಾಲದೇ ಸಾಲದು. ಯೋಧರ ಅಂತಿಮ ದರ್ಶನದ ಚಿತ್ರಗಳಂತೂ ನೋಡುಗರಲ್ಲಿ ಕಣ್ಣೀರು ತರಿಸದೇ ಬಿಡದು ಎಂದು ಹಠ ತೊಟ್ಟಂತೆ ಕಾಣುತ್ತವೆ.

ಕೆಲ ಮಹಾನುಭಾವರು ತಮ್ಮದೇ ಮುಖಾರವಿಂದದ ಫೋಟೊಗಳನ್ನು ಏನೇನೋ ಆಂಗಲ್‌ನಿಂದ ಕ್ಲಿಕ್ಕಿಸಿ ಹೇಗಿದೆ, ಗುಡ್ಮಾರ್ನಿಂಗ್, ಗುಡ್ನೈಟ್ ಇತ್ಯಾದಿ ಬರೆದು ಫೇಸ್ಬುಕ್ ಮೇಲೆ ಬಿಸಾಟಿರುತ್ತಾರೆ. ಇದೇ ಕ್ಯಾಟಗರಿಯಲ್ಲಿ ಹ್ಯಾಪಿ ಸಂಡೇ, ಹ್ಯಾಪಿ ವೀಕೆಂಡ್‌ಗಳಿಗೇನೂ ಬರ ಇಲ್ಲ.

ಫೋಟೋಶಾಪ್ ಬಂದ ಮೇಲಂತೂ ಛಾಯಾಚಿತ್ರಗಳ ಅಸಲೀಯತ್ತು ಎಲ್ಲಿ ಕಳೆದುಹೋಗಿದೆಯೋ ಆ ಫೋಟೋಶಾಪ್ ಬ್ರಹ್ಮನೇ ಬಲ್ಲ. ಯಾವುದೋ ಚಿತ್ರಕ್ಕೆ ಇನ್ಯಾವುದನ್ನೋ ಅಂಟಿಸಿ, ಮತ್ಯಾವುದನ್ನೋ ಕಿತ್ತು ಹಳವಂಡ ಮಾಡಿಟ್ಟು ನೋಡಿದವರ ತಲೆ ಮೊಸರನ್ನ ಆಗುವಂತೆ ಮಾಡುವುದು ಫುಟ್ ಪಾತ್ ಮೇಲೆ ನಡೆದುಕೊಂಡು ಹೋದಷ್ಟೇ ಸಲೀಸಾಗಿಬಿಟ್ಟಿದೆ.

ಇಷ್ಟರ ಮಧ್ಯೆ ಯಾರೋ ಯಾವತ್ತೋ ಹಾಕಿದ್ದ ಮದುವೆದ್ದೋ ಇನ್ಯಾವುದೋ ಫೋಟೋ ವರ್ಷಾನುಗಟ್ಟಲೆ ಹಳೆಯದಾದ್ರೂ ಒಬ್ಬೊಬ್ಬರು ಲೈಕ್, ಕಮೆಂಟ್ ಕೊಟ್ಟಾಗಲೂ ನೀರಿನಲ್ಲಿ ಮುಳುಗಿಸಿಟ್ಟ ಬಲೂನು ಮೇಲೆ ತೇಲುವಂತೆ ಅವಾಗವಾಗ ಮೇಲೆ ಕಾಣಿಸಿಕೊಳ್ಳುತ್ತವೆ. ಹೀಗೆಲ್ಲಾ ಹೇಳಿದ ಮಾತ್ರಕ್ಕೆ ಇಲ್ಲಿ ಒಳ್ಳೆಯದು ಏನೂ ಇಲ್ಲವೆಂದಲ್ಲ, ಹೊಟ್ಟೆ ಹುಣ್ಣಾಗುವಂತೆ ನಗಿಸಬಲ್ಲ ಬರಹ, ಫೋಟೊ, ವಿಡಿಯೋಗಳಿವೆ. ಗೊತ್ತಿಲ್ಲದ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳಬಹುದು. ಜಂಜಾಟದ ಜೀವನದಲ್ಲಿ ಕಳೆದುಹೋಗಿದ್ದ ಸ್ನೇಹಿತರೊಂದಿಗೆ ಮತ್ತೆ ಸಂಪರ್ಕ ಸಾಧಿಸಬಹುದು.

ಇದರ ಸಂದಿಗೊಂದಿಗಳಲ್ಲಿ ಅಲ್ಲಲ್ಲಿ ಒಂದೊಂದು ನ್ಯೂಸ್ ತುಣುಕುಗಳು. ಪೊಲೀಸರ ಪ್ರಕಟಣೆಗಳು. ಇನ್ನು ಕೆಲವು ಜಾಹಿರಾತುಗಳು.

ನಾವೇ ಬರೆದ ಪೋಸ್ಟ್ ನಮಗೇ ಕಾಣದಂತೆ ಕ್ಷಣಾರ್ಧದಲ್ಲಿ ಮಾಯ ಮಾಡಿಬಿಡಬಲ್ಲ ಅವಧೂತ ಶಕ್ತಿಯೂ ಈ ಫೇಸ್ಬುಕ್ಕಿಗಿದೆ. ಮರ್ತಿದ್ದೆ, ಚುನಾವಣಾ ಪ್ರಚಾರಕ್ಕೂ ಇದೇ ವೇದಿಕೆ ಸ್ವಾಮಿ!

ಅಯ್ಯೋ ನನ್ನ ಈ ಹೆಬ್ಬೆರಳು ಇನ್ನೂ ಏನೇನನ್ನ ಸ್ಕ್ರಾಲ್ ಮಾಡ್ಬೇಕೋ, ಈ ಕಣ್ಣುಗಳು ಏನೇನೆಲ್ಲಾ ನೋಡ್ಬೇಕೋ. . . **ಸೌಜನ್ಯ: ಅವಧಿ** ■

# ಬ್ರಹ್ಮಂಗೆ ಅಡ್ವೈಸರಿ

**●ಕೆ.ಎಸ್. ಸೋಮೇಶ್ವರ**

ಬ್ರಹ್ಮ ನಿಂಗೆ ಜೋಡಿಸ್ತೀನಿ ಎಂಡ (ಸ್ಯಾನಿಟೈಸರ್) ಮುಟ್ಟಿದ ಕೈನ (ಜಿ.ಪಿ. ರಾಜರತ್ನಂರವರ ಕ್ಷಮೆ ಇರಲಿ).

ಅಯ್ಯಾ ಬ್ರಹ್ಮ ದೇವ ನೀನ್ಯಾಕೆ ಬದಲಾಗೊದೇ ಇಲ್ವಾ. ನಿನಗೇನೋ ನಾಲ್ಕು ಮುಖ ಇದೆ. ಅದಕ್ಕೆ ಫೇಸ್ ಮಾಸ್ಕ್ ಚೆಕ್ ಮಾಡಲು ಮಾರ್ಷಲ್‌ಗಳು ಬಂದರೆ ಅವರೇ ಕಕ್ಕಾ ಬಿಕ್ಕಿಯಾಗಿ ಬಿಡ್ತಾರೆ. ನಿನಗೇನು ನೀನು ಬೇಕಾದ ಹಂಗೆ ಡಿಸೈನ್ ಚೇಂಜ್ ಮಾಡ್ಕೊಳ್ಳಬಹುದು. ನಮಗೇನು ಒಂದೇ ಫಿಕ್ಸೆಡ್ ಡಿಸೈನ್. ಈಗ ನೋಡು ನಮ್ಮ ಮುಖಕೆಲ್ಲಾ ಮಸಿ ಬಳಿದಂತೆ ಈ ಮಾಸ್ಕ್ ಅನ್ನು ತಗಲು ಹಾಕಿಸಿಬಿಡೋದಾ?

ನೀನೋ ಅ ಪುರಾಣ ಕಾಲದಲ್ಲಿ ಅಂದರೆ ಕೃತಯುಗವೋ ಅಥವಾ ಇನ್ನೂ ಮುಂಚಿನದೋ ಆಗ ನೀವು ತ್ರಿಮೂರ್ತಿಗಳು ಕುಳಿತು ಮೀಟಿಂಗ್ ಮಾಡಿ ಪಾಸ್ ಮಾಡಿದ ಠರಾವನ್ನೇ ಇನ್ನೂ ಪಾಲಿಸಿಕೊಂಡು ಬರ್ತಿದೀಯಾ. ಆ ವಿಷ್ಣು ಮತ್ತು ಮಹೇಶ್ವರರನ್ನು ನೋಡು ಏನೇನೋ ಅವತಾರಗಳನ್ನೆತ್ತಿ ನಮ್ಮನ್ನು ಅಂದರೆ ಈ ಹುಲು ಮಾನವರನ್ನು ಹೇಗೆ ಆಟ ಆಡಿಸಿದ್ದಾರೆ. ಇನ್ನು 'ದಿ ಗ್ರೇಟ್' ಯಮ ಧರ್ಮರಾಯ. ಅವನನ್ನು ನಮ್ಮ ಚಲನ ಚಿತ್ರಗಳವರು ಅವರಿಗೆ ಬೇಕಾದಾಗೆಲ್ಲ ಭೂಮಿಗೆ ಕರೆಸಿಕೊಂಡು ಆಡಿಸುತ್ತಾರೆ. ಅವನು ಒಬ್ಬನೇ ಬರಲ್ಲ ಜೊತೆಗೆ ಧಡೂತಿ ದೇಹದ ಕೋಣ ಬೇರೆ. ಇಲ್ಲಿ ಭಾಷಾ ಭೇಧವಿಲ್ಲ. ಇದರಲ್ಲಿ ನಮಗೆ ಆ ಸತೀ ಸಾವಿತ್ರಿಯೇ ಹುಮ್ಮಸ್ಸು ಕೊಡುವ ಮಾಡೆಲ್ ಲೇಡಿ.

ಈಗ ಕಾಲ ಬದಲಾಗಿದೆ. ನಾವು ನೋಡು, ಡ್ರೈವರ್ ಇಲ್ಲದ ಕಾರುಗಳನ್ನೇ ರಸ್ತೆಯಲ್ಲಿ ಝೂಮ್ ಮಾಡಿಸಿ ಝುಮ್ ಅಂತ ಇದ್ದೀವಿ. ಇನ್ನು ಈಗಂತೂ ನಮ್ಮಲ್ಲಿ ಆತ್ಮ ನಿರ್ಭರ ಅಂತ ಒಂದು ಸ್ಕೀಮ್ ಬಂದಿದೆ. ಅದು ಒಂದು ರೀತಿಯಲ್ಲಿ ಲೋಕಲ್ ಮತ್ತು ಸ್ವಸಹಾಯ ಪದ್ಧತಿ ಇದ್ದಂತೆ. ಹಾಗಾಗಿ ನೀನೂ ನಿನ್ನ ಮೌಲ್ಡ್ ಚೇಂಜ್ ಮಾಡಿಕೊಳ್ಳಲೇ ಬೇಕು. ನಮ್ಮಗಳ ಮೂಗು, ಕಿವಿಗಳು ಮತ್ತು ಬಾಯಿಗೆ ಒಂದೊಂದು ಆಟೋಮ್ಯಾಟಿಕ್ ಕವಾಟ ಮಾಡ್ಬೇಕಲ್ಲವೇ.

ಪಾಪ, ಆ ಲಿಪ್‌ಸ್ಟಿಕ್‌ನವರನ್ನು ನೋಡು. ಏನೂ ಮಾಡಲಾಗದೇ ಕರಗಿ ಹೋಗುತ್ತಿದ್ದಾರೆ. ನಾನು ಹೇಳಿದ ರೀತಿಯಲ್ಲಿ ಫೇಸ್ ಡಿಸೈನ್ ಮಾಡಿದ್ದರೆ ಅವರು ಅದಕ್ಕೆ ತಕ್ಕಂತೆ ಬಣ್ಣ ಬಳಿಯುತ್ತಿದ್ದರು. ನೀವು ದೇವಲೋಕದವರಾದ ರಂಭೆ ಊರ್ವಶೀ, ತಿಲೋತ್ತಮೆ ಇಂತಹ ಅಪ್ಸರೆಯರನ್ನು ಎವರ್ ಗ್ರೀನ್ ಮಾಡಿಟ್ಟಿದ್ದೀಯ. ಇನ್ನು ನಿಮ್ಮಗಳ ಜೀವನ ಸಂಗಾತಿಯರು. ಅವರಿಗೆ ಯಾವ ಮೇಕಪ್ ಆರ್ಟಿಸ್ಟೂ ಬೇಕಿಲ್ಲ. ಅವರನ್ನು ಯಾವ ರೀತಿ ತೀಡಬೇಕೋ ಅದನ್ನು ಕಾಲ ಕಾಲಕ್ಕೆ ತಕ್ಕಂತೆ ನೀನೇ ಮಾಡಿಬಿಟ್ಟಿರುತ್ತೀಯ . ನಮ್ಮ ಭೂಲೋಕದ ರಮಣಿಯರ ಮೇಲೇಕೆ ನಿನ್ನ ಪಾರ್ಷಿಯಾಲಿಟಿ. ನೋಡು ಈಗ ಮಾಸ್ಕ ಧರಿಸುವುದು ಕಡ್ಡಾಯವಂತೆ. ಹಾಗಾಗಿ ಅವರಿಗೆ ಪಾಪ ತಮ್ಮಗಳ ಮುಖ ಸೌಂದರ್ಯವನ್ನು ಬಿಚ್ಚಿಡುವ ಅವಕಾಶವೇ ಇಲ್ಲದಂತೆ ವಂಚಿತರಾಗಿದ್ದಾರೆ.

ಕಾಲ ಬದಲಾಗಿದೆ . ಬೊಮ್ಮ, ನೀನು ಕೂಡ ಬದಲಾಗಲೇ ಬೇಕು. ಇಲ್ಲಾ ಅಂದರೆ ನೀನು ಔಟ್ ಡೇಟೆಡ್ ಆಗಿ ಬಿಡ್ತೀಯಾ ಅಷ್ಟೇ . ■

# ‘ಪಿಕ್ ಪಾಕೆಟ್’ ಪೇಚಾಟಗಳು!

●ಸೂರ್ಯನಾರಾಯಣ ಎಚ್.

ಜನ ಜಂಗುಳಿಯ ಬಸ್ಸಿನಲ್ಲಿ ನೀವು ಕೆಲವು ಸಲ ಪ್ರಯಾಣಿಸಿದವರೇ ಆದಲ್ಲಿ, ನಿಮಗೂ ನನ್ನ ಹಾಗೆ 'ಪಿಕ್ ಪಾಕೆಟ್' ಗೆ ಒಳಗಾದ ಅನುಭವ ಆಗಿರುವ ಸಾಧ್ಯತೆ ಇದೆ. ಇಷ್ಟರವರೆಗೆ ಆಗಿಲ್ಲ ಎಂದರೆ, ನೀವು ಬಹಳ ಅದೃಷ್ಟಶಾಲಿಗಳೇ ಇರಬೇಕು; ಅಥವಾ ಡ್ರೆಸ್ಸಿನಲ್ಲಿ ಪಾಕೆಟ್ ಇಲ್ಲದವರೂ ಆಗಿರಬಹುದು. ನೀವು ಬಹಳ ಎಚ್ಚರಿಕೆಯ ಅಥವಾ ಜಾಗರೂಕ ಮನುಷ್ಯ , ಯಾವನಿಗೂ ನಿಮ್ಮನ್ನು ಏಮಾರಿಸಲು ಸಾಧ್ಯವಿಲ್ಲ, ಆದುದರಿಂದ ನಿಮ್ಮ ಪಿಕ್ ಪಾಕೆಟ್ ಆಗಿಲ್ಲ ಎಂದು ಎಣಿಸಿ ನೀವು ಬೀಗುತ್ತಿದ್ದರೆ, ನೀವು ಮಹಾ ನಗರಗಳಲ್ಲಿ ಜನಜಂಗುಳಿಯ ಬಸ್ಸುಗಳಲ್ಲಿ 1–2 ಸಲಕ್ಕಿಂತ ಹೆಚ್ಚು ಪ್ರಯಾಣಿಸಿಲ್ಲ ಎಂದು ಅರ್ಥೈಸಬಹುದು.!

ಮಂಗಳೂರಿನಲ್ಲಿ 90 ರ ದಶಕದಲ್ಲಿ ನನ್ನ ಕಾಲೇಜು ಓದು ನಡೆಯುತ್ತಿತ್ತು. ಮೊದಲಿನ 'ಪರ್ಸ್' ಆ ದಿನಗಳಲ್ಲಿ ಅಣ್ಣ ನನ್ನ ತೆಗೆಸಿ ಕೊಟ್ಟದ್ದು. ಪರ್ಸ್ ಚನ್ನಾಗಿ ಇತ್ತು; ಸುಂದರವಾದ ಪರ್ಸ್‌ನಲ್ಲಿ ಇಡುವುದು ಏನನ್ನು? ಒಟ್ಟಾರೆ 100 ರೂಪಾಯಿಗಳಿಂದ ಹೆಚ್ಚು ಯಾವತ್ತೂ ಆ ದಿನಗಳಲ್ಲಿ ನನ್ನ ಬಳಿ ಇರಲಿಲ್ಲ. ಬಹುಶಃ 6 ಸಣ್ಣ ಅರೆಗಳೂ ಇದ್ದುವು ಎಂದು ನೆನಪು. ಸುರುವಿನ ಸುತ್ತಿನ ಒಂದು ಅರೆಯಲ್ಲಿ ಗಣಪತಿಯ ಫೋಟೋವನ್ನೂ, ಇನ್ನೊಂದರಲ್ಲಿ ಗೋಪಾಲಕೃಷ್ಣ ದೇವರ ಫೋಟೋವನ್ನೂ ಇರಿಸಿದೆ. ಅದರ ಒಳಗಿನ ಅರೆಯಲ್ಲಿ ನನ್ನ ಸ್ವಂತ ಒಂದೆರಡು ಪಾಸ್ಪೋರ್ಟ್ ಸೈಜ್ ಫೋಟೋವನ್ನೂ, ಕಾಲೇಜು ಗುರುತು ಚೀಟಿ ಮತ್ತು ಲೈಬ್ರರಿ ಕಾರ್ಡನ್ನೂ ಇರಿಸಿದೆ. ಕಾಲೇಜು ವೇಳಾಪಟ್ಟಿಯೂ, ರೈಲ್ವೆ ಸೀಸನ್ ಟಿಕೆಟೂ ಹೇಗೋ ಪರ್ಸಿನ ಒಳಗೆ ಜಾಗ ಕಂಡುಕೊಂಡವು. ಕೊನೆಯ ಎರಡು ಅರೆಗಳಲ್ಲಿ, ಒಂದರಲ್ಲಿ 5, 10 ಮುಖಬೆಲೆಯ ನೋಟುಗಳೂ, ಕೊನೆಯದ್ದರಲ್ಲಿ 20 ಮತ್ತು50 ರ ನೋಟುಗಳು. ಆ ದಿನಗಳಲ್ಲಿ ನಮ್ಮ ಮನೆಯವರಲ್ಲಿ ಯಾರ ಬಳಿಯೂ ಯಾವುದೇ ವಾಹನಗಳು ಇರಲಿಲ್ಲ; ಹಾಗಾಗಿ ಆರ್‌ಸಿ, ಲೈಸೆನ್ಸ್ ಕೂಡ ಇರಲಿಲ್ಲ. ಎಟಿಎಂ ಕಾರ್ಡ್ ಎಂಬ ಸಂಗತಿ ಆಗಿನ್ನೂ ಹುಟ್ಟಿರಲಿಲ್ಲ. ಆದರೂ, ಇದು ಯಾವುದೂ ಇಲ್ಲದೆ, ಪರ್ಸ್ ಅಂತೂ ಸಾಕಷ್ಟು ಉಬ್ಬಿತು, ಮನಸ್ಸಿಗೂ ಒಂದು ಸಮಾಧಾನವಾಯಿತು. !

ಪರ್ಸ್ ಇಟ್ಟುಕೊಳ್ಳುವುದು ಎಲ್ಲಿ ? ಆ ದಿನಗಳಲ್ಲಿ ಹುಡುಗರು/ ಯುವಕರು ಪರ್ಸ್ ಅನ್ನು ಪ್ಯಾಂಟಿನ ಹಿಂಬದಿಯ ಪಾಕೆಟ್ನಲ್ಲಿ ಇಟ್ಟುಕೊಳ್ಳುವುದು ಸಾಮಾನ್ಯವಾಗಿತ್ತು. ಮಂಗಳೂರು/ ದಕ್ಷಿಣ ಕನ್ನಡ ಜಿಲ್ಲೆಗಳಂತೂ ಈ ರೀತಿಯೇ ಇಟ್ಟುಕೊಳ್ಳಬೇಕು ಎಂಬ ಮಟ್ಟಿಗೆ ಅದು ‘ಫಾಶನ್ ಸ್ಟೇಟ್‌ಮೆಂಟ್’ ಆಗಿತ್ತು. ಕುಳಿತುಕೊಳ್ಳುವಾಗಲೂ ಅದು ಹಿಂಭಾಗದಲ್ಲಿಯೇ ಇರುವುದರಿಂದ, ಸ್ವಲ್ಪ ಸಮಯದಲ್ಲೇ ಪರ್ಸ್ 'ಬಂಕಿಮ ಚಂದ್ರ' ಆಕೃತಿಗೆ ತಿರುಗುತ್ತಿತ್ತು. ಆದರೂ ಪರವಾಗಿಲ್ಲ, ಬಸ್ಸಿನಲ್ಲಿ ಕಂಡಕ್ಟರಿಗೋ, ಅಂಗಡಿಯಲ್ಲಿ ಚಿಲ್ಲರೆ ವಸ್ತುಗಳ ಖರೀದಿಗೋ, ಸ್ಟೈಲಾಗಿ ಹಿಂಬದಿಯ ಪಾಕೇಟಿಗೆ (ಸ್ವಂತದ್ದು !) ಕೈ ಹಾಕಿ, ಪರ್ಸ್ ಹೊರತೆಗೆದು ಹಣ ಕೊಡುವುದು ಒಂದಿಷ್ಟು ಅಭಿಮಾನವೇ. ಈ ಹಿಂಬದಿಯ ಪಾಕೆಟಿನಲ್ಲಿ ಪರ್ಸ್ ಇಟ್ಟರೆ ಎಗರಿಸುವುದು ಬಹಳ ಸುಲಭ ಅಂತೆ. ಆದರೂ, ಮಂಗಳೂರಿನಲ್ಲಿ ಕಿಸೆಗಳ್ಳರ ಕಾಟ ಕಡಿಮೆ ಇತ್ತು. (ಹಾಗೆಂದು, ಕೆಲವೊಮ್ಮೆ ಹಳ್ಳಿಗಳ ಬಸ್ ಮಾರ್ಗದಲ್ಲಿಯೂ ಕಿಸೆಗಳ್ಳತನ ಅಪರೂಪಕ್ಕೆ

ನಡೆಯುವುದಿದೆ) ಈಗ 2 ವರ್ಷಗಳ ಹಿಂದೆ ಕೂಡಾ , ನಾನು ಮಂಗಳೂರಿನ ಬಸ್ಸುಗಳಲ್ಲಿ, ಹಿಂಬದಿ ಪಾಕೇಟಿನಲ್ಲಿ ಪರ್ಸ್ ಇಟ್ಟುಕೊಂಡು ಪ್ರಯಾಣಿಸುತ್ತಿರುವ ಹುಡುಗರು/ ಯುವಕರನ್ನು ನೋಡಿದ್ದೇನೆ. ಕೆಲವರು ಅನ್ಯಮನಸ್ಕರಾಗಿರುವಾಗ, ಕಿಸೆಯಿಂದ ಪರ್ಸ್ ಅರ್ಧಬಂರ್ಧ ಹೊರ ಜಾರಿಕೊಂಡು ಇಣುಕುತ್ತಿದ್ದರೂ, ಪಕ್ಕದವರು ಎಚ್ಚರಿಸಿ ಉಪಕರಿಸಿದ್ದು ಸ್ವಂತ ಅನುಭವದಲ್ಲಿ ನೋಡಿದ್ದೇನೆ. ನಾನೂ ಕೆಲವೊಮ್ಮೆ ಬೇರೆಯವರನ್ನು ಎಚ್ಚರಿಸಿದ್ದಿದೆ.!

ನಮ್ಮ ಅಣ್ಣ ಬೆಂಗಳೂರಿನಲ್ಲಿ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು. 2003–04 ರಲ್ಲಿ ಕೆಲಸ ಹುಡುಕುವ ಸಲುವಾಗಿ ಅಲ್ಲಿಗೆ ಹೋಗಿ ಸ್ವಲ್ಪ ದಿನ ಅಲ್ಲಿ ಓಡಾಡಿದ್ದೆನು. ಬೆಂಗಳೂರಿಗೆ ಹೋಗಿ 1–2 ದಿನಗಳ ಒಳಗೆಯೇ, ಮೆಜೆಸ್ಟಿಕ್ಕಿನಿಂದ ಪೀಣ್ಯಕ್ಕೆ ಬರುವ ದಾರಿಯ ಬಿ.ಎಂ.ಟಿ.ಸಿ.  ಬಸ್ಸಿನಲ್ಲಿ, ನಾನು ಮತ್ತು ಪರ್ಸ್ ಜೊತೆಯಲ್ಲಿಯೇ ಬಸ್ಸು ಏರಿದರೂ, ನಾನು ಇಳಿಯುವಾಗ ಪರ್ಸ್ ನನ್ನ ಜೊತೆಯಲ್ಲಿರಲಿಲ್ಲ!. ನನ್ನ ಪ್ರೀತಿ ಪಾತ್ರ ಪರ್ಸ್, ಯಾರೋ ಖದೀಮನ ತುತ್ತಾಯಿತು. ಸಪ್ಪೆ ಮೋರೆಯೊಂದಿಗೆ ಮನೆಗೆ ಬಂದಾಗ, 'ಇನ್ನು ಎಂದಿಗೂ ಪರ್ಸ್ ಅನ್ನು ಹಿಂಬದಿಯ ಪಾಕೇಟಿನಲ್ಲಿ ಇಡಬೇಡ.'... ಮತ್ತು ಇತರ ಕೆಲವು ಸ್ವಂತ ಅನುಭವದ ಉಪದೇಶಗಳೂ ಸಿಕ್ಕಿದುವು.

ಮುಂದೆ ನಾನು ತುಂಬ ಜಾಗರೂಕನಾದೆ , ಅಥವಾ ಹಾಗೆಂದು ನನ್ನಷ್ಟಕ್ಕೆ ನಾನು ಅಂದುಕೊಂಡೆ. ಹಲವಾರು ಟಿಪ್ಸ್‌ಗಳನ್ನೂ ಅನುಸರಿಸಿದೆ. ಪರ್ಸ್ ಅನ್ನು ಪ್ಯಾಂಟಿನ ಮುಂಭಾಗದ ಕಿಸೆಯಲ್ಲಿ ಇಡತೊಡಗಿದೆ, ಹಿಂಭಾಗದ ಕಿಸೆಯಲ್ಲಿ ಚಿಕ್ಕ ಬಾಚಣಿಗೆ ಮಾತ್ರ ಇಡುವುದು ಇನ್ನು. ನೂರಿನ್ನೂರಕ್ಕಿಂತ ಹೆಚ್ಚಿನ ಮೊತ್ತ ಇದ್ದರೆ, ಅದನ್ನು ಪ್ಯಾಂಟಿನ ಸೀಕ್ರೆಟ್ ಪಾಕೆಟ್ ನಲ್ಲಿ ಇಡತೊಡಗಿದೆ. ಈ ಸೀಕ್ರೆಟ್ ಪಾಕೆಟ್ ಎಂದರೆ, ಪ್ಯಾಂಟಿನ ಸೊಂಟದ ಭಾಗದಲ್ಲಿ, ಒಳಭಾಗಕ್ಕೆ (ಎಂದರೆ ದೇಹದಭಾಗಕ್ಕೆ) ಇರುವ ಒಂದು ಚಿಕ್ಕ ಪಾಕೆಟ್. ಪರ್ಸ್ ಇಡಲು ಸಾಧ್ಯವಿಲ್ಲ. ದುಡ್ಡಿನ ನೋಟುಗಳನ್ನು ಇಡಬಹುದು.

2004 ನೇ ಇಸವಿ ಎಂದು ನೆನಪು. ನಾನು ಒಂದು ಕೆಲಸಕ್ಕೂ ಸೇರಿದೆ ಬೆಂಗಳೂರಿನಲ್ಲಿ. ಒಂದು ಹಾಸ್ಟೆಲ್ನಲ್ಲಿ ಊಟ, ವಸತಿ ವ್ಯವಸ್ಥೆ ಮಾಡಿಕೊಂಡಿದ್ದೆ. ಬರುವ ಚಿಕ್ಕ ಸಂಬಳ, ಹಾಗೂ ಹೀಗೂ ನನ್ನ ತಿಂಗಳ ಖರ್ಚಿಗೆ ಮಾತ್ರ ಸಾಕಾಗುವಷ್ಟು ಇತ್ತು. ಕೆಲಸಕ್ಕೆ ಸೇರಿ, 2ನೆಯೋ 3ನೆಯೋ ತಿಂಗಳು ಇರಬಹುದು, ಸಂಬಳ ಸಿಕ್ಕಿದ ಮರುದಿನವೇ ಎ.ಟಿ.ಎಂ.ನಿಂದ ನನ್ನ ಖಾತೆಯಲ್ಲಿ ಇರುವ ಪೂರ್ತಿ ಹಣವನ್ನು ತೆಗೆದುಕೊಂಡು ಪ್ಯಾಂಟಿನ ಸೀಕ್ರೆಟ್ ಪ್ಯಾಕೆಟ್ನಲ್ಲಿ ಇರಿಸಿದೆ. ತಿಂಗಳ ಶುರುವಿಗೆ, ಕಳೆದ ತಿಂಗಳ ಹಾಸ್ಟೆಲ್ ಬಾಡಿಗೆ ಕೊಡಬೇಕು, ಮತ್ತು ಬಿಎಂಟಿಸಿ ಬಸ್ಸಿನ ತಿಂಗಳ ಪಾಸ್ ಅನ್ನೂ ತೆಗೆದುಕೊಳ್ಳಬೇಕಲ್ಲವೇ? ಅದು ಹೇಗೆ ಖದೀಮರಿಗೆ ತಿಳಿಯುತ್ತದೆಯೋ..? ಬಸ್ ಪಯಣದ 45 ನಿಮಿಷದ ಬಳಿಕ ಇಳಿದಾಗ, ಪ್ಯಾಂಟಿನ ಸೊಂಟದ ಭಾಗದಲ್ಲಿ, ಸರಿಯಾಗಿ ಸೀಕ್ರೆಟ್ ಪಾಕೆಟ್ ನ ಮೇಲೆ 3 ಇಂಚು ಅಡ್ಡ ಕುಯಿತ ಆಗಿತ್ತು, .

ಗಾಬರಿಬಿದ್ದು ಬೆರಳು ತೂರಿಸಿ ನೋಡಿದೆ, ಪಾಕೆಟ್ ಖಾಲಿ..! ಮುಂಭಾಗದ ಕಿಸೆಯಲ್ಲಿ ಇಡುತ್ತಿದ್ದ ದಪ್ಪ ಪರ್ಸ್ ಹಾಗೆಯೆ ಇದೆ ! ಪೂರ್ತಿ ತಿಂಗಳ ಸಂಬಳ

ಕಳೆದುಕೊಂಡ ದುಃಖ ಮತ್ತು ಕಷ್ಟ ಹೇಳ ತೀರದು.

ಹಾಸ್ಟೆಲ್ ಗೆಳೆಯನೊಬ್ಬ ಸಂತೈಸಿದ. "ಬೇಸರ ಮಾಡಬೇಡ , ಇದಕ್ಕಿಂತ ಹೆಚ್ಚಿನದ್ದು ಆಗಲಿಲ್ಲವಲ್ಲ ಎಂದು ಸಮಾಧಾನ ಮಾಡಿಕೋ". ನಾನು ಮೊದಲೇ ಅತೀವ ಸಂಕಟದಲ್ಲಿದ್ದೆ ..."ಏನು ಇದಕ್ಕಿಂತ ಹೆಚ್ಚಿನದ್ದು.??. ಪೂರ್ತಿ ತಿಂಗಳ ಸಂಬಳ ಹೋಯಿತು ಅನ್ಯಾಯವಾಗಿ. ಇನ್ನು ಈ ತಿಂಗಳು ಸಾಲ ಮಾಡಿ ಹೇಗೋ ದಿನ ಕಳೆಯಬೇಕು, ಹಾಸ್ಟೆಲ್ ಫೀಸ್ ತುಂಬಬೇಕು.." . ಅವನಿಗೂ , ಈ ಪ್ರಕರಣದಲ್ಲಿ, ಇದಕ್ಕಿಂತ ಹೆಚ್ಚು ಎಂದರೆ ಏನು ಎಂದು ಗೊತ್ತಿರಲಿಲ್ಲ. ಯಾವುದಕ್ಕೂ ಇರಲಿ ಎಂದು " ಸಧ್ಯ, ಪ್ಯಾಂಟ್ ಹರಿಯಿತು.. ದುಡ್ಡೂ ಹೋಯಿತು ಸರಿ, ಆದರೆ ಒಳಗಿನ ಚಡ್ಡಿಯವರೆಗೆ ಅವನ ಕತ್ತರಿ ಬರಲಿಲ್ಲವಲ್ಲ ..!?" ಅನುಮೋದಿಸಲೂ, ನಿರಾಕರಿಸಲೂ ಆಗದ ಪಾಯಿಂಟು ಇದು. ನಾನು ಅಳಲೋ, ನಗಲೋ ತಿಳಿಯದೆ ಮೌನವಾದೆ.

ಅದೇ ಅವಧಿಯಲ್ಲಿ ಇನ್ನೊಂದು ಸರ್ತಿ, ಹಣವನ್ನು ಯಾವುದೇ ಕಿಸೆಯಲ್ಲಿ ಇಡದೆ, ಬೆನ್ನಿಗೆ ನೇಲಿಸುವ (ಬ್ಯಾಗ್ ಪ್ಯಾಕ್) ಬ್ಯಾಗ್ನಲ್ಲಿ ಇರಿಸಿದ್ದೆನು. ಆ ಮಾರ್ಗದ ಆರಂಭದ ನಿಲ್ದಾಣದಲ್ಲಿ ಹತ್ತುವುದರಿಂದ, ಕುಳಿತುಕೊಳ್ಳಲು ಆಸನವೂ ಸಿಕ್ಕಿತು. ಕಿಟಕಿಬದಿಯಲ್ಲ, ಒಳಗಿನ ಬದಿಯ ಆಸನ. ಕುಳಿತು, ಮಡಿಲಿನ ಮೇಲೆ ಆ ಬ್ಯಾಗನ್ನೂ ಇರಿಸಿ, ಎರಡೂ ಕೈಗಳನ್ನೂ ಅದರ ಮೇಲೆ ಇರಿಸಿ ಮೈಯೆಲ್ಲಾ ಕಣ್ಣಾದಂತೆ ಜಾಗರೂಕನಾಗಿಯೇ ಇದ್ದೆನು. ಒಂದೊಂದೇ ಸ್ಟಾಪ್ ಕಳೆದಂತೆ, ಬಸ್ಸು ಜನರಿಂದ ಭರ್ತಿಯಾಗುತ್ತ ಬಂತು. ಇಳಿಯುವುದು ಕೂಡ ಆ ಮಾರ್ಗದ ಕೊನೆಯ ಸ್ಟಾಪ್. ಎಲ್ಲರು ಇಳಿದ ಮೇಲೆ ಜಾಗರೂಕನಾಗಿ ಇಳಿಯುವ ಆಲೋಚನೆ ನನ್ನದು. ಕೊನೆ ಸ್ಟಾಪ್ ಬಂದಾಗ ನೋಡುತ್ತೇನೆ, ನನ್ನ ಬ್ಯಾಗ್ ಕೈಯಲ್ಲೇ ಇತ್ತು; ಆದರೆ ಬ್ಯಾಗಿಗೆ ಸಿಸೇರಿಯನ್ ಆಗಿತ್ತು. 4–5 ಇಂಚು ಕುಯಿದು, ಪರ್ಸ್ ಮಾತ್ರ ಒಳಗಿನಿಂದ ಎಗರಿಸಲ್ಪಟ್ಟಿತು.

ಅತೀವ ಸಂಕಟವಾಯಿತು. ಈ ಬಾರಿ ಯಾರೋ ಹೇಳಿದಂತೆ, ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆನು. ಅಲ್ಲಿಯ ಪೊಲೀಸಪ್ಪ, "ಪರ್ಸ್ ಎಲ್ಲೋ ಬೀಳಿಸಿಕೊಂಡಿರುತ್ತೀರಿ, ಆಮೇಲೆ ನಮ್ಮ ಪ್ರಾಣ ತಿಂತೀರಿ ..!" ಎಂದು ನನ್ನನ್ನೇ ಬಾಯಿ ಮುಚ್ಚಿಸಿದ. ಬ್ಯಾಗ್ ಆಪರೇಷನ್ ಆದದ್ದನ್ನು ತೋರಿಸಿದರೂ, ಪರ್ಸ್ ಅದರಲ್ಲೇ ಇತ್ತು ಎಂಬುದನ್ನು ಪೊಲೀಸಪ್ಪ ಒಪ್ಪಲಿಲ್ಲ. ಹೆಚ್ಚು ಗಟ್ಟಿಯಾಗಿ ಪೊಲೀಸಪ್ಪನ ಹತ್ತಿರ ತರ್ಕ ಮಾಡುವ ಸ್ಥಿತಿಯಲ್ಲೂ ನಾನಿರಲಿಲ್ಲ.

ಈ ಘಟನೆಗಳಲ್ಲಿ , ಜನರ ನಡುವೆಯೇ ಇದ್ದು, ಯಾರಿಗೂ ತಿಳಿಯದಂತೆ ಪರ್ಸ್ ಎಗರಿಸುವ ಚೋರ ಯಾರು ಎಂದು ತಿಳಿಯಲಿಲ್ಲ. ಆದರೆ ಇನ್ನೊಂದು ಘಟನೆ ಸ್ವಲ್ಪ ಸ್ವಾರಸ್ಯಕರವಾಗಿದೆ. ಕಣ್ಣೆದುರೇ ಕಳ್ಳನ ಕರಾಮತ್ತು ನೋಡಿ ಆಶರ್ಯಪಟ್ಟಿದ್ದಿದೆ.

ಈ ಘಟನೆಯಲ್ಲಿ ಪರ್ಸ್ ಅಲ್ಲ, ಮೊಬೈಲ್ ಕಳವಾದದ್ದು. ಸದ್ಯ, ಈ ಮೊಬೈಲ್ ನನ್ನ ಕೈಯಿಂದ ಕಳವಾದದ್ದು ಅಲ್ಲ !

ಏನಾಯಿತೆಂದರೆ, ನನ್ನ ನೆನಪಿನ ಪ್ರಕಾರ 2004 ನೇ ಇಸವಿ ಇರಬೇಕು. ಬೆಂಗಳೂರಿನ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ. ಯಥಾ ಪ್ರಕಾರ, ಒಂದು

ದಿನ ಸಂಜೆ ಕೆಲಸ ಮುಗಿಸಿ ಬಸ್ಸಿನಲ್ಲಿ ಹಿಂದಿರುಗುತ್ತಿದ್ದೆ. ಅಪರೂಪಕ್ಕೆ ಕುಳಿತುಕೊಳ್ಳುವ ಸೀಟ್ ಸಿಕ್ಕಿತ್ತು. ಕಿಟಕಿ ಬದಿಯ ಸೀಟಿನಲ್ಲಿ ಒಬ್ಬ ಅದಾಗಲೇ ಮೊಬೈಲ್ ಫೋನ್ ಕಿವಿಗಿಟ್ಟುಕೊಂಡು ಮುಖದಲ್ಲಿ ಮುಗುಳ್ನಗೆಯೂ, ಒಂದಿಷ್ಟು ಅಂಗಾಭಿನಯವೂ ಮಾಡುತ್ತ, ಕಂಗ್ಲಿಷ್ನಲ್ಲಿ ಮಾತಾಡುತ್ತಿದ್ದ. ಇವನನ್ನು ಕೆಲವು ಸಲ ಆ ಬಸ್ಸಿನಲ್ಲಿ ಅದೇ ಸೀಟಿನಲ್ಲಿ, ಅದೇ ರೀತಿ ನೋಡಿದ್ದೆ. ಸ್ವಲ್ಪ ಮುಖ ಪರಿಚಯವೂ ಇತ್ತು. ಹೆಚ್ಚು ಕಡಿಮೆ 45–50 ನಿಮಿಷ ಪ್ರಯಾಣದಲ್ಲಿ, ಆ ಮೊಬೈಲ್ ಕೆಳಗಿಡದೆ ಅದೇ ರೀತಿಯಲ್ಲಿ ಮಾತಾಡುತ್ತಿದ್ದ. ಅವನ ಪ್ರಾಯವೂ, ಆ ಮಾತಿನ ಕ್ರಮವೂ, ಮುಖಾಭಿನಯವೂ ನೋಡಿದರೆ, ಅವನು ಮಾತಾಡುವುದು ಒಬ್ಬ ಹುಡುಗಿ ಜೊತೆ ಎಂಬುದು ಸ್ಪಷ್ಟ. ಅವನನ್ನು ನೋಡುತ್ತಾ ಬಸ್ಸಿನಲ್ಲಿರುವ ಕೆಲವರೂ, ಸ್ವಲ್ಪ ಕುಚೋದ್ಯ ಮಾಡುತ್ತಿದ್ದರು. ಅವನು ಅದ್ಯಾವುದನ್ನೂ ಪರಿಗಣಿಸದೆ, ತನ್ನದೇ ಲೋಕದಲ್ಲಿ ಮುಳುಗಿದ್ದ. ಬಸ್ಸಿನಲ್ಲಿ ಸಾಕಷ್ಟು ಜನರೂ ತುಂಬಿದ್ದರು. ನಿರ್ವಾಹಕ ಜನರನ್ನು ಗದರಿಸಿ, ಹೇಗೋ ಬಾಗಿಲಿನಿಂದ ಒಳಬರುವಂತೆ ಮಾಡಿ ಸ್ವಯಂಚಾಲಿತ ಬಾಗಿಲುಗಳನ್ನು ಹಾಕಿಸಿದ. ಬೆಂಗಳೂರಿನಲ್ಲಿ ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ಬಸ್ಸುಗಳು ಮತ್ತು ಇತರ ವಾಹನಗಳು, ತೆವಳಿದಂತೆ ಅತಿ ನಿಧಾನವಾಗಿ, ಇರುವೆ ಸಾಲಿನಂತೆ ಚಲಿಸುತ್ತವೆ. ಈ ಬಸ್ಸೂ ಅತಿ ಮೆಲ್ಲಗೆ, ನಿಂತಿದೆಯೋ ಚಲಿಸುತ್ತಿದೆಯೋ ಎಂಬ ಸಂಶಯ ಬರುವಷ್ಟು ಮೆಲ್ಲನೆ ವಾಹನಗಳ ಸಂದಣಿಯಲ್ಲಿ ಏದುಸಿರು ಬಿಡುತ್ತಿತ್ತು. ಪಕ್ಕದಲ್ಲಿ ನಡೆಯುತ್ತಿದ್ದ ಜನರೂ ಇದಕ್ಕಿಂತ ವೇಗವಾಗಿ ನಡೆಯುತ್ತಿದ್ದರು. ನೋಡುತ್ತಿದ್ದ ಹಾಗೆಯೇ, ಬಸ್ಸಿನ ಹೊರಗೆ ನಡೆಯುತ್ತಿದ್ದ ಒಬ್ಬನು, ಕಿಟಕಿ ಬದಿಯಲ್ಲಿ ಕಿವಿಗೆ ಮೊಬೈಲ್ ಇಟ್ಟು ಮಾತಾಡುತ್ತಿದ್ದ ಈ ಯುವ ಮಿತ್ರನ ಕಡೆಗೆ ಬಂದು, ಕೈ ಚಾಚಿ ಆ ಮೊಬೈಲ್ ಎಳೆದುಕೊಂಡು ತನ್ನ ಕಿಸೆಯೊಳಗೆ ಹಾಕಿ ಕ್ಷಣದಲ್ಲೇ ಜನರ ನಡುವೆ ಸೇರಿ ಹೋದ!!. ನಾನೂ ಸೇರಿದಂತೆ ಕೆಲವು ಜನರು ಇದನ್ನು ನೋಡಿದ್ದೇವೆ. ಮೊಬೈಲ್ ಕಳೆದು ಕೊಂಡವನು ನಂಬಲಾರದವನಂತೆ ಅಲ್ಲೇ ಕುಳಿತೆ ಇದ್ದ. ಅವನು ಎದ್ದು ಆ ಜನ ಸಂದಣಿಯಲ್ಲಿ ಬಾಗಿಲ ಬಳಿ ಹೋಗಿ, ಸ್ವಯಂಚಾಲಿತ ಬಾಗಿಲು ತೆರೆಸಿ, ಹೊರಗೆ ಇಳಿದು ಆ ಕಳ್ಳನನ್ನು ಹುಡುಕಿ ಹಿಡಿಯುವುದು ಕನಸಿನ ಮಾತು!

ನನ್ನ ಹಾಸ್ಟೆಲ್ ಗೆಳೆಯನೊಬ್ಬ ಹೀಗೆ ಒಂದೆರಡು ಸಲ ಪರ್ಸ್ ಕಳೆದುಕೊಂಡು, ಪೂರ್ತಿ ಚೋರ ವಂಶದವರ ಮೇಲೆಯೇ ಅಪಾರ ಹಗೆ ಇಟ್ಟುಕೊಂಡಿದ್ದ. ಮಾಡುವುದಾದರೂ ಏನು? ತನ್ನ ಪರ್ಸ್ ಕದ್ದವನಲ್ಲದಿದ್ದರೂ, ಬೇರೆ ಯಾವುದಾದರೂ ಚೋರನನ್ನಾದರೂ ಬೇಸ್ತು ಬೀಳಿಸಬೇಕು ಎಂದು ಇವನು ತೀರ್ಮಾನ ಮಾಡಿದ. ಒಂದು ಬಹಳ ಹಳೆಯ ಪರ್ಸ್ ಒಂದನ್ನು ತೆಗೆದುಕೊಂಡ. ಒಂದೇ ಅಳತೆಯ ಕಾಗದ ಚೂರುಗಳನ್ನಷ್ಟು ಒಟ್ಟು ಸೇರಿಸಿದ. ಎಲ್ಲದರಲ್ಲೂ ಕನ್ನಡದಲ್ಲಿ ಅವನಿಗೆ ತಿಳಿದಿರುವಷ್ಟು ಬೈಗಳು, ಅವಾಚ್ಯ ಪದಗಳನ್ನು ಬರೆದ. ಗೊತ್ತಿಲ್ಲದ ಶಬ್ದಗಳನ್ನು ಉಳಿದ ಕೆಲವು ಉತ್ಸುಕ ಹುಡುಗರಿಂದ ಕೇಳಿ ಬರೆದ, ಏನಿಲ್ಲದಿದ್ದರೂ 50–60 ಬೈಗಳು ಶಬ್ದಗಳು ಆಗಬಹುದು ..! ಅದಲ್ಲದೆ, ಅವನಿಗೆ ಎಲ್ಲಿಯೋ ಸಿಕ್ಕಿದ ಒಂದು ಪವಾಡದ ಮುದ್ರಿತ ಚೀಟಿ.


'ಇದನ್ನು ಓದಿ ಏಳು ಜನರಿಗೆ ಇದರ ಪ್ರತಿಯನ್ನು ಮಾಡಿ ಕೊಟ್ಟರೆ ನಿಮಗೆ ಅನಿರೀಕ್ಷಿತ ಲಾಭವೂ.. ಕೊಡದಿದ್ದರೆ ಅಪಘಾತ ..ರೋಗ ಇತ್ಯಾದಿ ತೊಂದರೆಗಳೂ...' (ಹೀಗೆ ಏನೇನೋ ಅಸಂಬದ್ಧ ಬರಹಗಳಿದ್ದ ಚೀಟಿಗಳು ಅಲ್ಲೊಮ್ಮೆ ಇಲ್ಲೊಮ್ಮೆ

ಸಿಗುತ್ತಿದ್ದವು ಆ ದಿನಗಳಲ್ಲಿ. ಈಗ ಸ್ವಲ್ಪ ಆಧುನಿಕೀಕರಣಗೊಂಡು, ವ್ಯಾಟ್ಸಪ್, ಫೇಸ್ ಬುಕ್‌ನಲ್ಲಿ ಕಾಣ ಸಿಗುತ್ತವೆ. ). ಇಷ್ಟು ಸಾಲದೆಂದರೆ, ಒಂದು ಜಗಿದ ಚೂಯಿಂಗ್ ಗಮ್ ಬೇರೆ! ಅದೆಲ್ಲವನ್ನೂ ಅಚ್ಚು ಕಟ್ಟಾಗಿ ಪರ್ಸ್ ನಲ್ಲಿ ತುಂಬಿಸಿದ. ಅದನ್ನು ಹಿಂಬದಿಯ ಪ್ಯಾಕೆಟಿನಲ್ಲಿ ಇಟ್ಟುಕೊಂಡು ಬಸ್ಸು ಏರಿದ. ಅರ್ಧ ಘಂಟೆಯ ಒಳಗೆ ಪರ್ಸ್ ಎಗರಿಸಲ್ಪಟ್ಟಿತು. ಆ ದಿನ ಸಂಜೆ, ಹಾಸ್ಟೆಲಿನ ಮಿತ್ರರೆಲ್ಲರೂ, ಆ ಕಳ್ಳ ಬೈಗುಳ ಪದಗಳಿಗೆ ಹೇಗೆ ಪ್ರತಿಕ್ರಿಯಿಸಿರಬಹುದು...? ಅವನು ಆ ಪವಾಡ ಚೀಟಿ ಓದಿ ಏನು ಮಾಡಿರಬಹುದು ? ಆ ಚೂಯಿಂಗ್ ಗಮ್ ಕೈಗೆ ಅಂಟಿರಬಹುದೇ?

ಹೀಗೆ ವಿಶ್ಲೇಷಣೆಗಳಲ್ಲಿ ಸ್ವಲ್ಪ ಸಮಾಧಾನ, ರಂಜನೆ ಪಡೆದುಕೊಂಡರು. !

ಈ ಘಟನೆಗಳು ನಡೆದು ಕೆಲವು ವರ್ಷಗಳಾದುದರಿಂದ, ಕಹಿಯೂ ಕಡಿಮೆಯಾಗಿದೆ... ಕೆಲವೊಮ್ಮೆ ಒಂದು ಸ್ವಾರಸ್ಯ ಘಟನೆಯಂತೆ ಅದನ್ನು ಕಾಣಲೂ ಸಾಧ್ಯವಾಗುತ್ತಿದೆ. ಅದೂ ಒಂದು ಅನುಭವ, ಅಷ್ಟೇ. ಹೇಗಿದ್ದರೂ, ಮಧ್ಯಮ ವರ್ಗದವರಿಗೆ ದೇಶದ ನಿರ್ವಹಣೆಯಲ್ಲಿ ಮಹತ್ತರ ಪಾತ್ರವಿದೆ. ನೇರ ತೆರಿಗೆ, ಪರೋಕ್ಷ ತೆರಿಗೆ ಇರಬಹುದು, ದಂಡಗಳೂ ಇರಬಹುದು, ಅಲ್ಪ ಸ್ವಲ್ಪ ದೇಣಿಗೆಗಳನ್ನು ಕೊಡುವುದೂ ಇರಬಹುದು. ಎಲ್ಲವೂ ಮಧ್ಯಮ ವರ್ಗದವರಿಗೆ ಹೆಚ್ಚು ಸಂಬಂಧಿಸಿದ್ದು! ಇದರ ಜೊತೆಗೆ, ಮನಸ್ಸಿಲ್ಲದಿದ್ದರೂ ಹೀಗೆ ಸಾಕಷ್ಟು ಮೊತ್ತವು ಚೋರ ಮಹಾಶಯನ ಕುಟುಂಬ ನಿರ್ವಹಣೆಗೂ ಕೊಟ್ಟು ಆ ಮೂಲಕ ಪುಣ್ಯ ಸಂಪಾದನೆ ಮಾಡಿದ್ದೇನೆ ಎಂದು ನನ್ನಷ್ಟಕ್ಕೆ ಸಮಾಧಾನ ಪಟ್ಟು ಕೊಳ್ಳುತ್ತಿದ್ದೇನೆ. ■

---



# ವಟ ವಟ ಸಾವಿತ್ರಿ

●ಆರತಿ ಘಟಿಕಾರ್

"ಹೇಮಾ ! ಇವತ್ತು ಸ್ವಲ್ಪ ಹೊರಗೆ ಹೋಗ್ತಾ ಇದ್ದೀನಿ ಕಣೆ, ಬೇಗ ಬೇಗ ಕೆಲಸ ಮುಗಿಸು, ಬಾತ್‌ರೂಂ ನಾಳೆ ತೊಳಿ" ಎನ್ನುವ ಖಡಕ್ ಸೂಚನೆ ಮನೆ ಸಹಾಯಕಿಗೆ ಕೊಟ್ಟು ನಾನು ತಯಾರಾಗಲು ಕನ್ನಡಿ ಮುಂದೆ ನಿಲ್ಲುವಾಗ ಫ್ಲೀನೈಲು, ಪ್ರಿಲ್ಲು, ಹಾರ್ಪಿಕ್ ಎಲ್ಲವೂ ಸಮಿಶ್ರ ಸರಕಾರದಂತೆ  ಸೇರಿಕೊಂಡು ಭಯಂಕರ ವಾಸನೆ ಮೂಗಿಗಡರಿ ತಲೆಗಿರ್‍ರೆಂದಿತ್ತು !

ಹೇಮಾ ! ಅಸಹನೆಯಿಂದ ರೇಗುವಷ್ಟರಲ್ಲಿ "ಅಮ್ಮೋರೆ ಇವತ್ತು ಮೂರು ಬಾತ್ರೂಮ್ಗಳ್ನಾ  ಕ್ಲೀನಾಗಿ ಉಜ್ಜಿ ಮಡಗಿವ್ನಿ, ವಾಸನೆ ಬಂದ್ರೆ ಮಾಸ್ಕ್ ಹಾಕಳ್ಳಿ! ನೀವು ರೆಡಿ ಆಗೋಗಂಟ ಮುಗುಸ್‌ಕೊಡ್ತೀನಿ, ನೀವು ಹೆಂಗೂ ತಲೆ ಬಾಚಕ್ಕೇ ಅರ್ಧಗಂಟೆ ಆಯ್ತದೆ ಬುಡಿ" ಎಂದು ನನ್ನ ತಯಾರಾಗುವ  ವೈಖರಿಗಳಿಗೂ ಕನ್ನಡಿ ಹಿಡಿದು ನನ್ನ  ಸೂಚನೆಗೆ ಕ್ಯಾರೆ ಅನ್ನದೆ ಪೊರಕೆ ಹಿಡಿದು ಹೊರ ನಡೆದಳು. ಇವಳ ಮಾತಿನ ಘಾಟು ಆ ವಾಸನೆಗಿಂತ ಜೋರಾಗಿ ಬಂದರೂ ನಮ್ಮ ಮನೆಯ ಬಾತ್ ರೂಮುಗಳು ಅವಳ ಕೈಚಳಕದಿಂದ ಲಕಲಕ ಹೊಳೆಯುವ ಭಾಗ್ಯಕ್ಕೆ  ಬೇಡ ಎನ್ನಲೇಕೆ ಎಂದು ಅಡ್ಜಸ್ಟ್ ಮಾಡಿಕೊಂಡೆ .

ನಮ್ಮ ಹೇಮಾಳದು ಏತಿ ಅಂದರೆ ಪ್ರೇತಿ ಎನ್ನುವಂತ ಸ್ವಭಾವ  ! ನಲವತ್ತರ ಆಸುಪಾಸಿನ ವಯಸ್ಸು. ಲಕ್ಷಣವಾದ ಕಳೆಕಳೆಯಾದ ಮುಖ. ಒಮ್ಮೊಮ್ಮೆಅತಿಯಾದಕಾರ್ಯಕ್ಷಮತೆ ಉಕ್ಕಿ ಹರಿದು ನಾಲ್ಕು ಕೈ ಇದ್ದವಳಂತೆ ಮನೆಯಅಷ್ಟೂ ಮೂಲೆಯಲ್ಲಿ  ನನ್ನ ಕಣ್ಣಿಗೆ ಕಾಣದ ಧೂಳು ಅವಳಿಗೆ ಕಂಡು ಉದ್ದ ಕೋಲಿನ ಪೊರಕೆಯನ್ನು ಆಯುಧದಂತೆ  ಹಿಡಿದು ನಿಂತಾಗ ಅರ್ಧಗಂಟೆ ಅವಳು ನಿಂತ ಖುರ್ಚಿ ಹಿಡಿಯುತ್ತ , ಫ್ಯಾನ್ ಒರೆಸಲು ಬಟ್ಟೆ (ಹಿಂಡಿ ) ಕೊಡುತ್ತ ಅವಳ ಕೈ ಕೆಳಗೆ  ನಾನೇ ಅಸ್ಸಿಸ್ಟೆಂಟ್  ಆಗಿರುತ್ತೇನೆ  . "ಅಮ್ಮೊರೆ ಹಬ್ಬ ಬಂತಲ್ಲ! ಇವತ್ತು ಮಂಚ ಜರಗ್ಸಿ, ಗುಡಿಸಿಕೊಡ್ತತೀನಿ, ಕಾಲ್‌ಒರೆಸೋ ತಟ್ಟುಗೋಳನಾ ಮಶೀನಿಗೆ  ಹಾಕಿ ಬಿಡಿ" ಎಂದು ನನಗಿಂತ ಮುಂಚಿತವಾಗಿ ಅವಳದೇ ರೀತಿಯಲ್ಲಿ ಹಬ್ಬದಗಲಾಟೆ (ತಯಾರಿ) ಶುರವಾಗುತ್ತದೆ. ಏನೋ ಪಾಪ ತಾನಾಗಿಯೇ ಹೆಚ್ಚಿನಕೆಲ್ಸಕ್ಕೆ ಹುಮ್ಮಸ್ಸು ತೋರಿಸುತ್ತಾಳೆ ಎಂದು ಖುಷಿ ಪಡುವಷ್ಟರಲ್ಲಿ  ಮೂರು ದಿನ ಚಕ್ಕರ್ ಹೊಡೆದು ನಾಲ್ಕನೆಯ ದಿನ ಲೇಟಾಗಿ ಬಂದು " ಊರಿಗೆಓಗ್ ಬಂದಿದ್ದು ತುಂಬಾ ಸುಸ್ತು ಅಮ್ಮೊರೆ" ಎಂದು ಅರ್ಧಗಂಟೆಯಲ್ಲೇ  ಬೇಕಾ ಬಿಟ್ಟಿ ಕೆಲಸ ಮುಗಿಸಿ ಮನೆಗೋಡಿ ಬಿಡುವಳು. ಹೀಗಾಗಿ ಅವಳ ಕಾರ್ಯ ವೈಖರಿಗಳು   ನನಗಂತೂ " ಕಭಿ ಖುಷಿ ಕಭಿ ಗಮ್" ಅನುಭವವನ್ನೆ ಕೊಡುತ್ತ ಬಂದಿದೆ.

'ಅವಳ ಹೆಚ್ಚಿನ ದುಡಿತಕ್ಕೆ ಹಿಗ್ಗದೆ ಅವಳ ಬೇಕಾ ಬಿಟ್ಟಿ ಕೆಲ್ಸಕ್ಕೆ ಕುಗ್ಗದೆ' ಅವಳ ನಡವಳಿಕೆ ಸ್ವಭಾವಗಳಿಗೆ ನಾವು  ಹೊಂದಾಣಿಕೆ  ಮಾಡಿಕೊಳ್ಳುವುದರಲ್ಲೇ (ದಾಂಪತ್ಯಜೀವನದಂತೆ ) ಸುಖವಿದೆ ಎನ್ನುವ ಪಾಠ ಕಲಿಸಿದ್ದಾಳೆ.  ಜೀವನದಲ್ಲಿ ನಾವು ಆಸೆ  ಪಡುವಂತೆ ಎಲ್ಲವೂ ನಡೆಯದ್ದಿದ್ದರೂ  ನಮ್ಮ ಸ್ವಭಾವವನ್ನುಅರ್ಥ ಮಾಡಿಕೊಂಡು (ಆದಷ್ಟು ) ಸಾಮರಸ್ಯದಿಂದ ನಡೆಯುವ ಗಂಡ ಅತ್ತೆ ಸಿಕ್ಕರೆ

ಸ್ವರ್ಗಕ್ಕೆ ಮೂರೆಗೇಣು. ಇನ್ನು ಕೆಲಸದವರು ಬರಲಿಲ್ಲವೆಂದರೆ ಬೆಳಗಾಗದ ನಮ್ಮಂತವರಿಗೆ ಅದರಂತೆಯೆ ಒಳ್ಳೆಯ ಮನೆ ಸಹಾಯಕಿಯರು ಸಿಗಲಿಕ್ಕೂ ಸಹ ಅದೃಷ್ಟ ಮಾಡಿರಬೇಕು ಬಿಡಿ. ನಾವು ನಾಲ್ಕೈದು ಬಾರಿ ಮನೆ ಬದಲಾಯಿಸಿದ ಕಾರಣ ನನ್ನ ಅದೃಷ್ಟ ಪರೀಕ್ಷೆ ಚೆನ್ನಾಗಿಯೇ ಆಗಿತ್ತು .

ಹೇಮಾಳದು ಕೆಲಸದಲ್ಲಿ ಅಚ್ಚುಕಟ್ಟುತನ ಅಷ್ಟಕಷ್ಟೇ ಇದ್ದರೂ ಬಾಕಿ ವಿಷಯದಲ್ಲೇ ಅವಳ ಕಾರುಬಾರು ! "ಮಾತು ಜಾಸ್ತಿ ಕೆಲಸ ಕಡಿಮೆ" ಎಂದು ಇವಳನ್ನು ನೋಡಿಯೇ ಗಾದೆ ಮಾತು ಹುಟ್ಟಿರಬೇಕು. "ಇವತ್ತು ಶುಕ್ರುವಾರ, ಹೊಸಲಿಗೆ ಹೂ ಇಟ್ಟೆ ಇಲ್ಲ" ಎಂದು ನನ್ನ ಪೂಜಾ ವಿಧಾನದಲ್ಲಿ ಏನೇ ಮರೆತರೂ ಎತ್ತಿತೋರಿಸುವ ಅಧಿಕ ಪ್ರಸಂಗತನದಿಂದ ಹಿಡಿದು, ಅಯ್ಯ್ಯೊ! ನಿಮ್ಮ ಬಿಲ್ಡಿಂಗ್ ಸೆಕ್ಯುರಿಟಿಗಳಿಗೆ ತಲೆ ಗಿಲೆ ಐತೋ ಇಲ್ವೋ! ದಿನಾಗ್ಲೂ ನನ್ನ ಪೋಟೋ ಒಡ್ಕೊಂಡು, ಐಡಿ ತೋರಸಮ್ಮೋ ಅಂತ ಅರ್ಧಗಂಟೆ ನಿಲ್ಸೊತ್ತಾನೆ, ಅದೇನು ನನ್ನ ಮುಖ ದಿನಾಗಲೂ ನೋಡಲ್ವ ಎಷ್ಟ್ ವರ್ಷ ಆತು ಕೆಲ್ಸಕ್ಕೆ ಬತ್ತಾ ಇದ್ದೀನಿ! ಇವತ್ತು ರೇಗೆ ಬಿಟ್ಟೆ ಅಮ್ಮೊರೆ!" ಎಂದು ಝಾನ್ಸಿರಾಣಿಯಂತೆ ನಮ್ಮ ಗಾರ್ಡುಗಳನ್ನು ಝಾಡಿಸಿದ ವರಾತಗಳನ್ನು ಮನೆಯೊಳಗೆ ಕಾಲಿಡುತ್ತಲೇ ಶುರು ಹಚ್ಚುತ್ತಾಳೆ! ಹಾಗಾಗಿ ಮುಂಜಾನೆ ಹತ್ತುವರೆ ಆಯಿತೆಂದರೆಇಂಥ ಶಬ್ದ ಸ್ಫೋಟಗಳಿಗೆ ನಾನು ತಯಾರಾಗೆಇರುತ್ತೇನೆ .

ಅಂದು ಕಾಲೇಜು ಓದುವ ನನ್ನ ಮಗರಾಯನ ಕೋಣೆ ಗುಡಿಸಿ ಬಂದು "ಅಮ್ಮೊರೆ ನಿಮ್ಮ ಮಗನ್ನ ಸೂರ್ಯ ಹುಟ್ಟೋ ದಿಕ್ಕಿನಲ್ಲಿ ಕೂತು ಓದಕ್ಕೆ ಹೇಳ್ರಿ , ಒಳ್ಳೆ ಮಾರ್ಕ್ಸ್ ಬತ್ತೈತೆ , ನನ್ನ ಮೊಮ್ಮಗನ್ನಾ ಅಂಗೆ ಕೂಡಿಸಿದಕ್ಕೆ ಪಸ್ಟ್ ರ್ಯಾಂಕ್ ಬಂದವ್ನೆ" ಎಲ್ಕೆಜಿ ಓದುವ ಮೊಮ್ಮಗನ ಸಾಧನೆಯನ್ನು ಹೊಗಳುತ್ತಾ ವಾಸ್ತು ಸಲಹೆ ಹರಿ ಬಿಟ್ಟಳು . ಇವಳ ತಲೆ ಹರಟೆಗೆ ನನ್ನ ತಲೆಕೆಟ್ಟು "ಚೆನ್ನಾಗಿ ಓದಿದರೆ ಯಾವ ದಿಕ್ಕಿನಲ್ಲಿ ಕೂತರೂ ಪರವಾಗಿಲ್ಲ, ಮಾರ್ಕ್ಸು ಚೆನ್ನಾಗೆ ಬರುತ್ತೆ , ಈಗ ನೀನು ಹಿತ್ತಲ ದಿಕ್ಕಿಗ್ ಹೋಗಿ ಮೊದಲು ಪಾತ್ರೆ ತೊಳಿ". ಎಂದು ಅವಳ ಸಲಹೆಯನ್ನು ಬೇರು ಸಮೇತ ತಳ್ಳಿ ಹಾಕಿ, ಪ್ರತ್ಯುತ್ತರಗಳಿಗೂ ಅವಕಾಶ ಕೊಡದೆ ಸಾಗು ಹಾಕಿದ್ದಾಯಿತು. ಮಗರಾಯನಿಗೆ ಕೇಳಿಸಿದ್ದರೆ "ಓಹೋ ! ಹೀಗೆಲ್ಲ ಫಸ್ಟ್ ರ್ಯಾಂಕ್ ಬರೋದಿದ್ರೆ ಸೂರ್ಯನ ಜೊತೆಗೇ ಕೂತು ಕಂಬೈನ್ಡ್ ಸ್ಟಡಿ ಮಾಡ್ತೀನಿ ಬಿಡಮ್ಮ" ಎಂದು ತಮಾಷೆ ಮಾಡುವ ಪೈಕಿಯೆ ಅವನು. ಆದರೆ ಹೇಮಾಳ ಎಂಟ್ರಿ ಆದೊಡನೆಯೆ ಕಿವಿಗೆ ಹೆಡ್ ಫೋನ್ ಸಿಕ್ಕಿಸಿ ನಮ್ಮಿಬ್ಬರ ದೆಸೆಯಿಂದ ಮನೆಯಅಷ್ಟ ದಿಕ್ಕುಗಳಲ್ಲೂ ಆವರಿಸುವ ಶಬ್ದ ಮಾಲಿನ್ಯದಿಂದ ದೂರವಿದ್ದು ಒಳಗಿನ ಶಾಂತಿ ಅನುಭವಿಸುವುದರಲ್ಲಿ ತಲ್ಲೀನನಾಗಿದ್ದ.

ಒಟ್ಟಿನಲ್ಲಿ ನಾವು ಕೇಳಲಿ ಬಿಡಲಿ ಎಲ್ಲದ್ದಕ್ಕೂ ಬಿಟ್ಟಿ ಸಲಹೆ ಕೊಡುವುದರಲ್ಲಿ ನಮ್ಮ ಹೇಮಾಳದು ಎತ್ತಿದ್ದ ಕೈ, ಹರಕು ಬಾಯಿ ! ನಾನು ಕೊಟ್ಟ ದೋಸೆ ಚಪ್ಪರಿಸುತ್ತ" ಮೇಡಂಮ್ಮೊರೆ ಅಂಗೆ ರಾಗಿದೋಸೆನೂ ಆಗಾಗ ಮಾಡ್ಕೊಂಡುತಿನ್ರೀ , ಒಳ್ಳೆ ಶಕ್ತಿ ಬರುತ್ತೆ." ಎಂದು ಆರೋಗ್ಯ ತಜ್ಞೆಯಾಗುತ್ತಾಳೆ. ಕಳೆದ ವರ್ಷ ದೇಶವೇ ಲಾಕ್ ಆಗಿ ಎಲ್ಲರೂ ಮನೆಯ ಮಂತ್ರಾಲಯ ಎಂದು ವಾರದ ಸಂಡೆ ಮಂಡೆಗೋಜಿಗೆ ಹೋಗದೆ ದಿನವೂ ಕೈ ತೊಳಕೊಂಡೆ ಎನ್ನುತ್ತಾ ಜಾಗರೂಕರಾಗಿ ಇರುವಾಗ ನಮ್ಮ ಹೇಮಾಳಿಗೂ ಮೂರು ತಿಂಗಳು ರೆಸ್ಟು ಸಿಕ್ಕಿತ್ತು . ಲಾಕ್ಡೌನ್ ತೆಗೆದ

ನಂತರಅಷ್ಟೂ ದಿನದ ಮಾತಿನ ಮೂಟೆ ನನ್ನ ಮುಂದೆ ಇಳಿಸಿದ್ದಳು." ಪಾರ್ಲರ್ಗಳು ಓಪನ್ ಅಗಿಯ್ತೆ ನೋಡಿ ಮಾಡ್ಸಿ ಕೊಳ್ಳಿ ಅಮ್ಮೊರೆ, ನನಗಂತೂ ಐ ಬ್ರೋ ಶೇಪ್ ಮಾಡಿಸಲ್ಲಿಲ್ಲ ಅಂದರೆ ಕೆರತ ಬಂದು ಬಿಡತ್ತೆ ನೀವು ಅದೆಂಗಿರತ್ತೀರೋ" ಎಂದು ನನ್ನ ಹುಬ್ಬಿನ ವಿಷಯದಲ್ಲೂ ಕಾರುಬಾರು ಮಾಡಿ ನನ್ನ ಹುಬ್ಬು ಗಂಟಿಕ್ಕಿಸಿದ್ದಳು." ಇದಕ್ಕೆಲ್ಲ ನಾ ಬಿಡುವ ತಿರುಗು ಬಾಣಗಳು ಅವಳಿಗೆ ನಾಟಿದರೆತಾನೇ ! ಸುದ್ದಿ ಸಂಗ್ರಹಣೆ, ಯಾವ ಪ್ಯಾನೆಲ್ ಚರ್ಚೆಗೂ ಕಮ್ಮಿ ಇಲ್ಲದಂತ ರಾಜಕೀಯ ವಿಶ್ಲೇಷಣೆಗಳು ಅದನ್ನು ರಸವತ್ತಾಗಿ ನಿರೂಪಿಸುವ ಪರಿಗೆ ನನ್ನಎರಡು ಕಿವಿ ಒಂದುತಲೆಯನ್ನು ಅವಳ ಸುಪರ್ಧಿಗೆ ಒಪ್ಪಿಸಿ ಬಿಡುತ್ತಿದ್ದೆ.

ಈ ಬಾರಿ ಮತ್ತೆ ಕೊರೊನಾ ಹೆಮ್ಮಾರಿಯ ಅಟ್ಟಹಾಸಕ್ಕೆ ಸುದ್ದಿ ವಾಹಿನಿಗಳಲ್ಲಿ ಬಿತ್ತರವಾಗುತ್ತಿದ್ದ ಮನ ಕಲಕುವ ಸುದ್ದಿಗಳನ್ನು ಮತ್ತೊಮ್ಮೆ ನಮ್ಮ ಹೇಮಾಳ ಬಾಯಿಯಂದಲೂರಿಪೀಟ್ಟೆಲಿಕಾಸ್ಟ್ನಂತೆ ಕೇಳುವ ಪಾಡು ನನ್ನದಾಗಿರುತ್ತದೆ .ಅವಳ ಕೆಲಸ ಮಾಡುವ ಸಮಯದಲ್ಲಿ ನಾನು ದಿನಪತ್ರಿಕೆಓದುತ್ತಾ ತಲ್ಲೀನಳಾಗಿ (ಆದಂತೆ) ಕುಳಿತಿರುವಾಗ "ಅಮ್ಮೊರೆ ಟೀವಿ ನೋಡಿಲ್ವಾ , ನಮ್ಮ ಹಳ್ಳಿ ತಾವ ಅಣ್ಣಂಗೆ ಕೊರೊನಾ ಬಂದೈತೆ ಅಂತ ತಮ್ಮ ಅಣ್ಣನ್ನೇ ಕೊಲೆ ಮಾಡವ್ನಂತೆ" ಬ್ರೇಕಿಂಗ್ ನ್ಯೂಸ್ನಿಂದ ನನ್ನ ಮೌನವನ್ನು ಭಂಗ ಮಾಡಿದಳು. ಚುಟುಕಾಗಿ "ಛೆ ಪಾಪ!" ಎಂದು ಮುಗಿಸಿದರೆ ಅವಳಿಗೆಲ್ಲಿಯ ಸಮಾಧಾನ ! "ಅಮ್ಮೊರೆ ! ಈ ನಾಯಿಗೊಳು ಮೂಸಿ ನೋಡಿ ಬಾಂಬ್ ಕಂಡು ಹಿಡಿತ್ತಾವಲ್ಲ ಅಂಗೇನೆ ಜನರಿಗೆ ಕೊರೊನಾ ಐತೋ ಇಲ್ವೋ ಅಂತಾನೂ ಮೂಸಿ ನೋಡಿ ಬೊಗಳ್ತವಂತೆ ಟೀವೀಲಿ ತೋರಿಸ್ತಿದ್ರು" ಎನ್ನುವ ಸ್ವಾರಸ್ಯಕಾರಿ ವಿಷಯ ತೆಗೆದಾಗ ದಿನಪತ್ರಿಕೆ ಮುಚ್ಚಿ "ಹೌದೇನೆ ಹೇಮಾ!" ಅವಳು ತೋಡಿದಖೆಡ್ಡಾಗೆ ನಾನೇ ಬಿದ್ದು ಶುರುವಾಗೆ ಬಿಡುತ್ತದೆ ನಮ್ಮ ಮಾತಿನಜುಗಲ್ಬಂದಿ! ನನ್ನ ಕೋಣೆಯಲ್ಲಿ ಲಗುಬಗನೆ ಪೂರಕೆಯಾಡಿಸಿ "ಯಪ್ಪಾ ಟೀವೀನ್ಯಾಗೆ ಎಂತೆಂತ ಸುದ್ದಿ ತೋರ್ಸ್ತಾರಪ್ಪಾ .. ನೀವು ಟೀವಿ ಜಾಸ್ತಿ ನೋಡಬ್ಯಾಡ್ರಿ, ತಲೆಕೆಟ್ಹೋಯ್ತದೆ" ಎಂದು ಪೋರಕೆ ಹಿಡಿದು ಹೊರ ನಡೆದಾಗ ಅವಳ ಘಾಟಿತನಕ್ಕೆ ನಾನೇ ತಲೆ ಚಚ್ಚಿಕೊಳ್ಳಬೇಕು ! ನಮಗೆ ಗೊತ್ತಿರುವ ವಿಷಯಗಳನ್ನೇ ಇತರರು ಉಪದೇಶಿಸಿದಾಗ ಕಿರಿಕಿರಿಯಾಗುವುದು ಸಹಜ. ಆದರೆ ಹೇಮಾಅಂತ ಸೂಕ್ಷ್ಮಗಳ ಬಗ್ಗೆ ತಲೆ ಕೆಡಿಸಿಕೊಂಡವಳಲ್ಲ .

ಈ ರೀತಿಯ ವಾಚಾಳಿತನ ಒಂದೆಡೆಯಾದರೆ ಅವಳಲ್ಲಿ ಮೆಚ್ಚುಗೆಯಾಗುವ ಗುಣಗಳೂ ಇದ್ದವು. ಎರಡು ವರ್ಷಗಳ ಹಿಂದೆ ನಾನು ಜಾರಿಬಿದ್ದು ಮಂಡಿಚಿಪ್ಪಿ ಮುರಿದು, ಮೂರು ಬಾರಿಅದೇ ಕಾಲಿಗೆ ಆಪರೇಶನ್ಆದಕಾರಣ "ನಿಮ್ಕೈಲಿ ಆಗಕಿಲ್ಲಾ ಬುಡಿ , ಲಾಕ್ಡೌನ್ ಇದ್ರೂ ಬೆಳಿಗ್ಗೆನೆ ಬಂದುಕೆಲ್ಸಾ ಮಾಡ್ಕೊಡ್ತೀನಿ " ಎಂದು (ಆಗಾಗ ಕೆಲ್ಸಕ್ಕೆ ಚಕ್ಕರ್ ಹೊಡೆದರೂ) ಕಾಳಜಿ ತೋರಿಸಿದ್ದು ಮನಸ್ಸು ತುಂಬಿ ಬಂದಿತ್ತು. ಇವ್ವತ್ಯಾಕೋ ಸೊಂಟ ನೋವು ಕಣೆ ಎಂದಾದರೊಮ್ಮೆ ಗೊಣಗಿದರೆ "ಪೇಸ್ಬುಕ್ಕ್ಯಾಗೆ ಪೋಟೋಗೀಟೋ ಹಾಕ್ತಾ ಇರ್ತ್ತೀರಂತೆ, ನನ್ನ ಮಗಳು ಹೇಳಿದ್ಲು, ದ್ರಿಷ್ಟಿ ಆಗಿರಬೇಕು" ಎಂದಾಗ ಇವಳ ಬಾಯಿಗಂತೂ ಬ್ರೇಕ್ ಹಾಕಕ್ಕಾಗಲ್ಲ, ನನ್ನ ಫೇಸ್ಬುಕ್ ಸುದ್ದಿ ಸಮಾಚಾರಗಳ ಮೇಲೆ ಕಣ್ಣಿಟ್ಟಿರುವ ಇವಳ ಮಗಳನ್ನೇ ಬ್ಲಾಕ್ ಮಾಡಬೇಕು ಕೋಪ ಉಕ್ಕಿದರೂ ಪಾಪ ! ಒಳ್ಳೆ ಹುಡುಗಿ ನನ್ನ ಪೋಸ್ಟಿಗೆಲ್ಲಾ ಕಾಮೆಂಟ್ ಹಾಕ್ತಳಲ್ಲ ಎಂದು ಮನಸ್ಸು ಮೃದುವಾಯಿತು ಅನ್ನಿ !ಅಂದು

ಉಪ್ಪಿನಿಂದ ನನ್ನ ದೃಷ್ಟಿ ತೆಗೆದ ಮೇಲೆಯೆ ನಮ್ಮ ಹೇಮಾಳಿಗೆ ಸಮಾಧಾನ ಆಗಿದ್ದು. ಅವಳದೆ ರೀತಿಯಲ್ಲಿ ತೋರಿಸುವ ಕಕ್ಕುಲಾತಿಗೆ ಬೇಡವೆನ್ನಲಾಗಲಿಲ್ಲ .

ಮೊನ್ನೆ ನನ್ನಕತ್ತು ಉಳುಕಿ ಭಾದೆ ಪಡುವಾಗ "ಅಮ್ಮೋರೆ ಚಿನ್ನದ್ದು ಐದು ರುಪಾಯಿ ಕಾಯಿನ್ ಐತಾ ? (ಹಿತ್ತಾಳೆ ಕಾಯಿನ್ ಅವಳ ಬಾಯಲ್ಲಿ ಚಿನ್ನದ ಲೆವೆಲ್ಲಿಗೆ ಏರಿ) ಈ ನೋವಿನ ಬ್ಯಾಂಡೇಜ್ ಪಟ್ಟಿ ಯೋಳೀಕ್ ಹಾಕಿ ನಿಮ್ಮ ಕತ್ತಿಗಂಟಸ್ತೀನಿ "ನೋವೆಲ್ಲಾ ಅಂಗೆ ಹೀಕೊರ್ಂಡು ಬಿಡುತ್ತೆ" ಎಂದು ನನ್ನ ಕುತ್ತಿಗೆಗೆ ಐಯೋಡೆಕ್ಸ್ ತಿಕ್ಕಿದ್ದಳು. ಒಟ್ಟಿನಲ್ಲಿ ಅವಳ ಚಿನ್ನದ (ಕಾಯಿನ್) ಚಿಕಿತ್ಸೆಗೆ ಹೆದರಿ ಎರಡು ಮೂರು ದಿನದಲ್ಲಿ ನನ್ನ ನೋವು ಶಮನವಾಯಿತು. ಹೀಗೆ ನನ್ನ ಅಂಗಾಂಗಗಳಿಗೆ ಖರ್ಚಿಲ್ಲದೆ ಅವಳ ವಿಶೇಷ ಚಿಕಿತ್ಸೆಗಳು ಸಹ ನಡೆಯುತ್ತವೆ.

ಏನೇ ಅನ್ನಿ ಸಂಬಳದ ಹೊರತಾಗಿ ಸಾಲ ಕೊಡಿ ಎಂದು ಒಂದು ದಿನವೂ ಪೀಡಿಸದೆ, ಹಬ್ಬಹರಿದಿನಕ್ಕೆ ಖುಷಿಯಿಂದ ನಾ ಕೊಡುವ ಬಟ್ಟೆಬರೆ/ಬೋನಸ್ ಪಡೆದು ತೃಪ್ತಿ ಪಟ್ಟುಕೊಂಡವಳು. ಹುಷಾರಿಲ್ಲ ಎಂದಾಗ ಒಳಾಂಗಣ ಕೆಲಸದ ಜೊತೆಗೆ ಅಂಗಡಿ ಮಾರುಕಟ್ಟೆಯಿಂದಲೂ ಸಾಮಾನು ತಂದು ಸಮಯ ಸಂದರ್ಭಕ್ಕೆ ಸಹಾಯ ಮಾಡುವ ಒಳ್ಳೆಯ ಗುಣಗಳಿಂದಾಗಿ ಹೇಮಾಳ ವಟವಟವನ್ನು ನಾನು ಸಹಿಸಿಕೊಂಡಿದ್ದೇನೆ ಎನ್ನಬಹುದು . ■

---

# ಚಿತ್ರಗುಪ್ತನ ಸಮಸ್ಯೆ

ಒಂದು ದಿನ ಚಿತ್ರಗುಪ್ತ ಬ್ರಹ್ಮನ ಬಳಿಗೆ ಹೋಗಿ ಏಳೇಳು ಜನ್ಮಕ್ಕೂ ಈಗಿನ ಗಂಡನೇ ಸಿಗಲೆಂದು ಪ್ರಾರ್ಥಿಸಲು ಹೆಂಗಸರು ಕೈಗೊಳ್ಳುವ ವರಲಕ್ಷ್ಮೀ ವ್ರತ/ ಪೂಜಾ ಕ್ರಮವನ್ನು ನಿಲ್ಲಿಸುಂತೆ ಬ್ರಹ್ಮನನ್ನು ಕೋರಿದ.

'ಯಾಕೆ? ಎಂದು ಬ್ರಹ್ಮ ಕೇಳಿದ.

ಚಿತ್ರಗುಪ್ತ " ದೇವಾ, ಹೆಂಗಸರನ್ನು ನಿಭಾಯಿಸುವುದು ಕಷ್ಟವಾಗುತ್ತಿದೆ..ಹೆಂಡತಿಗೆ ಇದೇ ಗಂಡ ಬೇಕು,ಆದರೆ ಗಂಡನಿಗೆ ಹೊಸ ಹೆಂಡತಿ ಬೇಕು.ಇಬ್ಬರಿಗೂ ಅರ್ಥ ಮಾಡಿಸುವುದೇ ಒಂದು ಸಮಸ್ಯೆ"

ಬ್ರಹ್ಮ " ಆದರೆ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ..... ಅನಾದಿಕಾಲದಿಂದ ಅದು ನಡೆದುಕೊಂಡು ಬರುತ್ತಿದೆ". ಅಂದ

ಅಷ್ಟರಲ್ಲಿ ಅಲ್ಲಿಗೆ ಬಂದ ನಾರದ ಭೂಮಿಯಲ್ಲಿ ಚಾಣಕ್ಯನೆಂಬ ಮಹಾ ಚಾಣಾಕ್ಷನಿದ್ದಾನೆ. ಪರಿಹಾರಕ್ಕಾಗಿ ಅವನನ್ನು ಕೇಳಿ ಎಂದು ಸಲಹೆ ನೀಡಿದ

ಚಿತ್ರಗುಪ್ತ ಚಾಣಕ್ಯನನ್ನು ಭೇಟಿ ಮಾಡಿದ

ಚಾಣಕ್ಯ ಒಂದು ನಿಮಿಷದಲ್ಲಿ ಸಮಸ್ಯೆಯನ್ನು ಬಗೆಹರಿಸಿ " ಯಾವ ಹೆಂಡತಿ ಇದೇ ಗಂಡ ಬೇಕು ಎಂದು ಹೇಳುತ್ತಾಳೋ ಅವಳಿಗೆ ಇದೇ ಅತ್ತೆ ಏಳೇಳು ಜನ್ಮಕ್ಕೂ ಸಿಗುತ್ತಾಳೆ ಎಂದು ಹೇಳು ಅಂತ ಸಲಹೆ ನೀಡಿದ.

ಎಲ್ಲಾ ಹೆಂಗಸರೂ ಕಿರುಚಿದರು " ಓ ದೇವರೇ ಬೇಡಪ್ಪಾ ಬೇಡ !!!"

'ಸಮಸ್ಯೆ ಸುಲಭವಾಗಿ ಬಗೆಹರಿಯಿತು – ನೊ ಬಿಪಿ ಬಿ ಹ್ಯಾಪಿ

(ಕೃಪೆ : ವಾಟ್ಸಪ್)